# ಒಳಪುಟಗಳಲ್ಲಿ .....!!


| ವಿವರ | | ಕ್ರಮ ಸಂಖ್ಯೆ |
|---|---|---|
| ಸಂಪಾದಕೀಯ | ವಂ. ಡೇವಿಡ್ ಪ್ರಕಾಶ್ | 5 |
| ವಿಶ್ವಗುರು ಬೆನೆಡಿಕ್ಟ್ XVI (16ರ) ತಪಸ್ಸು ಕಾಲದ ಸಂದೇಶ | | 6 |
| ಧರ್ಮಾಧ್ಯಕ್ಷರ ಸಂದೇಶ | | 9 |
| ಬೈಬಲ್ ಜ್ಯೋತಿ | ಡಾ. ಲೀಲಾವತಿ ದೇವದಾಸ್ | 10 |
| ವಿಜ್ಞಾನ ಜ್ಯೋತಿ | ಆರ್. ಜ್ಞಾನಪ್ರಕಾಶ್ | 11 |
| ಆರೋಗ್ಯ ಜ್ಯೋತಿ | ಡಾ. ಸಿ. ಎನ್. ಜಗದೀಶ್ | 12 |
| ಯುವ ಜ್ಯೋತಿ | ಆನಂದ್ ಎಸ್.ಡಿ.ಬಿ. | 13 |
| ಕಥಾ ಜ್ಯೋತಿ | ವಿನ್ನಿಫ್ರೆಡ್‌ರೆಗೋ | 14 |
| ಸಂತ ಜೋಸೆಫ್ - ಕಾರ್ಮೆಲ್ ಸಭೆ | | 15 |
| ಪ್ರೇರಣಾ ಜ್ಯೋತಿ | ಫಿಲೋಮಿನ ಮೊರಾಸ್ | 16 |
| ಶೋಷಿತ ಮಹಿಳೆ ಸಮಾನತೆಯೆಡೆಗೆ | ವಿನ್ಸೆಂಟ್ ಸಿಕ್ವೇರಾ | 18 |
| ಪಾಸ್ಕ ಕಾಲದಲ್ಲಿ ನನ್ನ ವಿಶ್ವಾಸ | ಸಹೋ. ರೋಯ್ಸ್ಟರ್ ಮೋನಿಸ್ | 21 |
| ನೆನಪಿನ ಬುತ್ತಿಯಿಂದ - 1 | ಸಹೋ. ಅನಿಲ್‌ಕುಮಾರ್ | 22 |
| ಕಣ್ಣೀರಿಟ್ಟು ಕನಲುತ್ತಿರುವ ಮಹಿಳೆ | ಸಹೋ. ರೋಷನ್ ಎಸ್. | 24 |
| ಬದಲಾವಣೆಯ ಬಿರುಗಾಳಿ ಬೆನೆಡಿಕ್ಟ್ | | 25 |
| ಮೃತ್ಯೋರ್ಮಾ ಅಮೃತಂಗಮಯಾ | | 27 |
| ಅಲ್ಪಾವಧಿಯ ಪೋಪ್, ದೀರ್ಘಾವಧಿಯ ವರ್ಚಸ್ಸು | ವಂ. ರಿಚರ್ಡ್ ಪಾಯ್ಸ್ | 29 |
| ಪ್ರದೇಶ ವಿಶೇಷ } | ವಂ. ಚಾರ್ಲ್ಸ್ ಪಿರೇರಾ | 29 |
| ವಿದೇಶ ವಿಶೇಷ } | | 30 |
| ಕಾವ್ಯ ಜ್ಯೋತಿ } | ಸಹೋ. ಫ್ರಾನ್ಸಿಸ್ | |


## ಮಾರ್ಚ್ ತಿಂಗಳ ಧರ್ಮಾಧ್ಯಕ್ಷರ ಕಾರ್ಯಕ್ರಮಗಳು

| ದಿನಾಂಕ | ದಿನ | ಸಮಯ | ವಿವರ |
|---|---|---|---|
| 2-3-2013 | ಶನಿವಾರ | ಬೆಳಿಗ್ಗೆ 6.45ಕ್ಕೆ | ದಿವ್ಯಬಲಿಪೂಜೆ, ಸಂತ ಜೋಸೆಫರ ಗುರುಮಂದಿರ, ಚಿಕ್ಕಮಗಳೂರು. |
| 4-3-2013<br>5-3-2013 | ಸೋಮವಾರ | | ಪೂಜಾಗ್ರಂಥದ ಭಾಷಾಂತರ ಸಮಿತಿ ಸಭೆ, ಒ.ಡಿ.ಪಿ., ಮೈಸೂರು |
| 6-3-2013 | ಬುಧವಾರ | ಬೆಳಿಗ್ಗೆ 10ಕ್ಕೆ | ಧರ್ಮಕ್ಷೇತ್ರದ ಪ್ರೇಷಿತಾ ಸೇವಾ ಆಯೋಗಳ ಕಾರ್ಯದರ್ಶಿ ಮತ್ತು ಸಹಕಾರ್ಯ ದರ್ಶಿಗಳ ಸಭೆ, (ವಿಶ್ವಾಸ ಹಾಗೂ ಜ್ಯೂಬಿಲಿ ವರ್ಷದ ಪ್ರಯುಕ್ತ) ಜ್ಯೋತಿನಿಲಯ, ಚಿಕ್ಕಮಗಳೂರು. |
| 7-3-2013 | ಗುರುವಾರ | ಬೆಳಿಗ್ಗೆ 10ಕ್ಕೆ | ಸರ್ವಸದಸ್ಯರ ಸಭೆ, ಸೇವಾಸಂಸ್ಥೆ, ಹಾಸನ |
| 9-3-2013 | ಶನಿವಾರ | ಅಪರಾಹ್ನ 3ಕ್ಕೆ | ಕಾಲೇಜು ವಾರ್ಷಿಕೋತ್ಸವ, ಸಂತ ಫಿಲೋಮಿನಾ ಕಾಲೇಜು, ಹಾಸನ |
| 10-3-2013 | ಭಾನುವಾರ | ಬೆಳಿಗ್ಗೆ 10ಕ್ಕೆ | ಪಾಲನಾ ಭೇಟಿ, ಹೊಳೇನರಸಿಪುರ. |
| 17-3-2013 | ಭಾನುವಾರ | ಬೆಳಿಗ್ಗೆ 10.30ಕ್ಕೆ | ದಿವ್ಯಬಲಿಪೂಜೆ, ಸಂಸೆ, ಕಳಸ. |
| 24-3-2013 | ಭಾನುವಾರ | ಬೆಳಿಗ್ಗೆ 8.30ಕ್ಕೆ | ಗರಿಗಳ ಭಾನುವಾರ, ದಿವ್ಯಬಲಿಪೂಜೆ, ಪ್ರಧಾನಾಲಯ |
| 25-3-2013 | ಸೋಮವಾರ | ಬೆಳಿಗ್ಗೆ 10ಕ್ಕೆ | ಗುರುಗಳ ಧ್ಯಾನಕೂಟ, ಸಂತ ಜೋಸೆಫರ ಗುರುಮಂದಿರ, ಚಿಕ್ಕಮಗಳೂರು |
| 25-3-2013 | ಸೋಮವಾರ | ಸಂಜೆ 6ಕ್ಕೆ | ಪವಿತ್ರ ತೈಲಗಳ ಪವಿತ್ರೀಕರಣದ ಬಲಿಪೂಜೆ, ಪ್ರಧಾನಾಲಯ |
| 28-3-2013 | ಪ. ಗುರುವಾರ | ಸಂಜೆ 6ಕ್ಕೆ | ಶಿಷ್ಯರ ಪಾದಸ್ನಾನ, ದಿವ್ಯಬಲಿಪೂಜೆ, ಪ್ರಧಾನಾಲಯ, ಚಿಕ್ಕಮಗಳೂರು. |
| 29-3-2013 | ಪ. ಶನಿವಾರ | ರಾತ್ರಿ 11.30ಕ್ಕೆ | ಪಾಸ್ಕ ಜಾಗರಣಾ ಬಲಿಪೂಜೆ, ಪ್ರಧಾನಾಲಯ, ಚಿಕ್ಕಮಗಳೂರು |
| 31-3-2013 | ಪಾಸ್ಕ ಭಾನುವಾರ | ಬೆಳಿಗ್ಗೆ 10.30ಕ್ಕೆ | ದಿವ್ಯಬಲಿಪೂಜೆ, ಕೂದುವಳ್ಳಿ |
| 3-4-2013 | ಬುಧವಾರ | ಬೆಳಿಗ್ಗೆ 10ಕ್ಕೆ | ನವೀಕೃತ ದೇವಾಲಯದ ಆಶೀರ್ವಚನ, ಕೊಟ್ಟಿಗೆಹಾರ ಉಪಕೇಂದ್ರ, ಬಣಕಲ್ |
| 5-4-2013 | ಶುಕ್ರವಾರ | ಬೆಳಿಗ್ಗೆ 6.45ಕ್ಕೆ | ದಿವ್ಯ ಬಲಿಪೂಜೆ, ಸಂತ ಜೋಸೆಫರ ಗುರುಮಂದಿರ, ಚಿಕ್ಕಮಗಳೂರು |

ಬೇರೆಯವರ ದೋಷಗಳ ಬಗ್ಗೆ ಹೆಚ್ಚು ಗಮನ ಕೊಡಬಾರದು

ಸ್ನೇಹಜ್ಯೋತಿ

**ಮನೆ - ಮನಗಳ**

**ಮಾಸ ಪತ್ರಿಕೆ**

ಸ್ನೇಹಜ್ಯೋತಿ ಟ್ರಸ್ಟ್
ಜ್ಯೋತಿ ನಿಲಯ,
ಜ್ಯೋತಿನಗರ ಅಂಚೆ,
ಚಿಕ್ಕಮಗಳೂರು - 577 102
ದೂರವಾಣಿ
ಸಂಖ್ಯೆ: (08262) 220389
E-mail : Sj_ckm@yahoo.co.in
www.chikmagalurdiocese.com

(ಚೆಕ್, ಡಿ.ಡಿ. ಹಾಗೂ ಎಂ.ಒ. ಮೂಲಕ ಜಾಹೀರಾತು ಮತ್ತು ಚಂದಾ ಹಣ ನೀಡುವವರು ಮೇಲಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.)

*ಸಂಪಾದಕರು ಮತ್ತು ಪ್ರಕಾಶಕರು*

**ವಂ. ಡೇವಿಡ್ ಪ್ರಕಾಶ್** M.A., (Eng) PGDHRM.
ದೂರವಾಣಿ:
ಸಂಖ್ಯೆ: (08262) 221444
ಮೊಬೈಲ್ : 94482 00977


**ಚಂದಾ ವಿವರ**

| | | | |
|---|---|---|---|
| 1ವರ್ಷಕ್ಕೆ | : | ರೂ. | 75 |
| 2 ವರ್ಷಕ್ಕೆ | : | ರೂ. | 150 |
| 3 ವರ್ಷಕ್ಕೆ | : | ರೂ. | 225 |
| 6 ವರ್ಷಕ್ಕೆ | : | ರೂ. | 450 |
| ಅಜೀವ ಸದಸ್ಯತ್ವ | : | ರೂ. | 1000 |
| ಹಿತ ಚಿಂತಕರು | : | ರೂ. | 3000 |
| ಪೋಷಕ ಸದಸ್ಯತ್ವ | : | ರೂ. | 5000 |

**ಜಾಹೀರಾತು ದರ**

| | | | |
|---|---|---|---|
| ಹಿಂಬದಿ ರಕ್ಷಾಪುಟ | : | ರೂ. | 3000 |
| ಒಳಪುಟ | : | ರೂ. | 2000 |
| ಅರ್ಧಪುಟ | : | ರೂ. | 750 |
| ಕಾಲು ಪುಟ, | | | |
| ಪುಟ್ಟ ಜಾಹೀರಾತು | : | ರೂ. | 300 |

# ಕಾವ್ಯ ಜ್ಯೋತಿ...



ನನ್ನ ಕಡುಗೆಂಪು ಪಾಪಕ್ಕಾಗಿ, ನನ್ನ ವಿಮೋಚನೆಗಾಗಿ
ದೇವಪುತ್ರ ಯೇಸುಕ್ರಿಸ್ತ ಶಿಲುಬೆ ಹೊತ್ತರು
ಯೇಸು ಶಿಲುಬೆ ಹೊತ್ತರು
ನನ್ನ ಮೇಲಿನ ಪ್ರೀತಿಗಾಗಿ, ನನ್ನ ಮೇಲಕ್ಕೆತ್ತಲಾಗಿ
ಜಗದ ಕರ್ತ ಯೇಸುಕ್ರಿಸ್ತ ಜೀವತೆತ್ತರು.
ಯೇಸು ಜೀವತೆತ್ತರು.

ದೇವ ತಂದೆಯ ಪುತ್ರ, ಪಾಪಿಗಳ ಮಿತ್ರ
ಸಕಲ ಜೀವಸಂಕುಲದ ಪರಿಪಾಲಕ
ಸರ್ವರೋಗ ಬಾಧೆಗಳ ಪರಿಹಾರಕ, ಯೇಸು ನಮ್ಮ ರಕ್ಷಕ.

ನೀವೇ ನಮ್ಮ ಅರಸ, ನೀವೇ ನಮ್ಮ ಒಡೆಯ
ಎಂದು ಅಂದು ನುಡಿದವರೇ ಕೊಲ್ಲಿರೆಂದರು
ಬರಬ್ಬನನ್ನು ನಮಗೆ ಬಿಟ್ಟು ಕೊಡಿರಿ ಎಂದರು, ಯೇಸುವ
ನಿಂದಿಸಿದರು.

ಜಗದ ಜನರ ಸರ್ವ ಪಾಪಕ್ಕೆ, ಅವರ ಮೇಲಿನ ಪ್ರೀತಿ ಪ್ರೇಮಕೆ
ಕ್ಷಮಾದಾನಿ ಯೇಸು ಪ್ರಭುವು ಹೊಡೆಯಲ್ಪಟ್ಟರು
ಕ್ರೂರವಾಗಿ ಶಿಲುಭೆಯಲ್ಲಿ ಜಡಿಯಲ್ಪಟ್ಟರು, ಯೇಸು ಜಡಿಯಲ್ಪಟ್ಟರು

ಪಿತನ ಆಜ್ಞೆ ಪಾಲಿಸಲು ಸಹಿಸಲಾರದ ನೋವನುಂಡರು
ತನ್ನ ತಾಯಿಯ ಶಿಷ್ಯನಿಗೆ ಧಾರೆಯೆರೆದರು,
ಇಗೋ ನಿನ್ನ ತಾಯಿಯೆಂದು ಕಣ್ಣೀರಿಟ್ಟರು
ಯೇಸು ಮರುಕಪಟ್ಟರು.

ಕ್ಷಮಿಸಿವರನು ತಂದೆ, ಅರಿಯರಿವರು ತಮ್ಮ ಪಾಪವ
ಎಂದು ನುಡಿಯುತ ಎಲ್ಲರನ್ನೂ ಮನ್ನಿಸಿದರು
ಎಲ್ಲವೂ ಮುಗಿಯಿತೆಂದು ಪ್ರಾಣಬಿಟ್ಟರು, ಯೇಸು ಪ್ರಾಣಬಿಟ್ಟರು

ವಂದನೆ ದೇವಾ ನಿಮ್ಮ ಪ್ರಾಣ ತ್ಯಾಗಕ್ಕೆ
ಕ್ಷಮಿಸಿರಿ ನಮ್ಮನ್ನು ಪಾಪಿಗಳು ನಾವ್
ಕಲಿಸಿರಿ ನಮಗೆ ನಿಮ್ಮ ತಾಳ್ಮೆಯ, ನಿಮ್ಮ ಕ್ಷಮೆಯ.

*- ಸಹೋದರ ಫ್ರಾನ್ಸಿಸ್, ಗಾಡೇನಹಳ್ಳಿ.*



ನಿಮ್ಮ ತೃಪ್ತಿಗಾಗಿ ತಿನ್ನಿ, ಮತ್ತೊಬ್ಬರ ತೃಪ್ತಿಗಾಗಿ ಒಳ್ಳೆಯ ಬಟ್ಟೆ ಧರಿಸಿ



# ದೇಹದಲ್ಲಿರುವ ತನಕ ಶ್ವಾಸ ನಮ್ಮಲ್ಲಿರಲಿ ಅತ್ಯಧಿಕ ವಿಶ್ವಾಸ




ಈ ಲೋಕದ ದೃಷ್ಟಿಯಲ್ಲಿ ಮಾನವನ ಬದುಕು ಬೆತ್ತಲೆಯಲ್ಲಿ ಬೆಳೆಯುತ್ತದೆ ಕತ್ತಲೆಯಲ್ಲಿ ಕರಗುತ್ತದೆ. ಹೀಗೆ ಬೆತ್ತಲೆ - ಕತ್ತಲೆಯಲ್ಲಿ ಹುಟ್ಟಿ ಸಾಯುವ ಮಾನವನ ಮತಿಗೆ ಸಾವಿನಾಚೆಗಿನ ಸ್ವರ್ಗದ ಬದುಕು ಬಹು ದೊಡ್ಡ ಸವಾಲೆನಿಸುತ್ತದೆ. ಸಂದೇಹಕ್ಕೆ ಎಡೆ ಮಾಡಿ ಕೊಡುತ್ತದೆ. ಆದರೆ ಮೌನ - ಶೂನ್ಯಗಳ, ಸಾವು ನೋವುಗಳ ನಿರ್ಲಿಪ್ತತೆ - ನೀರವತೆಗಳ ಎಲ್ಲೆ ಮೀರಿದ ವಿಶ್ವಾಸದ ಕಣ್ಣುಗಳಿಗೆ ಮಾತ್ರ ಇದು ಗೋಚರವಾಗುತ್ತದೆ. ಇಂತಹ ಸತ್ಯವನ್ನು ವಿಶ್ವಾಸಿಸಿ ಬೋಧಿಸುವ, ಪ್ರಕಟಿಸುವ ತಾಯಿ ಧರ್ಮಸಭೆ ಪ್ರಭು ಕ್ರಿಸ್ತರ ಪುನರುತ್ಥಾನದ ಭದ್ರ ಬುನಾದಿಯ ಮೇಲೆ ನಿಂತಿದೆ, ಇದೇ ವಿಶ್ವಾಸದ ಹಾದಿಯಲ್ಲಿ ಸಾಗುತ್ತಿದೆ.

ಶಿಲುಬೆಯ ಮೇಲೆ ಯೇಸು ಬೆತ್ತಲಾಗಿ ಮಡಿದಾಗ ಆ ನಾಡಿನಲ್ಲೆಲ್ಲಾ, ಆ ಜನರಲ್ಲೆಲ್ಲಾ ಕಾರ್ಗತ್ತಲು ಕವಿಯಿತು. ಮಹಾನ್ ಅರಸರಂತೆ ಜೆರುಸಲೇಮ್ ನಗರವನ್ನು ಪ್ರವೇಶಿಸಿದ ಯೇಸು ಒಬ್ಬ ಮಹಾನ್ ಅಪರಾಧಿಯಂತೆ ಸಾವಿಗೆ ಒಳಗಾಗಿದ್ದು ಅನೇಕರಲ್ಲಿ ನಿರಾಸೆ ಮೂಡಿಸಿತ್ತು. ಆ ಕೊನೆ ಗಳಿಗೆಯಲ್ಲೂ ಯೇಸು ಪವಾಡಗಳನ್ನು ಮಾಡಬಹುದೆಂದು ನಿರೀಕ್ಷಿಸಿದವರು ದುರಂತವನ್ನು ಕಂಡವರಂತೆ ಕಂಗಾಲಾದರು. ಹೆದರಿಕೆ ಅಂಜಿಕೆಗಳಿಗೆ ಬಲಿಯಾದ ಶಿಷ್ಯರು 'ಪಲಾಯನವಾದ' ಕ್ಕೆ ಶರಣಾದರು. ಮಣ್ಣಲ್ಲಿ ಮಣ್ಣಾಗಲಿದ್ದ ಯೇಸುವಿನ ಮೃತ ಶರೀರವನ್ನು ಕಂಡ ಎಷ್ಟೋ ಜನರ ಬಿಡುಗಡೆಯ ಕನಸುಗಳು ಸಹ ಅಲ್ಲಿಯೇ ಮಣ್ಣಾಗಿ ಹೋದವು. ಅಬ್ಬರ ಆರ್ಭಟಗಳೊಂದಿಗೆ, ಕೂಗಾಟ - ಚೀರಾಟಗಳೊಂದಿಗೆ ಯೇಸುವನ್ನು ಕೊಂದ ಕ್ರೂರ ಸಿಪಾಯಿಗಳು, ಪ್ರಧಾನ ಯಾಜಕರು, ಧರ್ಮಶಾಸ್ತ್ರಿಗಳು, ಸಭಾ ಪ್ರಮುಖರು, ಇವರೊಂದಿಗೆ ಜೊತೆಗೂಡಿ ಇತರೆ ಯೆಹೂದ್ಯರು ಹಿರಿ ಹಿರಿ ಹಿಗ್ಗುತ್ತಾ, ಕುಹಕ ನಗೆ ಬೀರುತ್ತಾ, ಕೇಕೆ ಹಾಕುತ್ತಾ ಮನೆಗೆ ತೆರಳಿದರು. ಇವರೊಂದಿಗೆ ಎಲ್ಲವೂ ಮುಗಿಯಿತೆಂದೇ ಅವರೆಲ್ಲರೂ ಭಾವಿಸಿದರು. ಏಕೆಂದರೆ ಸಾವಿರ ಅವತಾರವೆತ್ತಿದ್ದ ಸೈತಾನ ಅಷ್ಟು ಜನರ ಆರ್ಭಟ, ಧಿಕ್ಕಾರ, ಕೇಕೆಗಳ ಮೂಲಕ ಹುಚ್ಚೆದ್ದು ಕುಣಿದಿದ್ದ. ಮೂರು ವರ್ಷಗಳ ಮಹಾ ಶೋಧನೆ ಫಲಿಸಿತೆಂದು ಸಂತೃಪ್ತನಾಗಿದ್ದ.

ಯೇಸುವಿನ ಮೃತ ದೇಹ ಸಮಾಧಿ ಸೇರಿತು. ಆ ಸಮಾಧಿಯ ದ್ವಾರವನ್ನು ದೊಡ್ಡ ಕಲ್ಲೊಂದರಿಂದ ಮುಚ್ಚಲಾಯಿತು. ಆ ಕಲ್ಲಿಗೆ ಮುದ್ರೆ ಬಿದ್ದಿತು. ಇಡೀ ಸಮಾಧಿಗೆ ಸೈನಿಕರ ಕಾವಲು ಸಹ ಇದ್ದಿತು. ಕೇವಲ ಸತ್ತ ಶರೀರಕ್ಕೆ ಇಷ್ಟೊಂದು ಭದ್ರತೆಯೇ ? ಹೌದು ಸಮಾಧಿ ಸೇರಿದ ಆ ಮೃತ ದೇಹ ಸಂಪೂರ್ಣ ನಾಶವಾಗಬೇಕು. ಮಣ್ಣಲ್ಲಿ ಮಣ್ಣಾಗಬೇಕು. ಅದಕ್ಕಾಗಿಯೆ ಇಷ್ಟೆಲ್ಲಾ ಭದ್ರತೆ ! ಸೈತಾನ ಇಷ್ಟು ಸೂಕ್ಷ್ಮವಾಗಿ ಕೆಲಸ ನಿರ್ವಹಿಸಿದ್ದ. ಶತ್ರುಗಳೆಲ್ಲಾ ಜಯದ ಅಮಲಿನಲ್ಲಿದ್ದರು. ಸೈತಾನನಂತೂ ಸರ್ವವನ್ನು ಜಯಿಸಿದಷ್ಟು ಸಂತೋಷದಲ್ಲಿದ್ದ. ಆದ್ದರಿಂದಲೇ ಅವನ ಸುಖ ನಿದ್ರೆಗೆ ಶರಣಾದ. ಮೂರು ದಿನಗಳವರೆಗೆ ಮಾತ್ರ ಆತನ ಜಯಭೇರಿ ಮೊಳಗುತಲಿತ್ತು.

ಆದರೆ ಇನ್ನೊಂದು ಅರ್ಥದಲ್ಲಿ ಎಲ್ಲವೂ ಮುಗಿದಿರಲ್ಲಿಲ್ಲ. ಅದು ಯೇಸು ಕ್ರಿಸ್ತರಿಗೂ, ಅವರ ಮಾತೆ ಮರಿಯಮ್ಮನವರಿಗೂ ಅವರ ನೈಜ ಹಿಂಬಾಲಕರಲ್ಲಿ ಕೆಲವರಿಗೂ ತಿಳಿದಿತ್ತು. ಆ ದೇವಾದಿ ದೇವರ ನೈಜ ಸಂಕಲ್ಪ ಇವರಿಗೆಲ್ಲಾ ಗೋಚರಿಸಿತ್ತು. ಅದೇನೆಂದರೆ ದೈವೀ ಯೋಜನೆಯಂತೆ ಆಗಲೇಬೇಕಾದ್ದ ಎಲ್ಲವೂ ಮುಗಿದ ಮೇಲೆ, ಉಳಿದುದೆಲ್ಲವೂ ದೇವಲೀಲೆ, ಅದೇ ಪುನರುತ್ಥಾನದ ಜಯಮಾಲೆ. ಆದ್ದರಿಂದಲೇ ಸತ್ತು ಸಮಾಧಿ ಸೇರಿದ ಕ್ರಿಸ್ತರಿಗೆ ಸಾವೇ ಕೊನೆಯಾಗಲಿಲ್ಲ. ಅವರು ಸತ್ತವರೊಳಗಿಂದ ಸಜೀವವಾಗಿ ಎದ್ದು ಬಂದರು. ಸಾಯುವವರಿಗೂ, ಸತ್ತಂತೆ ಬದುಕುವವರಿಗೂ ಭರವಸೆಯ ಕಿರಣವಾದರು. ಸೂರ್ಯನಂತೆ ಪ್ರಕಾಶಿಸುತ್ತಾ, ಬಿಳಿ ವಸ್ತ್ರದಂತೆ ಶುಭ್ರವಾಗಿ ಕಂಗೊಳಿಸುತ್ತಾ ತಮ್ಮ ದಿವ್ಯ ತೇಜಸ್ಸನ್ನು, ಮಹಿಮಾ ರೂಪವನ್ನು ಪ್ರಕಟಪಡಿಸಿದರು.

ದಿನನಿತ್ಯದ ಪ್ರಲೋಭನೆಗಳಿಗೆ ಒಳಗಾಗಿ, ಅನುದಿನದ ಶಿಲುಬೆಗಳನ್ನೊತ್ತು ಸಾಗುವ ನಮಗೆ ಮೃತ್ಯುಂಜಯರಾದ ಪ್ರಭು ಯೇಸುಕ್ರಿಸ್ತರೇ ಅತ್ಯುತ್ತಮ ಮಾದರಿ. ಅವರ ಮಹಿಮಾನ್ವಿತ ಪುನರುತ್ಥಾನವೇ ನಮಗೆ ಗೋಚರಿಸುವ ಸರಿದಾರಿ. ಇದರತ್ತ ಸಾಗುವುದೇ ನಮ್ಮ ದೈನ್ಯಂದಿನ ಕ್ರೈಸ್ತ ಜೀವನದ ನೈಜ ಗುರಿ. ಹೀಗಿರುವಾಗ ಪುನರುತ್ಥಾನರಾದ ವಿಜಯಿ ಕ್ರಿಸ್ತರಲ್ಲಿ, ಈ ವಿಶ್ವಾಸದ ವರ್ಷದಲ್ಲಿ ನಮ್ಮ ಅಚಲವಾದ, ಅತ್ಯಧಿಕವಾದ ವಿಶ್ವಾಸ ವ್ಯಕ್ತವಾಗಲಿ. ಇದೇ ನಮ ಕ್ರೈಸ್ತ ಬದುಕಿಗೆ ಶ್ವಾಸವಾಗಲಿ. ಇಂಥಹ ನಂಬಿಕೆಯ ಜೀವನ, ತರಲಿ ನಮಗೆ ಉಪಶಮನ. ಅದಗಾಲಿ ಪರಲೋಕದ ಬಾಳಿಗೆ ಸೋಪಾನ. ತಮಗೆಲ್ಲರಿಗೂ ಪಾಸ್ಕ ಹಬ್ಬದ ಹಾರ್ದಿಕ ಶುಭಾಶಯಗಳು.

**- ವಂ. ಡೇವಿಡ್ ಪ್ರಕಾಶ್, ಚಿಕ್ಕಮಗಳೂರು.**

❖

ನಮ್ಮೆಲ್ಲಾ ಆತ್ಮೀಯ ಓದುಗರಿಗೆ, ಲೇಖಕರಿಗೆ, ಜಾಹೀರಾತುದಾರರಿಗೆ ಮತ್ತು ಸಹೃದಯಿ ಹಿತೈಷಿಗಳಿಗೆ ಪಾಸ್ಕ ಹಬ್ಬದ ಹಾರ್ದಿಕ ಶುಭಾಶಯಗಳು.

**- ಸಂಪಾದಕ ಮತ್ತು ಸ್ನೇಹಜ್ಯೋತಿ ಬಳಗ**

ದೂರದಲ್ಲಿರುವುದರ ಬಗ್ಗೆ ಕಣ್ಣಿಟ್ಟು ಹತ್ತಿರದಲ್ಲಿರುವುದನ್ನು ಕಡೆಗಣಿಸಬೇಡ



## ವಿಶ್ವಗುರು ಬೆನೆಡಿಕ್ಟ್ XVI (16ರ) ತಪಸ್ಸು ಕಾಲದ ಸಂದೇಶ

## ವ್ಯಾಟಿಕಾನ್ ಮಹಾನಗರ, ಫೆಬ್ರವರಿ 1, 2013

# ಪ್ರೇಮಾನುರಾಗದಲ್ಲಿ ವಿಶ್ವಾಸವಿದ್ದರೆ ಪ್ರೀತಿಯ ಕರೆ

''ದೇವರು ನಮ್ಮಲ್ಲಿಟ್ಟಿರುವ ಪ್ರೀತಿ ನಮಗೆ ಗೊತ್ತಿದೆ; ಅದರಲ್ಲಿ ನಮಗೆ ವಿಶ್ವಾಸವಿದೆ'' (1ಯೊ 4:16). ನನ್ನೊಲಿವನ ಸಹೋದರ ಸಹೋದರಿಯರೇ,, ನಾವೀಗ ಈ ವಿಶ್ವಾಸದ ಪವಿತ್ರ ವರುಷದಲ್ಲಿ ತಪಸ್ಸು ಕಾಲವನ್ನು ಆಚರಿಸುತ್ತಿದ್ದೇವೆ. ಇದಾಗಿದೆ ಸಕಾಲ ನಮಗೆ ವಿಶ್ವಾಸ ಮತ್ತು ಪ್ರೀತಿ ಪ್ರೇಮಗಳ ನಡುವಿನ ಸಂಬಂಧಗಳ ಬಗ್ಗೆ ತಿಳಿದುಕೊಳ್ಳುವ; ದೇವರಲ್ಲಿ ನಾವಿಟ್ಟಿರುವ ಪ್ರೀತಿ ಯೇಸುವಿನ ಬಗ್ಗೆ ನಮಗಿರುವ ಪ್ರೇಮಾನುರಾಗಗಳು ಹಾಗೂ ಪವಿತ್ರಾತ್ಮರ ವರವಾಗಿರುವ ಒಲವು, ಹಾಗೂ ಅದೆಲ್ಲದರ ಮೂಲಕ ನಾವು ನಮ್ಮಲ್ಲೇ ಬೆಳೆಸಿಕೊಂಡಿರುವ, ದೇವರ ಬಗ್ಗೆ ಹಾಗೂ ನೆರೆಹೊರೆಯವರ ಬಗ್ಗೆ, ನಮಗಿರುವ ಪ್ರೀತಿಯ ಹಾದಿ.

**ದೇವರ ಪ್ರೀತಿಗೆ ನಮ್ಮ ಸದುತ್ತರ ಉದಾರ ಮನಸ್ಸಿನ ವಿಶ್ವಾಸ :**

ನನ್ನ ಪ್ರಥಮ ವಿಶ್ವಪತ್ರದಲ್ಲೇ ನಾನು ದೈವೀದಾನವಾದ ವಿಶ್ವಾಸ ಹಾಗೂ ಪ್ರೀತಿಯ ಮಧ್ಯೆ ಇರುವ ಅನ್ಯೋನ್ಯ ಸಂಬಂಧ ಮತ್ತು ಒಡನಾಟದ ಬಗ್ಗೆ ಬರೆದಿದ್ದೆ. ಇದೆಲ್ಲದಕ್ಕೆ ಏಕೇ ಕಾರಣವಿತ್ತು, ಸಂತ ಯೊವಾನ್ನರ ಪತ್ರದ ಮೂಲಕ ಹರಿದು ಬಂದ ಈ ಮಾತುಗಳು : ''ದೇವರು ನಮ್ಮಲ್ಲಿಟ್ಟಿರುವ ಪ್ರೀತಿ ನಮಗೆ ಗೊತ್ತಿದೆ; ಅದರಲ್ಲಿ ನಮಗೆ ವಿಶ್ವಾಸವಿದೆ'' (1 ಯೊವಾನ್ನ 4:16). ಆ ಪತ್ರದಲ್ಲಿ ನಾನು ಬರೆದಿದ್ದೆ, ''ನಾವು ಕ್ರೈಸ್ತರಾಗಿರುವುದು ಒಂದು ದೈವನಿರ್ಮಿತ ನೈತಿಕ ಆಲೋಚನೆ ಯಿಂದಲ್ಲ, ಅಥವಾ ಪರವೋನ್ನತ ಸದಾಲೋಚನೆ ಯಿಂದಲೂ ಅಲ್ಲ, ಬದಲಿಗೆ,. ಯೇಸುಕ್ರಿಸ್ತರೊಂದಿಗಿರುವ ನಮ್ಮ ಅನ್ಯೋನ್ಯ ಸಂಬಂಧ, ಮಾನವರಾದ ಯೇಸುವಿನೊಂದಿಗೆ ನಮಗಿರುವ ಅನ್ಯೋನ್ಯ ಅನುಬಂಧ. ಅದರ ಮೂಲಕವೇ ನಾವು ನಮ್ಮ ಬಾಳಿಗೆ ಹೊಂದಿರುವ ಒಂದು ನೂತನ ದೃಷ್ಟಿ ಹಾಗೂ ನೂತನ ನಿರ್ಧಾರ, ಅನಿವಾರ್ಯ ಏಕೆಂದರೆ ಪ್ರಪ್ರಥಮವಾಗಿ ದೇವರೇ ನಮ್ಮನ್ನು ಪ್ರೀತಿಸಿದ್ದಾರೆ (1 ಯೊವಾನ್ನ 4:1). ಈಗ ನಮಗೆ ಪ್ರೀತಿಯೆಂದರೆ ಒಂದು ನೂತನ ಆಜ್ಞೆಯೇನೂ ಆಗಿರದೆ, ಇದು ದೇವರು ಪ್ರೀತಿಯಿಂದಲೇ ನಮ್ಮೆಡೆಗೆ ಸಾಗಿ ಬಂದಿರುವ ಅವರ ಹಾದಿಗೆ ನಮ್ಮ ಪ್ರತಿಕ್ರಿಯೇ ಅಷ್ಟೇ'' (ದೇವರ ಪ್ರೀತಿ ನಂ. 1), ಪ್ರೀತಿಯೆಂದರೆ ನಾವು ವಿಶ್ವಾಸದಿಂದ ಇಂತಹ ವಿಶ್ವಾಸಕ್ಕೆ ನಾವಂಟಿಕೊಂಡು ತೋರಿಸುವ ನಮ್ಮ ಸಾರ್ವತ್ರಿಕ ಪ್ರೀತಿ - ಎಂದರೆ, ಇದು ಕೇವಲ ಯೇಸುಕ್ರಿಸ್ತರ ಮಾನವತಾರದಿಂದಾಗಿ ವ್ಯಕ್ತವಾದ ದೇವರ ಪರಮ ಪ್ರೀತಿಗೆ ನಮ್ಮ ಸರಿಸಮನಾದ ಪ್ರತಿಕ್ರಿಯೆಯ ಪ್ರಾಕಾರವಷ್ಟೇ. ಹೀಗೆ ಪ್ರೀತಿಯ ಭಂಡಾರವೂ ಉಗಮವೂ ಆಗಿರುವ ದೇವರಿಗೆ ನಾವು ತೋರುವ ಪ್ರತಿಕ್ರಿಯೆಯಷ್ಟೇ ! ಎಂದರೆ ಪ್ರೀತಿಯ ಆರ್ಥವಿಷ್ಟೇ - ಇದು ಆವರಿಸುವುದು ಕೇವಲ ಹೃದಯದ ಭಾವನೆಯನ್ನು ಮಾತ್ರವಲ್ಲದೆ ನಮ್ಮ ಮಾನಸಿಕ ನಿರ್ಧಾರವನ್ನು ಕೂಡ !.

ಪ್ರತೀ ಬಲಿಪೂಜೆಯಲ್ಲೂ ಪ್ರೀತಿಯ ಉಗಮವಾಗಿರುವ ದೇವರನ್ನೇ ಯೇಸುಕ್ರಿಸ್ತರಲ್ಲಿ ನಾವು ಸಂಧಿಸುತ್ತೇವೆ :

''ಸಜೀವ ದೇವರೊಂದಿಗೆ ನಮ್ಮ ಅನುರಾಗದ ಬಾಂಧವ್ಯವೇ ಪರಮ ಪಾವನ ಪ್ರೀತಿಯನ್ನು ಸಂಧಿಸುವ ಒಂದು ಸುಲಲಿತಾವದ ಹಾದಿಯಾಗಿದೆ. ದೇವರ ಈ ಪ್ರೀತಿಗೆ ನಾವು 'ಹೌದೆ'ನ್ನುವುದೇ ನಮ್ಮ ಸದ್ದುತರವಾದರೆ, ಅದರ ಜೊತೆಗಿರುವುದೇ ನಮ್ಮ ಮಾನಸಿಕ ಶಕ್ತಿ ಸಾಮರ್ಥ್ಯವಾಗಿದೆ, ಎಂದರೆ ನಮ್ಮ ಭಾವನಾತ್ಮಕ ಶಕ್ತಿ ಸಾಮರ್ಥ್ಯದೊಂದಿಗೆ ನಮ್ಮ ಮಾನಸಿಕ ಸ್ಥಿರತೆ ಜೊತೆಗೂಡುವ ಒಂದು ಹಾದಿಯಾಗಿದೆ. ಆದರೆ ಈ ಸಾಮರ್ಥ್ಯವೂ ಎಂದೆಂದೂ ಮುಗಿಯದ ನಿರಂತರಮಯ ತೆರೆದ ಹಾದಿಯಾಗಿದೆ. ಅದುದರಿಂದ ಎಲ್ಲಾ ಕ್ರೈಸ್ತರಿಗೆ ವಿಶೇಷವಾಗಿ ''ಪ್ರೀತಿಮಯ ಬಂಧು''ಗಳಿಗೆಲ್ಲಾ, ವಿಶ್ವಾಸದ ಹಾದಿ ಇರಲೇಬೇಕಾಗಿದ್ದು, ಅದು ಮಲಗಿರುವ ಪ್ರೀತಿಯಾದರೆ ಪ್ರೇಮಮಯದಾರಿಗೆ ಎಚ್ಚರಗೊಳಿಸುತ್ತದೆ. ಇದರ ಪರಿಣಾಮವಾಗಿ ಪರಪ್ರೀತಿ ಕೇವಲ ಮನುಜರೆಲ್ಲರ ಮೇಲೆ ಹೇರಲಾದ ಒಂದು ಆಜ್ಞೆಯಾಗಿರದೆ, ನಮ್ಮ ಹೊರಗಡೆಯಿಂದ ಬಂದ ನೈತಿಕ ನಿಯಮವಾಗಿ ರದೆ, ಇದು ನಮಗಿರುವ ವಿಶ್ವಾಸದಿಂದಲೇ ಉತ್ಪತ್ತಿಯಾದ ಒಂದು ನೈಜ್ಯ ಪ್ರೀತಿಯ ಪರಿಣಾಮವಾಗಿದ್ದು, ಈ ಪ್ರೇಮಾನುರಾಗ ದಿಂದಲೇ ನೈಜ್ಯ ವಿಶ್ವಾಸ ಹೊರ ಹರಿಯುತ್ತದೆ. (ವಿಶ್ವಪತ್ರ 'ದೇವರ ಪ್ರೀತಿ' ಸಂ. 31 ಅ)

ಕ್ರೈಸ್ತರು, ಕ್ರಿಸ್ತರಲ್ಲಿ ಕಂಡು ಬರುವ ದೈವಪ್ರೇಮದಿಂದ ತುಂಬಿದವರಾಗಿದ್ದು ದೈವ ಪ್ರೇಮ ಭರಿತರಾಗಿ, ಅದರ ಮಹತ್ವವನ್ನರಿತು, ಅದರ ಪ್ರಭವಾದಿಂದ ಜೀವಿಸುವರಾಗಿದ್ದು 'ಕ್ರೈಸ್ತ ಪ್ರೇಮ ಅವರನ್ನು ಆವರಿಸಿದೆ' (2ಕೊರಿಂಥ 5:14) ಹೀಗವರು ತಮಗೆ ತಿಳಿದ ಪ್ರಭಾವಶಾಲಿ ದಾರಿಗಳಿಂದ ಕ್ರಿಸ್ತೇಸುವನ್ನು ಅರಿತಿದ್ದಾರೆ. (ದೇವರ ಪ್ರೀತಿ ಸಂ. 33 ನೋಡಿ ಕೊಳ್ಳಿ) ಈ ರೀತಿ ಅವರು ವರ್ತಿಸಲು ಕಾರಣ ಅಮೋಘ ವಾದ ದೈವಪ್ರೇಮದಿಂದ ಅವರು ಪ್ರಭಾವಿತರಾ ಗಿದ್ದರೆನ್ನ ಬಹುದುಷ್ಟೇ ! ಆ ಪ್ರೀತಿಯಿಂದ ತಾವು ತುಂಬಿದ್ದೇವೆ, ದೇವರಿಂದ ಕ್ಷಮಿಸಲ್ಪಟ್ಟಿದ್ದೇವೆ ಹಾಗೂ ಮಾನವವತಾರ ತಾಳಿದ ಕ್ರಿಸ್ತೇಸುವಿನಿಂದ ಪ್ರೇಮಾನುರಾಗಗಳಿಗೆ ಒಳಗಾಗಿದ್ದೇವೆ ಎಂಬ ಮನವರಿಕೆ ಅವರಿಗೆ. ಆದುದರಿಂದಲೇ ಮಾನವವತಾರ ತಾಳಿದ ದೇವರು ತಮ್ಮ ಪ್ರೇಷಿತರ ಬಳಿ ಬಾಗಿ ಅವರ ಪಾದಗಳನ್ನು ತೊಳೆಯಲೂ ಅವರು ಹಿಂಜರಿಯದೆ, ಪ್ರೀತಿಯ ಮಹತ್ವದ ಬಗ್ಗೆ ಮನುಜರಿಗೆ ಕಲಿಸಿದರು. ಹೀಗೆ ಅವರು ದೀನತೆಯಿಂದ ಪ್ರೀತಿಯನ್ನು ತೋರಿದ ಬಳಿಕ ತಮ್ಮ ಶಿಷ್ಯ ಸಮಸ್ತರಿಗಾಗಿ ಶಿಲುಬೆಯ ಮೇಲೆ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಹೀಗವರು ನಮ್ಮ ಮನವರಿಕೆಯನ್ನು ಶಾಶ್ವತವಾಗಿ ಪುನರಜ್ಜೀವಿಸು ವಂತೆ ಮಾಡಿದರು. ಆ ಮನವರಿಕೆ ಇದೇ 'ದೇವರು ಪರಮ ಪ್ರೀತಿ' ಯಾಗಿದ್ದಾರೆ. ... ವಿಶ್ವಾಸ, ದೇವರ



ಪೈಸೆಗಳ ಬಗ್ಗೆ ಎಚ್ಚರದಿಂದಿದ್ದರೆ ರೂಪಾಯಿಗಳು ಉಳಿಯುತ್ತವೆ.

ಪ್ರೇಮಾನುರಾಗಗಳಿಂದ ತುಂಬಿದ ಪ್ರೀತಿ ಪ್ರತ್ಯಕ್ಷವಾಗಿ ಕಂಡುಬಂದಿದ್ದನ್ನು, ಯೇಸುಕ್ರಿಸ್ತರ ಹೃದಯವು ತಿವಿಯಲ್ಪಟ್ಟು ಅದರಿಂದ ಒಂದು ತೊಟ್ಟು ರಕ್ತವೂ ನೀರೂ ಹರಿದು ಬಂದಗಳಿಗೆಯಲ್ಲಿ ಪರಮ ಪ್ರೀತಿಗೆ ಅವಕಾಶವನ್ನೀಯುತ್ತವೆ. ಕ್ರಿಸ್ತಪ್ರೇಮವೇ ಬೆಳಕು - ಅಂತಿಮವಾಗಿ ಉಳಿಯುವ ಒಂದೇ ಬೆಳಕಾಗಿರುವುದರಿಂದ ಅದು ಮುಸುಕು ಮುಸುಕಾದ ಪ್ರಪಂಚವನ್ನೇ ಕಾಣಲು, ಸ್ಪಷ್ಟವಾಗಿ ಗ್ರಹಿಸಲು ವರವನ್ನೀಯುತ್ತದೆ. ಇದೇ ಬೆಳಕು ನಾವಿನ್ನೂ ಉಳಿಯಲು ಮತ್ತು ಬಾಳಲು ನಮಗೆ ಪ್ರೋತ್ಸಾಹವನ್ನೊದಗಿಸುತ್ತದೆ (ದೇವರ ಪ್ರೀತಿ, ಸಂ. 39), ಇದೆಲ್ಲದರ ಮೂಲಕ ಕ್ರೈಸ್ತರ ಪಮ ಪ್ರೀತಿಯ ದ್ಯೋತಕ ಮತ್ತು ಚಿಹ್ನೆ ಕೇವಲ, "ವಿಶ್ವಾಸದಿಂದ ಪ್ರಭಾವಿತ ಒಲವು ಮತ್ತು ಪ್ರೀತಿ'' (ದೇವರ ಪ್ರೀತಿ, ಸಂ. 7) ಎಂಬ ಮನವರಿಕೆಯಿಂದ ನಮ್ಮನ್ನು ತುಂಬಿಸುತ್ತದೆ.

**2. ವಿಶ್ವಾಸಭರಿತ ಜೀವನವೇ ಉದಾರ ದಾನಧರ್ಮ ಮತ್ತು ಪ್ರೀತಿ :**

ಮಾನವರ ಉದಾರ ಮನದ ಪ್ರೀತಿಯೇ ದೈವಪ್ರೇಮಕ್ಕೆ ಸರಿಯಾದ ಪ್ರಕ್ರಿಯೆ : ಮನುಜನ ಪ್ರಥಮ ಪ್ರತಿಕ್ರಿಯೆಯೆಂದರೆ ದೇವರ ಈ ಪರಮ ಪ್ರೇಮದ ಸ್ವೀಕೃತಿ, ಅದೂ ಆಶ್ಚರ್ಯಭರಿತವಾದ ಮತ್ತು ಕೃತಜ್ಞತಾ ಪೂರೀಪಿತವಾದ ಸ್ವೀಕೃತಿ. ಇದಕ್ಕೆಲ್ಲಾ ಕಾರಣ ನಾವು ಪ್ರೀತಿ ತೋರುವುದರಿಂದ ಮುಂಚಿತವಾಗಿಯೇ ತೋರಿಸಲ್ಪಟ್ಟ ಈ ಅಮೋಘ ಮತ್ತು ಅನುಪಮ ಪ್ರೀತಿ ! ಮನುಜರು ಈ ಪ್ರೀತಿಯನ್ನು ಸ್ವೀಕರಿಸಿ ದೇವರಿಗೆ 'ಹೌದೆಂದರೆ' ಅದು ಮಾನವ ಬರೆದ ಈ ಪ್ರೇಮ ಕಥನದ ಮೊದಲ ಹೆಜ್ಜೆಯಾಗಿ ದೇವರೊಂದಿಗೆ ವಿಶ್ವಾಸದಿಂದ ಪ್ರೇಮಭರಿತರಾಗಲು ನಮ್ಮ ಜೀವನಕ್ಕೆ ಅದು ಅರ್ಥವನ್ನೀಯುತ್ತದೆ. ಈ ಪರಮ ಪ್ರೀತಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ ಎಂದು ದೇವರಿಗೆ ನಾವೆಂದರೆ ಖಂಡಿತ ಸಾಲದು. ದೇವರು ನಮ್ಮನ್ನು ಪ್ರೀತಿಸುತ್ತಾರೆ ಮಾತ್ರವಲ್ಲದೆ, ಆ ಪ್ರೇಮದೆಡೆಗೆ ನಮ್ಮನ್ನು ಕೈಚಾಚಿ ತಬ್ಬಿಕೊಳ್ಳುತ್ತಾರೆ ಎಷ್ಟರ ಮಟ್ಟಿಗೆ ಎಂದರೆ ಸಂತ ಪೌಲರೊಂದಿಗೆ ನಾವೂ ಹೇಳ ಶಕ್ತರಾಗಬೇಕು, "ನಾನಿನ್ನು ಜೀವಿಸುತ್ತಿಲ್ಲ, ಕ್ರಿಸ್ತ ಯೇಸುವೇ ನನ್ನಲ್ಲಿ ಜೀವಿಸುತ್ತಾರೆ'' (ಗಲಾತ್ಯ 2:2).

**ನಿನ್ನ ಹೃದಯದಲ್ಲಿ ಕ್ರಿಸ್ತ ಯೇಸುವಿಗೆ ಒಂದು ಸ್ಥಾನವನ್ನಿಟ್ಟರೆ ನೀನವರಂತೆಯೇ ಪ್ರೀತಿಸಲು ಸಾಧ್ಯವಾಗುವುದು.**

ದೈವ ಪ್ರೀತಿಗಾಗಿ ನಮ್ಮ ಹೃನ್ಮನಗಳನ್ನು ನಾವು ತೆರೆದಿಟ್ಟಾಗ, ಕ್ರಿಸ್ತೇಸುವಿನ ಪ್ರೀತಿಯಲ್ಲಿ ಪಾಲ್ಗೊಂಡು ನಾವೂ ಅವರಂತೆಯೇ ಆಗುತ್ತೇವೆ. ನಾವು ನಮ್ಮ ಹೃನ್ಮನಗಳನ್ನು ಕ್ರಿಸ್ತೇಸುವಿಗಾಗಿ ತೆರೆದಿಟ್ಟಾಗ ನಾವವರಿಗೆ ನಮ್ಮಲ್ಲಿ ಜೀವಿಸಲು ಅವಕಾಶವನ್ನೂ ಆಸ್ಪದವನ್ನು ನೀಡಿ ನಮ್ಮನ್ನೇ ಅವರಿಗರ್ಪಿಸಿದಾಗ ತಮ್ಮೊಂದಿಗೆ ಎಲ್ಲರನ್ನು ಪ್ರೀತಿಸಲು ಅವರು ನಮಗೊಂದು ಅವಕಾಶವೀಯುತ್ತಾರೆ. ಮಾತ್ರವಲ್ಲ, ಅವರಂತೆಯೇ ಎಲ್ಲರನ್ನು ಪ್ರೀತಿಸಲು ಎಲ್ಲರೊಂದಿಗೆ ಪ್ರೀತಿಸ ಜೀವಿಸಲು ನಮಗೂ ಆಸ್ಪದವಾಗುತ್ತದೆ. ಆಗಲೇ ಮತ್ತು ಆಗ ಮಾತ್ರ ನಮ್ಮ ವಿಶ್ವಾಸವು ನಿಜವಾಗಿಯೂ ಕ್ರಿಯಾತ್ಮಕ 'ಪ್ರೀತಿಯಿಂದ ತುಂಬಿದ' ವಿಶ್ವಾಸವೆನಿಸುತ್ತದೆ. (ಗಲಾತ್ಯ 5:6) ಆವಾಗಲೇ ಅವರು ನಿಜವಾಗಿಯೂ ನಮ್ಮಲ್ಲಿ ಜೀವಿಸುತ್ತಾರೆ (ಯೊವಾನ್ನ 4:12). ವಿಶ್ವಾಸವೆಂದರೆ ಸತ್ಯವನ್ನು ಅರಿಯುವುದು ಮತ್ತದಕ್ಕೆ ಅಂಟಿಕೊಂಡಿರುವುದು : (1 ತಿಮೊ 2:4) ಪ್ರೀತಿಯೆಂದರೆ ಸತ್ಯದಲ್ಲೇ ಮತ್ತದರಿಂದಲೇ ನಡೆದಾಡುವುದು (ಎಫೆಜ 4:1)

ವಿಶ್ವಾಸದ ಮೂಲಕ ಮಾತ್ರ ನಾವು ಕ್ರಿಸ್ತೇಸುವಿನೊಂದಿಗೆ ಸ್ನೇಹದಿಂದ ಮುಂದಡಿ ಇಡುತ್ತೇವೆ ಹಾಗೂ ಪ್ರೀತಿಯ ಮೂಲಕ ಈ ಸತ್ಸಂಬಂಧದಲ್ಲಿ ನಾವು ಜೀವಿಸುತ್ತೇವೆ ಹಾಗೂ ಸತ್ಸಂಬಂಧವನ್ನು ಕ್ರಿಸ್ತೇಸುವಿನೊಂದಿಗೆ ಬೆಳೆಸುತ್ತೇವೆ. (ಯೊವಾನ್ನ 14 : 1) ವಿಶ್ವಾಸವು ನಮಗೆ ಕ್ರಿಸ್ತಾಜ್ಞೆಗಳನ್ನು ಅರಿತು ಅನುಸರಿಸಲು ಅವಕಾಶವನ್ನೊದಗಿಸುತ್ತದೆ ಹಾಗೂ ಪ್ರೀತಿಯು ಅದನ್ನು ಅಭ್ಯಸಿಸಲು ಅವಕಾಶವನ್ನೊದಗಿಸುತ್ತಾದೆ (ಯೊವಾನ್ನ 13:13-17). ವಿಶ್ವಾಸದಲ್ಲಿ ನಾವು ದೇವರ ಮಕ್ಕಳಾಗಿ ಜನ್ಮತಾಳುತ್ತೇವೆ (ಯೊವಾನ್ನ 1:12). ಪ್ರೀತಿಯ ಮೂಲಕ ನಾವು ಹೊಂದಿರುವ ದೈವ ಜೀವದಲ್ಲಿ ಭಾಗಿಗಳಾಗುತ್ತೇವೆ ಮತ್ತು ದಿನೇ ದಿನೇ ನಮ್ಮ ಸತ್ಸಂಬಂಧದಲ್ಲಿ ಪರಿಪಕ್ವತೆಯನ್ನು ತಲುಪುತ್ತೇವೆ.

ದೇವರ ಸೇವಕ ವಿಶ್ವಗುರು ಆರನೆಯ ಚಿನ್ನಪ್ಪರು ತಮ್ಮ ವಿಶ್ವಪತ್ರ 'ಜನಸಮಸ್ತರ ಪರಿಪಕ್ವತೆ' ಯಲ್ಲಿ ಬರೆದರೇನೆಂದರೆ, ಕ್ರಿಸ್ತಯೇಸು ಪ್ರಗತಿಗೆ ನಾವಿಡುವ ಮೊದಲ ಹೆಜ್ಜೆ (ವಿಶ್ವಪತ್ರ ಜನಸಮಸ್ರ ಪರಿಪಕ್ವತೆ ಸಂ. 16) ದೇವರು ನಮಗೆ ಪ್ರೀತಿಯ ಪರಿಪಕ್ವತೆಯನ್ನೂ ಅವರ ಪ್ರೀತಿಯ ಸತ್ಯವನ್ನು ಸತ್ವವನ್ನು ತೋರಿಸುತ್ತಿದ್ದು ನಾವದನ್ನು ಜೀವಿಸಿ ಸಾರಿ ತೋರಿಸಬೇಕು. ಅದರೊಂದಿಗೆ ಪರರ ಹಾಗೂ ದೇವರ ಪ್ರೀತಿಯನ್ನು ಹೊಂದಲು ನಮ್ಮ ಹೃನ್ಮನಗಳನ್ನು ನಾವು ತೆರೆದಿಡಬೇಕು ಹೀಗೆ ಪ್ರತೀ ಮಾನವನ ಹಾಗೂ ಮಾನವರೆಲ್ಲರ ಹೃನ್ಮನಗಳು ದೈವ ಪ್ರೀತಿಗೆ ತೆರೆದಿರುತ್ತವೆ (ನೋಡಿಕೊಳ್ಳಿ ವಿಶ್ವಪತ್ರ 'ನೈಜ ಪ್ರೀತಿ ಸಂ. 8).

**ಮೂಲತಃ ಎಲ್ಲವೂ ಹೊರ ಹೊರಡುವುದೂ ಪ್ರೀತಿಯಿಂದಲೇ ಮತ್ತು ಸಾಗುವುದೂ ಪ್ರೀತಿಯತ್ತಲೇ.** ಕ್ರಿಸ್ತೇಸುವಿನ ಸ್ವಯಂ ಪ್ರೇರಿತ ಪ್ರೀತಿಯು ಪ್ರೀತಿಯಿಂದಲೇ ಹೊರಟು ಬರುತ್ತಿದ್ದು ಶುಭಸಂದೇಶವನ್ನು ಸಾರಿದ್ದರಿಂದ ಮತ್ತು ಘೋಷಿಸಿದ್ದರಿಂದ ಎಲ್ಲರ ಅರಿವಿಗೆ ಬರುತ್ತದೆ. ನಾವು ವಿಶ್ವಾಸದಿಂದ ಶುಭಸಂದೇಶವನ್ನು ಘೋಷಿಸಿದ್ದರಿಂದ ನಾವದನ್ನು ಪ್ರೀತಿಯಿಂದ ಸ್ವೀಕರಿಸಿದರೆ, ನಾವು ಪ್ರೀತಿಯಂದಲೇ ಪ್ರೀತಿಸಲು ಕಲಿಯುತ್ತೇವೆ. ಆಗ ನಾವು ನಾವು ಪ್ರೀತಿಯಲ್ಲೇ ವಾಸಿಸುತ್ತಿದ್ದು ಅಥರಲ್ಲೇ ನಿರಂತರವೂ ಬೆಳೆಯುತ್ತಾ ಸಂತೋಷದಿಂದ ದೈವಪ್ರೀತಿಯ ಪರಾಮರಿಕೆಯನ್ನು ಇತರರಿಗೆ ಸಾರುತ್ತೇವೆ.

'ಹರಿಹದೆಯವರು ಹೈಟಿಯಲ್ಲಿ' ಎಂಬ ಜೀವನದ ಮುಂಚೂಣಿಯನ್ನು ಶಿರೋನಾಮೆಯನ್ನು ಪ್ರಸಿದ್ಧಗೊಳಿಸುವುದು :

ವಿಶ್ವಾಸ ಮತ್ತು ಉದಾರ ಪ್ರೀತಿಯ ನಡುವಣ ಸಂಬಂಧವನ್ನು ತೋರಿಸಿಕೊಡಲು ಎಫೆಸದವರಿಗೆ ಬರೆದ ಪತ್ರಿಕೆಯ ಈ ವಾಕ್ಯಗಳು ನಮಗೆ ನೆರವಾಗುತ್ತವೆ : "ದೇವಾನುಗ್ರಹದಿಂದಲೇ ನೀವು ವಿಶ್ವಾಸದ ಮೂಲಕ ಜೀವೋದ್ಧಾರ ಹೊಂದಿದ್ದೀರಿ. ಇದು ನಿಮ್ಮ ಪ್ರಯತ್ನರ ಫಲವಲ್ಲ: ದೇವರಿತ್ತ ವರಪ್ರಸಾದ. ಇದು ಮಾನವರ ಪುಣ್ಯಕಾರ್ಯಗಳ ಪರಿಣಾಮವೂ ಅಲ್ಲ; ಆದುದರಿಂದ ಯಾರೂ ಹೆಮ್ಮೆಪಡಲು ಆಸ್ಪದವಿಲ್ಲ'' (2:8-9). "ನಾವಾದರೋ ದೇವರ ಕಲಾಕೃತಿಗಳು. ಕ್ರಿಸ್ತ ಯೇಸುವಿನಲ್ಲಿ ನಾವು ಸತ್ಕಾರ್ಯಗಳನ್ನು ಮಾಡುತ್ತಾ ಬಾಳಬೇಕೆಂದು ತಾವುಮೊದಲೇ ನಿರ್ಣಯಿಸಿದ್ದಂತೆ ದೇವರು ನಮ್ಮನ್ನು

**ರಹಸ್ಯವನ್ನು ಮುಚ್ಚಿಡಿ. ಅದು ನಿಮ್ಮ ಗುಲಾಮ, ರಹಸ್ಯವನ್ನು ಬಯಲು ಮಾಡಿ ಅದು ನಿಮ್ಮ ಯಜಮಾನ.**

ಸೃಷ್ಟಿಸಿದ್ದಾರೆ'' (2:10).

ಇದರ ಮೂಲಕ ನಾವು ಅರ್ಥ ಮಾಡಿಕೊಳ್ಳುವುದು ಏನೆಂದರೆ ಮನುಜರ ರಕ್ಷಣಗೆ ಮೊದಲು ಹೆಜ್ಜೆ ಇಟ್ಟವರು ದೇವರೇ. ತಮ್ಮ ಕೃಪೆಯಿಂದಲೂ ಕ್ಷಮಾಭಾವದಿಂದಲು ಅವರೇ ಈ ಸತ್ಕಾರ್ಯವನ್ನು ಪ್ರಾರಂಭಿಸಿ, ತಮ್ಮ ಈ ಸತ್ಕಾರ್ಯದ ಮೂಲಕ ನಮ್ಮ ಸ್ವಾತಂತ್ರ್ಯಕ್ಕೆ ಕುಂದು ಬಾರದಂತೆ ನಮ್ಮ ಜವಾಬ್ದಾರಿಯೇನೂ ಕುಂಠಿತವಾಗದಂತೆ ದೇವರು ಮನುಜರನೆ ಸ್ವಾತಂತ್ರ್ಯಕ್ಕೆ ಸಾಕಷ್ಟು ಆಸ್ಪದವಿತ್ತು, ಅವರೇ ಸ್ವತಂತ್ರವಾಗಿ ಕೈಗೊಳ್ಳು ವಂತೆ ಪ್ರೀತಿಮಯ ಕೆಲಸ ಕಾರ್ಯಗಳಿಗೆ ಅವರಿಗೆಲ್ಲಾ ಅಪಾರ ಸ್ವಾತಂತ್ರ್ಯವನ್ನು ನೀಡಿದ್ದಾರೆ. ಹೀಗೆ ಇದ್ಯಾವುದೂ ಮನುಷ್ಯ ಪ್ರಯತ್ನದಿಂದಲೇ ನಡೆದು ಬಿಡುವ ಕಾಯಕ ವಲ್ಲ ಆದರೆ ಕೈಯಿಂದಲೇ ಸ್ವಕ್ರಮವಾಗಿ ಪ್ರಾರಂಭವಾದ ಕಾರ್ಯಕ್ರಮಗಳಾಗಿದ್ದು ಅದಕ್ಕೆ ಮನುಜರ ಸಹಕಾರದಿಂದ ಪೂರ್ಣತೆ ದೊರಕಿ ಅದು ಸಂಪೂರ್ಣಗೊಂಡಿದೆ ಎಂದು ಇದರಿಂದಲೇ ಮನುಜರಾದ ನಮಗೆ ವೇದ್ಯವಾಗುತ್ತದೆ.

**ಕೆಲಸ ಕಾರ್ಯಗಳಿಲ್ಲದ ವಿಶ್ವಾಸ ಫಲಬಿಡದ ಗೊಡ್ಡು ಅಥವಾ ಬಂಜೆ ಮರದಂತೆ.** ಪ್ರತೀ ಕೆಲಸ ಕಾರ್ಯವು ವಿಶ್ವಾಸವನ್ನು ಸೂಚಿಸುತ್ತದೆ. ಈ ತಪಸ್ಸು ಕಾಲ ನಮಗೆ ಪೌರಾಣಿಕ ಪ್ರೀತಿಯ ಕೆಲಸಕಾರ್ಯಗಳಿಂದ ನಮ್ಮ ವಿಶ್ವಾಸವನ್ನು ತೋರ್ಪಡಿಸಲು ಸಾಕಷ್ಟು ಅವಕಾಶವನ್ನೀಯುತ್ತದೆ. ಅದರೊಂದಿಗೆ ಈ ತಪಸ್ಸು ಕಾಲದಲ್ಲಿ ನಾವಾಲಿಸುವ ಪ್ರತಿಯೊಂದು ದೇವರ ವಾಕ್ಯವೂ ಸಂಸ್ಕಾರಗಳ ಸ್ವೀಕೃತಿಯ ಮೂಲಕ ಪ್ರೀತಿಮಯ ಕೆಲಸ ಕಾರ್ಯಗಳಲ್ಲಿ ತೊಡಗಲು ನಮಗೆ ದಾರಿಯನ್ನು ತೋರಿಸುತ್ತದೆ. ಹೀಗೆ ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ನಾವು ಮಾಡುವ ತಪಸ್ಸು ಕಾಲದ ಉಪವಾಸ, ತ್ಯಾಗ ಮತ್ತು ದಾನಧರ್ಮಗಳು ನಮಗೆ ನೆರವನ್ನೀಯುತ್ತವೆ.

**ವಿಶ್ವಾಸದ ಆದ್ಯತೆ, ಪ್ರೀತಿಯ ಕಾರ್ಯ ಚಟುವಟಿಕೆಗಳು :**

ದೇವರ ಯಾವುದಾದರೂ ಕೊಡುಗೆಯಂತೆ, ಪ್ರೀತಿ ಮತ್ತು ವಿಶ್ವಾಸಗಳೆರಡೂ ದೇವರು ಪವಿತ್ರಾತ್ಮರು ಅನುಗ್ರಹಿಸುವ ಕೃಪಾದಾನಗಳಾಗಿವೆ (1 ಕೊರಿಂಥ 13), ಆ ಪವಿತ್ರಾತ್ಮರ ನೆರವಿನಿಂದಲೇ ನಾವೂ ದೇವರನ್ನು 'ಅಪ್ಪಾ ತಂದೆಯೇ' ಎಂದು ಕೂಗಿ ಕರೆಯಲು ಶಕ್ತರಾಗಿದ್ದೇವೆ (ಗಲಾತ್ಯ 4:6), ಅದೇ ಪವಿತ್ರಾತ್ಮರ ವರದಾನದಿಂದಲೇ "ಯೇಸುವೇ ನಮ್ಮ ರಕ್ಷಕ ! (1 ಕೊರಿಂಥ 12:3) ಎಂದು ಹೇಳುತ್ತಾ ಶಕ್ತರಾಗುತ್ತೇವೆ ಹಾಗೂ 'ಮಾರನಾಥಾ' (ಪ್ರಭುವೇ ಬನ್ನಿರಿ) (1 ಕೊರಿಂಥ 16:22), ಪ್ರಕಟ 22 : 20) ಎಂದು ಹೇಳಲು ನಮಗೆ ಸಾಧ್ಯವಾಗುತ್ತದೆ. ವಿಶ್ವಾಸವು ವರದಾನ ಮತ್ತು ದೈವೀಕೊಡುಗೆಯಾಗಿದ್ದು ನಮಗೆ ಕ್ರಿಸ್ತ ಯೇಸುವಿನ ಬಗೆಗಿನ ಸತ್ಯವನ್ನರಿಯಲು ನೆರವಾಗುತ್ತದೆ. ಮಾತ್ರವಲ್ಲದೆ, ಆ ಸತ್ಯವೇ ಯೇಸು ಕ್ರಿಸ್ತರ ಬಗ್ಗೆಯಾಗಿದ್ದು ಅವರು ತಂದೆ ದೇವರಿಗೆ ಸಂಪೂರ್ಣವಾಗಿ ವಿಧೇಯರಾದರು ಎಂಬ ವಿಷಯವನ್ನು ನಮಗೆ ತಿಳಿಸುತ್ತದೆ. ವಿಶ್ವಾಸವು ನಮ್ಮ ಹೃನ್ಮನಗಳಲ್ಲಿ ಪ್ರೀತಿ ಅನುರಾಗ ಮಾತ್ರ ಅಂತಿಮವಾಗಿ ದುಷ್ಟತನವನ್ನು ಸಾವನ್ನು ಗೆಲ್ಲಲು ಸಾಧ್ಯ ಎಂಬ ಸತ್ಯವನ್ನು ಬಿತ್ತುತ್ತದೆ. ಕೆಲಸ ಕಾರ್ಯಗಳಿಲ್ಲದ ವಿಶ್ವಾಸವು ಫಲಗಳಿಲ್ಲದ ಮರದಂತೆ ವಿಶ್ವಾಸವು ನಮಗೆ ಭವಿಷ್ಯವನ್ನು ಭರವಸೆಯಿಂದ ನಿರೀಕ್ಷಿಸಲೂ ವೀಕ್ಷಿಸಲೂ ಕಲಿಸುತ್ತಾ ಹೀಗೆ ವಿಶ್ವಾಸದ ಮೂಲಕವೇ ಕ್ರಿಸ್ತರ ಅಂತಿಮ ಜಯವನ್ನು ಕಾಣಲು ನಮಗೆ ಸಾಧ್ಯವಾಗುತ್ತದೆ. ಪ್ರೀತಿಮಯ ಕಾರ್ಯಕಲಾಪಗಳಾದರೋ ತಮ್ಮ ಕೊಡುಗೆಯಂತೆ ನಾವು ಕ್ರಿಸ್ತರೆಡೆಗೆ ಸಾಗಿ, ಅವರ ಪ್ರೀತಿಯನ್ನು ಅನುಭವದಿಂದ ಅರಿತುಕೊಂಡು ಅವರು ತಂದೆ ದೇವರನ್ನು ತಮ್ಮ ಸಹೋದರ ಸಹೋದರಿಯರನ್ನು ಹೇಗೆ ಪ್ರೀತಿಸಿದರೆಂದು ತಿಳಿಯಲು ನೆರವಾಗಿದೆ. ಕ್ರಿಸ್ತೇಯುವಿನ ಪ್ರೇಮಾನುಭವದಿಂದ ನಮ್ಮ ಹೃನ್ಮನಗಳನ್ನು ತುಂಬಿಸಿ, ತಮ್ಮ ತಂದೆಯೊಂದಿಗಿನ ಹಾಗೂ ಪರಸ್ಪರರೊಂದಿಗಿನ ಪ್ರೀತ್ಯಾದರಗಳನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಅವರ ಪ್ರೀತಿಮಯ ಸಂಬಂಧದಿಂದ ನಮ್ಮನ್ನು ತುಂಬಿಸಿ ಪವಿತ್ರಾತ್ಮರು ಪ್ರಭು ಯೇಸುವಿನ ವಿಧೇಯತೆಯನ್ನು ತಂದೆಯೊಂದಿಗಿನ ಮಕ್ಕಳಂತಹ ಸಂಬಂಧವನ್ನು ಸೂಚ್ಯವಾಗಿ ತಿಳಿಸುತ್ತದೆ. (ರೋಮ 5 : 5 ) ಈ ಪ್ರೇಮಾನುಭವಗಳ ಎರಡು ಸಂಬಂಧಗಳನ್ನೂ ಎಂದರೆ ತಂದೆಗೆ ಯೇಸುಸ್ವಾಮಿ ತೋರಿದ ವಿಧೇಯತನವನ್ನು ಮಾನವರೆಲ್ಲರನ್ನು ಪ್ರೀತಿಯಿಂದ ಸಹೋದರ ಸಹೋದರಿಯರಂತೆ ಕಂಡದ್ದನ್ನು ಹಾಗೂ ಸಂಸ್ಕಾರಗಳ ಮೂಲಕ ತಮ್ಮ ಸ್ವಭಾವವನ್ನು ತಿಳಿಸಿದ್ದನ್ನು ನಮಗೆ ಹೇಳುತ್ತದೆ. ಆ ಎರಡು ಸಂಸ್ಕಾರಗಳು ಸ್ನಾನದೀಕ್ಷೆ ಮತ್ತು ಪರಮಪ್ರಸಾದವಾಗಿವೆ. ಸ್ನಾನದೀಕ್ಷೆಯು ಪರಮಪ್ರಸಾದ ಸಂಸ್ಕಾರಕ್ಕಿಂತ ಮೊದಲೇ ಬರುವ ಸಂಸ್ಕಾರವಾಗಿದ್ದು ಸ್ನಾನದೀಕ್ಷೆಯ ನಂತರ ನಾವು ಸ್ವೀಕರಿಸುವ ಪರಮ ಪ್ರಸಾದ ಸಂಸ್ಕಾರವು ಕ್ರೈಸ್ತಾನುಭವದ ಬಾಳನ್ನು ಸಂಪೂರ್ಣಗೊಳಿಸು ತ್ತದೆ. (ಪ್ರೀತಿಮಯ ಸಂಸ್ಕಾರಗಳು).

ಅಂತೆಯೇ, ಪ್ರೀತಿಮಯ ಕೆಲಸಕಾರ್ಯಗಳಿಗಿಂತಲೂ ಮುಂಚಿತವಾಗಿ ವಿಶ್ವಾಸವಿರುವುದು ಅನಿವಾರ್ಯ; ಆರೆ ವಿಶ್ವಾಸ ನೈಜ್ಯವೆನಿಸಬೇಕಾದರೆ ಅವುಗಳು ಪ್ರೀತಿಯ ಕಿರೀಟವನ್ನು ಧರಿಸಲೇಬೇಕು. ಪ್ರತಿಯೊಂದೂ ಹೊರಡುವುದು ವಿಶ್ವಾಸದ ಬುನಾದಿಯಿಂದಲೇ ಎಂದರೆ ಅದರ ಮೂಲಕವೇ ತಾನು ದೇವರಿಂದ ಪ್ರೀತಿಗೆ ಒಳಗಾಗಿದ್ದೇನೆ ಎಂದು ಅರಿತಾಗಲೇ ಅಂತಹ ಮನವರಿಕೆ ಬರಬೇಕಾದರೆ ದೇವರ ಮತ್ತು ವಿಶ್ವಾಸವುಳ್ಳವನ ಹೃನ್ಮನದಿಂದ ದಯಾಮಯ ಹಾಗೂ ಪ್ರೀತಿಮಯ ಕೆಲಸಕಾರ್ಯಗಳು ಹೊರಹೊಮ್ಮಲೇ ಬೇಕು. ಎಂದರೆ, ಅದರ ಅರ್ಥವಿಷ್ಟೇ. ದೇವರ ಪ್ರೀತಿಗೆ ಮತ್ತು ನೆರಹೊರೆಯವರ ಪ್ರೀತಿಗೆ ಒಬ್ಬರು ಶರಣಾಗಲೇ ಬೇಕು (1ಕೊರಿಂಥ 13:13). ನನ್ನೊಲವಿನ ಸಹೋದರ, ಸಹೋದರಿಯರೇ ಈ ತಪಸ್ಸು ಕಾಲದಲ್ಲಿ, ನಾವು ಕ್ರಿಸ್ತೇಸುವಿನ ಶಿಲುಬೆಯ ಸಾವನ್ನು ಮತ್ತವರು ಪುನರುತ್ಥಾನರಾದ ಘಟನೆಯನ್ನು ಆಚರಿಸಲು ಸಿದ್ಧರಾಗುತ್ತಿರುವಾಗ, ಅವುಗಳ ಮೂಲಕ ಪ್ರಪಂಚವನ್ನೂ ಪ್ರತೀ ಮಾನವನನ್ನು ಸಂರಕ್ಷಿಸಿದ್ದನ್ನು ಧ್ಯಾನಿಸಲು ಬದ್ಧರಾಗುತ್ತಿರುವಾಗ, ನೀವೆಲ್ಲರೂ ಈ ಅತ್ಯಮೂಲ್ಯ ಸಮಯವನ್ನು ಕಳೆಯುತ್ತಿರುವಾಗ ಯೇಸುವಿನಲ್ಲಿ ಪೂರ್ತಿ ವಿಶ್ವಾಸಿಸುವಂತಾಗಲೆಂಬುದೇ ನನ್ನ ಹಾರೈಕೆ. ಹೀಗೆ ಕ್ರಿಸ್ತಯೇಸುವಿನೊಂದಿಗೆ ಅನ್ಯೋನ್ಯವಾ ಗಿದ್ದು ದೈವಪ್ರೀತಿಯಲ್ಲೂ ಮನಸುಪ್ರೀತಿಯಲ್ಲೂ ನೀವು ನಿಮ್ಮನ್ನೇ ತೊಡಗಿಸಿಕೊಳ್ಳಬೇಕು. ಇದಕ್ಕಾಗಿಯೇ ನಾನು ಮುಂದೆ ದೀನತೆಯಿಂದ ಕೈಮುಗಿಯುತ್ತೇನೆ. ನಮ್ಮ ದೇವರು ನಿಮ್ಮಲ್ಲಿ ಒಬ್ಬೊಬ್ಬರನ್ನು ಆಶೀರ್ವದಿಸಲೆಂದೇ ದೇವರ ಸನ್ನಿಧಿಯಲ್ಲಿ ನನ್ನ ದೀನ ಪ್ರಾರ್ಥನೆಯಾಗಿದೆ.

❖



ದೊಡ್ಡವರ ಜೀವನವನ್ನು ನೋಡಿ ನಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು.

# ಪ್ರಭುವಿನ ಪುನರುತ್ಥಾನ



ಕ್ರೈಸ್ತ ಜೀವನದಲ್ಲಿ, ಧರ್ಮಸಭೆಯ ಇತಿಹಾಸದಲ್ಲಿ ಪ್ರಭು ಯೇಸುವಿನ ಪುನರುತ್ಥಾನವು ಮಹತ್ವವಾದ ಸ್ಥಾನವನ್ನು ಪಡೆದಿದೆ. ಯೇಸು ಸ್ವಾಮಿಯು ಪುನರುತ್ಥಾನ ಆಗದೆ ಹೋಗಿದ್ದರೆ ಇಂದು ನಾವು ಯೇಸುವನ್ನು ನಂಬುತ್ತಿರಲಿಲ್ಲ. ಕಥೋಲಿಕ ಧರ್ಮಸಭೆಯು ಇರುತ್ತಿರಲಿಲ್ಲ. ಕ್ರೈಸ್ತ ಸಭೆಯ ಆಚಾರ ವಿಚಾರಗಳು ಇರುತ್ತಿರಲಿಲ್ಲ. ಅದಕ್ಕಾಗಿಯೇ ಸಂತ ಪೌಲರು ಕೊರಿಂಥದವರಿಗೆ ಬರೆದ ಪತ್ರದಲ್ಲಿ ಹೇಳುವಂತೆ ಸ್ವಾಮಿ ಯೇಸು ಪುನರುತ್ಥಾನವಾಗಲಿಲ್ಲವೆಂದ ಮೇಲೆ ನಮ್ಮ ಬೋಧನೆಯೂ ಬರಿದು ನಿಮ್ಮ ವಿಶ್ವಾಸವೂ ಬರಿದು. ಆದ್ದರಿಂದ ಪ್ರಭು ಯೇಸುವಿನ ಪುನರುತ್ಥಾನ ಕ್ರೈಸ್ತ ಜೀವನ ಮತ್ತು ವಿಶ್ವಾಸಕ್ಕೆ ಮೂಲ ಆಧಾರ, ಆಡಿಪಾಯ ಅಡಿಗಲ್ಲು ಮತ್ತು ಆದರ್ಶವಾಗಿದೆ. ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಪಾಂಡಿತ್ಯವನ್ನು ಪಡೆದಿರುವ ಬೈಬಲ್ ವಿದ್ವಾಂಸರು ಚಾರಿತ್ರಿಕವಾಗಿ ಕ್ರಿಸ್ತರ ಪುನರುತ್ಥಾನದ ಘಟನೆಯನ್ನು ಸಾಕ್ಷಾಧಾರಗಳ ಮೂಲಕ ವಿಮರ್ಶಿಸಿ, ವಿಶ್ಲೇಷಿಸಿ ರುಜುವಾತು ಪಡಿಸಿದ್ದಾರೆ. ಅಷ್ಟು ಮಾತ್ರವಲ್ಲ ಕ್ರಿಸ್ತರ ಕಟ್ಟಾಳು ಕಿಂಕರ ಸಂತ ಪೌಲರು ಯೇಸು ಸ್ವಾಮಿ ನಿಜವಾಗಿಯೂ ಸಾವಿನ ಮೇಲೆ ಜಯವನ್ನು ಸಾಧಿಸಿದ್ದಾರೆ ಎಂಬುವುದನ್ನು 1 ಕೊರಿಂಥ 15:3-4ರಲ್ಲಿ ಹೇಳುತ್ತಾರೆ. ''ನಾನು ಪಡೆದುಕೊಂಡದ್ದನ್ನು ಮುಖ್ಯವಾದದು ಎಂದೆಣಿಸಿ ನಿಮಗೆ ಒಪ್ಪಿಸಿದ್ದೇನೆ. ಯೇಸು ನಮ್ಮ ಪಾಪಗಳ ಪರಿಹಾರಕ್ಕಾಗಿ ಪ್ರಾಣತ್ಯಾಗ ಮಾಡಿದರು. ಅವರನ್ನು ಭೂಸ್ಥಾಪನೆ ಮಾಡಲಾಯಿತು. ಅದೇ ಗ್ರಂಥದ ಪ್ರಕಾರ ಮೂರನೆಯ ದಿನ ಅವರು ಪುನರುತ್ಥಾನ ಹೊಂದಿದರು''. ಸಂತ ಪೌಲರೇ ಹೇಳುವಂತೆ ಇದು ನನ್ನ ಅಚಲ ಮತ್ತು ದೃಢ ವಿಶ್ವಾಸ. ಈ ವಿಶ್ವಾಸದಿಂದಲೇ ನಾನು ಪ್ರಭುವಿನ ಪುನರುತ್ಥಾನದ ಸಂದೇಶವನ್ನು ಸಾರಿದ್ದೇನೆ. ಬರಿದಾದ ಸಮಾಧಿಯನ್ನು ಕಂಡ ಸಂತ ಪೇತ್ರರಿಗೆ ಯೇಸು ಸತ್ತ ಮೇಲೆ ಮರಳಿ ಜೀವಂತರಾಗಿ ಎದ್ದು ಬರಬೇಕು ಎಂಬ ಪವಿತ್ರ ಗ್ರಂಥದ ವಾಕ್ಯ ಆಗ ಅರ್ಥವಾಯಿತು. (ಯೊವಾನ್ನ 20:9).

ನಾವು ಯೇಸುಸ್ವಾಮಿಯ ಹಿಂಬಾಲಕರು ಮತ್ತು ಅವರ ವಿಶ್ವಾಸಿಗಳು ಎಂಬುವುದನ್ನು ಈ ಪುನರುತ್ಥಾನ ಹಬ್ಬದ ಮೂಲಕ ಕೊಂಡಾಡುತ್ತೇವೆ. ಪುನರ್ಜೀವಂತರಾಗಿ ಎದ್ದ ಯೇಸು ಯಾವಾಗಲೂ ನಿರಂತರವಾಗಿ ನಮ್ಮೊಂದಿಗೆ ಇರುತ್ತಾರೆ. ನಮ್ಮಲ್ಲಿ ಜೀವಿಸುತ್ತಾರೆ. ಅದೇ ಅವರ ಅಭಯವೂ, ಆದೇಶವೂ ಆಗಿದೆ. ''ಇಗೋ ನಾನು ಮೃತ ಹೊಂದಿದೆ ನಿಜ ಆದರೆ ಯ ು ು ಗ ' ಯ ು ು ಗ ಾ ಂ ತ ' ರ ' ಕ ' ್ಕ ಜೀವಿಸುವವನಾಗಿದ್ದೇನೆ. ಇಗೋ ಲೋಕಾಂತ್ಯದವರೆಗೂ ಸದಾ ಕಾಲ ನಾನು ನಿಮ್ಮೊಡನೆ ಇರುತ್ತೇನೆ'' ಪವಿತ್ರ ಗ್ರಂಥದ ಈ ಮಾತುಗಳನ್ನು ನಾವು ಮನಗಾಣ ಬೇಕು. ಪುನರುತ್ಥಾನಿ ಪ್ರಭುಯೇಸು ನಮ್ಮೊಂದಿಗಿರುವಾಗ ಸರ್ವವೂ, ಸಕಲವೂ ನಮಗೆ ಹಿತಕರವಾಗಿ ಪರಿಣಮಿಸುವುದು. ಈ ನಿಟ್ಟಿನಲ್ಲಿ ಸಂತ ಪೌಲರು ಥೆಸಲೋನಿಕದವರಿಗೆ ಬರೆದ ಮಾತುಗಳು ನಮಗೆ ಪ್ರೇರಣೆ ಮತ್ತು ಪೋಷಣೆಯಾಗ ಬೇಕು. ''ಸದಾ ಹರ್ಷ ಚಿತ್ತರಾಗಿರಿ. ಎಡಬಿಡದೆ ಪ್ರಾರ್ಥಿಸಿರಿ. ಎಲ್ಲ ಸಂದರ್ಭಗಳಲ್ಲೂ ಉಪಕಾರ ಸ್ಮರಣೆ ಮಾಡಿರಿ. ಕ್ರಿಸ್ತಯೇಸುವಿನಲ್ಲಿ ದೇವರು ನಿಮ್ಮಿಂದ ಇಚ್ಛಿಸುವುದು ಇದನ್ನೇ (1 ಥೆಸಲೋನಿಕ 5:16-18). ಜೀವಂತ ಪ್ರಭುವಿನಲ್ಲಿ ವಿಶ್ವಾಸವಿಟ್ಟು ಜೀವಂತರಾಗಿ, ಸಂತೋಷದಿಂದ ಆನಂದದಿಂದ ಇರೋಣ. ಜಿಗುಪ್ಸೆ ಹತಾಶೆಗಳಿಗೆ ಆಸ್ಪದ ಕೊಡದಿರೋಣ. ದೃಢಮನಸ್ಸು, ದೃಢಸಂಕಲ್ಪ ಇಚ್ಛಾಶಕ್ತಿಯಿಂದ ಕ್ರೈಸ್ತ ವಿಶ್ವಾಸವನ್ನು ಜೀವಿಸೋಣ. ಸಂತ ಪೌಲರ ಜೊತೆ ನಾವು ಹೇಳೋಣ 'ಜೀವಿಸುವುದು ನಾನಲ್ಲ, ಯೇಸು ನನ್ನಲ್ಲಿ ಜೀವಿಸುತ್ತಾರೆ'. ಪ್ರಭು ಯೇಸುವಿನ ಪುನರುತ್ಥಾನದ ಶುಭ ಸಂದೇಶ ಮತ್ತು ಸಮಾಚಾರ ಇಂದಿನ ಸಮಾಜಕ್ಕೆ, ಸಮುದಾಯಕ್ಕೆ, ಜಗತ್ತಿಗೆ ಮತ್ತು ಎಲ್ಲಾ ಜನರಿಗೂ ಶಾಂತಿ ಸಮಾಧಾನ, ಸಮೃದ್ಧಿ - ಸಂತೃಪ್ತಿ, ನೆಮ್ಮದಿಯ ಮತ್ತು ಆಶಾಕಿರಣವನ್ನು ನೀಡಲಿ. ವೈಮನಸ್ಸು ಮನಸ್ತಾಪ, ಅನಾರೋಗ್ಯಕರ ಪೈಪೋಟಿ, ಸ್ಪರ್ಧೆ, ಕೋಮುಗಲಭೆ ನಿಂತು ಎಲ್ಲರೂ ಸ್ನೇಹ ಸೌಹಾರ್ದತೆ, ಸಹೋದರ ಭ್ರಾತೃತ್ವದ ಜೀವನ ನಡೆಸುವಂತಾಗಲಿ. ಈ ದಿಸೆಯಲ್ಲಿ ಮೃತ್ಯುಂಜಯ ಯೇಸು ನಿಮ್ಮೆಲ್ಲರನ್ನು ಆಶೀರ್ವದಿಸಿ, ಕೈಹಿಡಿದು ಮುನ್ನಡೆಸಲಿ.

ನಿಮಗೆಲ್ಲರಿಗೂ ಪುನರುತ್ಥಾನ ಹಬ್ಬದ ಶುಭಾಶಯಗಳನ್ನು ಕೊರುತ್ತೇನೆ.

ಮೃಂತ್ಯುಂಜಯ ಕ್ರಿಸ್ತರಲ್ಲಿ ನಿಮ್ಮೊಲವಿನ ತಂದೆ.

***ಅತೀ ವಂ. ಡಾ. ಟಿ. ಅಂತೋಣಿ ಸ್ವಾಮಿ,***
ಧರ್ಮಾಧ್ಯಕ್ಷರು, ಚಿಕ್ಕಮಗಳೂರು ಧರ್ಮಕ್ಷೇತ್ರ

❖

ಮಳೆ ಬೀಳದಿರುವ ದಿನಗಳಲ್ಲಿಯೇ ಮನೆಯ ಮೇಲ್ಛಾವಣಿಯ ರಿಪೇರಿ ಕೆಲಸ ಮುಗಿಸಬೇಕು.

# ಬೈಬಲ್ಲಿನ ವಿಶಿಷ್ಟ ವ್ಯಕ್ತಿಗಳು - ಕಾಲೇಬ

ಯೆಹೂದ ಕುಲದ ಯೇಫುನ್ನೆಯ ಮಗ ಕಾಲೇಬನ ಹೆಸರು ಬೈಬಲ್ಲಿನ ಪುಟಗಳಿಂದೆದ್ದು ಪ್ರಕಾಶಿಸುತ್ತಿದೆ! ಈತನಂಥಾ ನಿಷ್ಠನು ದೈವಭಕ್ತನೂ ಆದ ಮತ್ತೊಬ್ಬ ವ್ಯಕ್ತಿ ಸಿಕ್ಕುವುದು ಸುಲಭವಲ್ಲ.

ಮೋಶೆ, ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ನಾಲ್ವತ್ತೂವಿಳು ಕಾಲ ನಡೆಸಿಕೊಂಡು ಬಂದು ಇದೀಗ ವಾಗ್ದತ್ತ ಕಾನಾನ್ ದೇಶದಲ್ಲಿ ನಿಂತಿದ್ದಾನೆ. ಆ ನಾಡಿನ ವಿಷಯದಲ್ಲಿ ದೇವರು ಅಪ್ಪಣೆಕೊಡಿಸಿದ ಮಾತುಗಳನ್ನು ನೆನಪಿಗೆ ತಂದುಕೊಳ್ಳುತ್ತಿದ್ದಾನೆ.

''ಅದು ಉತ್ತಮದೇಶ. ಅಲ್ಲಿನ ಹಳ್ಳಿಗಳಲ್ಲಿ ನೀರು ಯಾವಾಗಲೂ ಹರಿಯುತ್ತದೆ. ತಗ್ಗು, ಗುಡ್ಡಗಳಲ್ಲಿ, ಬಾವಿ, ಬುಗ್ಗೆಗಳಿಂದ ನೀರು ಉಕ್ಕುತ್ತದೆ. ಅಲ್ಲಗೋದಿ, ಜವೆಗೋದಿ, ದ್ರಾಕ್ಷಿ, ಅಂಜೂರ, ದಾಳಿಂಬೆಗಳು ಸೊಂಪಾಗಿ ಬೆಳೆಯುತ್ತವೆ. ಎಣ್ಣೆಮರಗಳೂ, ಜೇನೂ ಸಿಕ್ಕುತ್ತವೆ. ಅಲ್ಲಿ ದುರ್ಭಿಕ್ಷ ಕೊರತೆಗಳಿಲ್ಲ. ಕಬ್ಬಿಣದ ಕಲ್ಲು, ತಾಮ್ರದ ಗಣಿಗಳು ಇವೆಲ್ಲಾ ಇವೆ''.

ಆದರೆ ಈ ಮಾತುಗಳನ್ನು ಜನರು ಮರೆತು ಧೈರ್ಯಗುಂದಿದ್ದಾರೆ, ತಮ್ಮ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ''ಮೊದಲು ನಮ್ಮಲ್ಲಿ ಕೆಲವರನ್ನು ಕಳುಹಿಸಿ ಆ ಬನ ಹೇಗೋ ಏನೋ ಅವರೆದುರು ನಾವು ನಿಂತು ಬದುಕುಳಿಯುತ್ತೇವೋ ಎಂದೆಲ್ಲಾ ತಿಳಿದುಕೊಂಡು ಆಮೇಲೆ ಪ್ರವೇಶಿಸೋಣ ಎಂದು ಪಟ್ಟು ಹಿಡಿದರು. ಕರ್ತನಿಗೆ ಕೋಪ ಬಂದರೂ, ಅವರ ಮಾತಿಗೆ ಓಗೊಟ್ಟು 12 ಜನರನ್ನು ಆರಿಸಿಕೊಂಡು, ಅವರನ್ನು ಗೂಢಚಾರರನ್ನಾಗಿ ಕಾನಾನ್ ದೇಶಕ್ಕೆ ಕಳುಹಿಸಿದರು. ಅವರಲ್ಲಿ ಕಾಲೇಬನೂ ಒಬ್ಬ.

ಆ 12 ಮಂದಿ ನಾಲ್ವತ್ತು ದಿನ ಕಾನಾನಿನಲ್ಲೆಲ್ಲಾ ಸಂಚರಿಸಿ, ಬರುವಾಗ ಅಲ್ಲಿನ ಫಲಗಳನ್ನು ಹೊತ್ತು ತಂದರು. ಒಂದು ದ್ರಾಕ್ಷಿಗೊಂಚಲನ್ನು ತರಲು ದಂಡಿಗೆಯೇ ಬೇಕಾಯಿತು! ಆದರೆ, ಅವರಲ್ಲಿ ಹತ್ತು ಮಂದಿ ನೆರೆದ ಇಸ್ರಾಯೇಲ್ಯರಲ್ಲಿ ಭಯವನ್ನು ಹುಟ್ಟಿಸಿದರು. '' ಆ ಜನರು ನಮಗಿಂತ ಬಲಿಷ್ಠರು, ಅವರು ಬಹಳ ಎತ್ತರವಾಗಿದ್ದು, ನಾವು ಅವರ ಮುಂದೆ ಮಿಡತೆಗಳಂತೆ ಇರುತ್ತೇವೆ ಅವರು ಉನ್ನತ ಪುರುಷರು, ಅವರ ದೇಶ ನಮ್ಮನ್ನು ನುಂಗಿಹಾಕಿಬಿಡುತ್ತೆ ಎಂದೆಲ್ಲಾ ಹೇಳಿ ಹೆದರಿಸಿದರು.

ಬದಲಾಗಿ ಕಾಲೇಬನು ''ಅದು ಅತ್ಯುತ್ತಮವಾದ ದೇಶ. ಹಾಲೂ ಜೇನೂ ಹರಿಯುವ ನಾಡು, ನಮ್ಮಕಡೆ ದೇವರಿದ್ದಾನೆ, ಭಯವೇಕೆ ? ಎಂದು ಅವರಲ್ಲಿ ಧೈರ್ಯ ತುಂಬಲು ಪ್ರಯತ್ನಿಸಿದನು. ಆದರೆ ಜನರು ಕಿವಿಗೊಡದೆ ಹೋದಾಗ ಕರ್ತನು ಕೋಪಗೊಂಡು ಗದ್ದಲವೆಬ್ಬಿಸಿದವರನ್ನು ತೀವ್ರವಾಗಿ ಶಿಕ್ಷಿಸಿದನು. (ಅರಣ್ಯ 13, 14 ಅಧ್ಯಾಯಗಳು) ಈ ಸಂದರ್ಭದಲ್ಲಿ ಕಾಲೇಬನ ನಿಷ್ಠೆ, ಕರ್ತನಲ್ಲಿ ಆತನಿಗಿದ್ದ ಅಚಲನಂಬಿಕೆ ನಮಗೆ ಮಾದರಿಯಾಗಿದೆ. ಇದರ ಫಲವಾಗಿ ಮುಂದೆ ದೇಶದ ಹಂಚಿಕೆಯಾದಾಗಲೂ ಅದರ ಉಸ್ತುವಾರಿಯನ್ನು ಹೊತ್ತ ನಾಯಕರಲ್ಲಿ ಕಾಲೇಬನೂ ಒಬ್ಬನಾದನು.

ಐಗುಪ್ತವನ್ನು ಬಿಟ್ಟಾಗ ಕಾಲೇಬ್‌ನಿಗೆ 41-44 ವರ್ಷ ವಯಸ್ಸಾಗಿತ್ತು. ಈಗ ಆತನು 84 ವರ್ಷದ ಮುಪ್ಪಿನ ಮುದುಕ. ಆದರೂ, ಆತನಲ್ಲಿ ಜೀವ ಸೆಲೆ ಬತ್ತಿರಲಿಲ್ಲ, ಈಗಲೂ ಅದೇ ಧೀರಯುದ್ಧ ವೀರನಾಗಿ ಬಲಶಾಲಿಗಳಾದ ಅನಾಕ್ಯರನ್ನು ಸೋಲಿಸಿ, ಪರಾಕ್ರಮವನ್ನು ಮೆರೆದ. ಸ್ವಾಸ್ಥದ ಹಂಚಿಕೆಯಲ್ಲಿ ಕಾಲೇಬನಿಗೆ ಉತ್ತಮವಾದ ಹೆಬ್ರೋನ್ ಪ್ರದೇಶ ಇನ್ನೊಂದು ಪ್ರದೇಶವನ್ನು ಗೆದ್ದ ಆತನ ತಮ್ಮ (ಸೋದರಳಿಯ) ಒತ್ನಿಯೇಲನಿಗೆ ತನ್ನ ಮಗಳಾದ ಅಕ್ಸಾಳನ್ನು ಮದುವೆ ಮಾಡಿಕೊಟ್ಟ. (ಯೆಹೋಶಾರ 1:13-16) ನಂತರದ ದಿನಗಳಲ್ಲಿ ಒತ್ನಿಯೇಲನೇ ಇಸ್ರಾಯೇಲ್ಯರ ಮೊದಲ ನ್ಯಾಯ ಸ್ಥಾಪಕನಾದ.

ಇದೆಲ್ಲಾ ಇರಲಿ, ನಮಗೆ ಕಾಲೇಬನ ವ್ಯಕ್ತಿತ್ವದ ಇನ್ನೊಂದು ಮುಖವೂ ಅನುಕರಣೀಯವಾಗಿ ಎದ್ದು ಕಾಣುತ್ತೆ (ಯೆಹೋಶಾವ 14) ಈಗ ಆತನ ವಯಸ್ಸು 84. ಆದರೂ ಆತನು ''ಮೋಶೆಯು ನನ್ನನ್ನು ಕರೆದಾಗ ನನಗೆಷ್ಟು ಬಲವಿತ್ತೋ ಅಷ್ಟೇ ಬಲ ಈಗಲೂ ಇದೆ ಎನ್ನುತ್ತಾನೆ. ಎಷ್ಟು ಜನ ವಯಸ್ಸಾದವರು ಹೀಗೆ ಹೇಳಿಕೊಳ್ಳಲುಸಾಧ್ಯ ? ಮುಂದುವರಿಯುತ್ತಾ ಯುದ್ಧ ಮಾಡುವುದಕ್ಕೂ ವಿಶೇಷಕಾರ್ಯಗಳನ್ನು ನಿರ್ವಹಿಸುವುದಕ್ಕೂ ನನಗೆ ಮುಂಚಿನಂತೆಯೇ ಶಕ್ತಿಯಿರುತ್ತದೆ ಎನ್ನುತ್ತಾನೆ. ಕಾಲೇಬನ ನಿಷ್ಠೆ, ಕಾಲೇಬನ ದಿಟ್ಟತನ, ವಿಧೇಯತೆ, ಭಕ್ತಿ, ದೀ:ತೆಗಳು ಕಾಲೇಬನ ಜೀವನಪ್ರೀತಿ, ಇವು ನಮ್ಮಲ್ಲೂ ಇರಬೇಕಲ್ಲವೆ.

❖

**ಡಾ. ಲೀಲಾವತಿ ದೇವದಾಸ್**
**ಬೆಂಗಳೂರು**

**Statement about ownership and other particulars of "Sneha Jyothi" as required under Rule 8 of the Registration of Newspapers (Central) Rules, 1956**

**Form -IV**
**(See Rule 8)**

| | | | |
|---|---|---|---|
| 1. | Place of Publication | : | Jyothinagar Chikmagalur - 577 102 |
| 2. | Periodicity of Publication | : | Monthly |
| 3. | Printer's Name | : | Smt. H. R. Banashankari |
| | Whether citizen of India | : | Yes |
| | Address | : | Gayathri Printers, Basavanahalli, Chikmagalur - 577 101 |
| 4. | Publisher's Name | : | Rev. Fr. David Prakash |
| | Whether citizen of India | : | Yes |
| | Address | | Jyothinagar Post Chikmagalur - 577 102 |
| 5. | Editor's Name | : | Rev. Fr. David Prakash |
| | Whether citizen of India | : | Yes |
| | Address | : | Jyothinagar Post Chikmagalur - 577 102 |
| 6. | Name and Address of Individual who owns the Newspaper | : | Sneha Jyothi Trust Jyothinagar Post, Chikmagalur - 577 102 |

*I, Rev. Fr. David Prakash, hereby declare that the particulars given above are true to the best of my knowledge and belief.*

Chikmagalur
Date : 03.3.2013

Sd/-
*Rev. Fr. David Prakash*
Signature of the Publisher



ಮುಗಿದುಹೋದ ವಿಷಯಕ್ಕಾಗಿ ಚಿಂತಿಸುತ್ತಾ ಕಣ್ಣೀರನ್ನು ವ್ಯರ್ಥಗೊಳಿಸಬೇಡಿ.

ಭಾಗ -35

# ಯಾವ ಕಪ್ಪೆ ಚಿಪ್ಪಿನೊಳಗೆ - ಅಡಗಿದೆಯೋ ?

ಆರ್. ಜ್ಞಾನಪ್ರಕಾಶ್
ಶಿಕ್ಷಕರು, ಸೇಂಟ್ ಮೇರಿಸ್ ಪ್ರೌಢಶಾಲೆ,
ಮಾರ್ಟಳ್ಳಿ, ಕೊಳ್ಳೇಗಾಲ ತಾ.

ಸ್ನೇಹ ಜ್ಯೋತಿಯಲ್ಲಿ ವಿಜ್ಞಾನ ಜ್ಯೋತಿಯನ್ನು ಬೆಳಗಿಸುತ್ತಿರುವ ನನ್ನಾತ್ಮೀಯ ಓದುಗರೆ,

ಸಾಗರದ ಮುತ್ತೊಂದು ಕಾಲದಲ್ಲಿ ಜಾರಿತ್ತು, ಕಳೆದ ತಿಂಗಳು ನಡೆದ ಮೂರು ಘಟನೆಗಳು ನನ್ನ ಮನಸ್ಸನ್ನು ಕಲುಕಿತು, ಮೊದಲನೆಯದು ಕಳೆದ ಎರಡು ತಿಂಗಳ ಹಿಂದೆ ದೆಹಲಿಯ ಬಸ್ಸಿನಲ್ಲಿ ಅಮಾಯಕ ಹೆಣ್ಣು ಮಗಳ ಮೇಲೆ 6 ಜನ ಚಿತ್ರಹಿಂಸೆ ನೀಡಿ ಅತ್ಯಾಚಾರವೆಸಗಿದ್ರಲ್ಲಾ, ಕಬ್ಬಿಣದ ಸಲಾಕೆಯಿಂದ ಮರ್ಮಾಂಗಕ್ಕೆ ಚುಚ್ಚಿದಾಗ ಆ ಹೆಣ್ಣು ಮಗು ಪಟ್ಟ ಮಾರಣಾಂತಿಕ ನರಕಯಾತನೆ ಊಹೆಗೂ ನಿಲುಕದು. ಬಹುಶ ಕ್ರಿಸ್ತನ ಕಾಲದಲ್ಲಿ ಇಂತಹ ಘಟನೆ ನಡೆದಿದ್ದರೆ ಆತನೇ ಕ್ಷಮಿಸಲಾರನೇನೊ ? ಈಗ ಚಿರನಿದ್ರೆಗೆ ಜಾರಿ ಮಣ್ಣು ಪಾಲಾಗಿದೆ. ಈ ರೀತಿ ಅನುಭವಿಸಿ ಸಾಯಲೆಂದೇ ಆ ಹೆಣ್ಣು ಪಾಪಿಲೋಕದಲ್ಲಿ ಜನ್ಮ ತಾಳಿತೋ ಏನೋ ? ಇಂತಹ ಸಮಯದಲ್ಲಿ ಹಮ್ಮುರಾಬಿಯ ಶಾಸನ ನೆನಪಿಗೆ ಬರುತ್ತದೆ. ''ಕಣ್ಣು ಕಿತ್ತರೆ ಕಿತ್ತವನ ಕಣ್ಣು ಕೀಳಬೇಕು'' - ಮುಯ್ಯಿಗೆ ಮುಯ್ಯಿ ಅಲ್ಲಲ್ಲೇ ಲೆಕ್ಕವನ್ನು ಚುಕ್ತಾ ಮಾಡಬೇಕಿದೆ. ಮತ್ತೊಂದು ವಿಹ್ವಲ ಸಂಗತಿ ನಿಜವಾಗಿ ಕಾಯಕವೇ ಕೈಲಾಸವೆಂದು, ಸಾಮಾಜಿಕ ಕ್ಷೇತ್ರದಲ್ಲಿ ಮಹಾ ಕ್ರಾಂತಿಯನ್ನುಂಟು ಮಾಡಿದ ಲಕ್ಷಾಂತರ ಮಂದಿಗೆ ವಿದ್ಯಾರ್ಜನೆಯನ್ನು ಮಾಡಿರುವ ಝರಿಯನ್ನು ತೊರೆಯನ್ನಾಗಿಸಿದ, ವೃದ್ಧರ ಅಬಲರ ಸೇವೆಯನ್ನು ಮಾಡಲು ಮಕ್ಕಳಿಗೆ (ಬಡ) ಶಾಲಾ ಕಾಲೇಜು ಅನಾಥಶ್ರಮಗಳನ್ನು ತೆರೆದು, ಅಂಧಮಕ್ಕಳಲ್ಲಿ ದೇವರಿದ್ದಾನೆ ಎನ್ನುವ ಆಶಾಕಿರಣ, ಆದಿ ಚುಂಚನಗಿರಿಯ ಮಹಾಸಂಸ್ಥಾಪನದ ಪೀಠಾಧೀಶ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು



ಕಳೆದ ತಿಂಗಳು ಅಸ್ತಂಗತರಾಗಿರುತ್ತಾರೆ. ಶತಮಾನದ ಕೊನೆಯ ಕೊಂಡಿಗಳು ಹಿರಿಯ ಆಧ್ಯಾತ್ಮಕ ಚೇತನಗಳು ಬತ್ತಿ ಹೋಗುತ್ತಿವೆ. ಶ್ರೀಗಳ ಆತ್ಮಜ್ಯೋತಿ ಪರಂಜ್ಯೋತಿಯಲ್ಲಿ ಲೀನವಾಗಿದೆ. ಸಾತ್ವಿಕ ದೇಹ ನಮ್ಮೊಂದಿಗೆ ಇಲ್ಲದಿದ್ದರೂ ಶ್ರೀಗಳ ಸಾಧನೆಗಳು ಸೂರ್ಯ ಚಂದ್ರರಿರುವವರೆಗೂ ಅಜರಾರಮರ.

3ನೆಯ ದುಃಖದ ಸಂಗತಿಯೊಂದಿಗೆ ಈ ತಿಂಗಳ ಲೇಖನಕ್ಕೆ ಇತ್ರಿಶ್ರೀ ಹೇಳುವೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ರಂಗನಾಥರಾವ್ (ಡಾ. ಎಸ್. ಎನ್. ರಾವ್) ಇಂದು ನಮ್ಮನಗಲಿ ಒಂದು ತಿಂಗಳಾಗಿದೆ. ತಮಗೆಲ್ಲಾ ತಿಳಿದಿದೆ. ಪತ್ರಿಕೆಯಲ್ಲಿ ಎಲ್ಲೋ ಒಂದು ಕಡೆ ಓದಿರುತ್ತೀರಿ ಎಂದು ಭಾವಿಸುತ್ತೇನೆ. ಕೆಲವು ಪತ್ರಿಕೆಗಳಲ್ಲಿ ಅಂತೂ ಮೂಲೆಯೆಲ್ಲಿ ಸಣ್ಣದಾಗಿ ಡಾ. ಎಸ್. ಎನ್. ರಾವ್ ಇನ್ನಿಲ್ಲ ಎಂದು ಸಣ್ಣದಾಗಿ ಪ್ರಕಟಿಸಿತು. ದೂರದರ್ಶನದ9ಲ್ಲಿ ಮಾತ್ರ ಕಣ್ಣುರೆಪ್ಪೆ ಮುಚ್ಚಿ ತೆಗೆಯವಷ್ಟರಲ್ಲಿ ಡಾ. ರಾವ್ ಇನ್ನಿಲ್ಲ ಎಂದು ಭಿತ್ತರಿಸಿತು. ಅದೇ ನಟರುಗಳ ಡೈವರ್ಸ್ ಕಥಾನಕವಂತೂ ಬೆಳಗ್ಗೆ 10 ಗಂಟೆಯಿಂದ ರಾತ್ರಿ 11.30 ರವರೆಗೆ ಸತತವಾಗಿ ಭಿತ್ತರಿಸುತ್ತಾ ಇತ್ತು. ಹೇಗಿದೆ ನೋಡಿ ನಿಜ ಸಾದಕನಿಗೂ ಮಿಥ್ಯ ನಾಯಕನಿಗೂ ಇರುವ ಪ್ರಚಾರದ ತಾರತಮ್ಯ!.

ಬರೋಡ ಮಹಾರಾಜರ ಸಂಸ್ಥಾನದ ವ್ಯಾಪ್ತಿಯಲ್ಲಿ ಕೆಲಸ ಮಾಡಿದ ಡಾ., ರಾವ್ 1979ರಿಂದ 1983ರ ವರೆಗೆ ಸಮುದ್ರದಾಳದಲ್ಲಿ ಕೃಷ್ಣನ ದ್ವಾರಕಾ ಪಟ್ಟಣವನ್ನು ಶೋಧಿಸಿದರು. ವಿಶ್ವದ ಪ್ರಾಚ್ಯಶಾಸ್ತ್ರ (ಅರ್ಕಿಯಾಲಜಿ) ಇತಿಹಾಸದಲ್ಲಿ ವಿನೂತನ ಮೈಲಿಗಲ್ಲು ಇದಾಗಿದೆ. ಗುಜರಾತ್ ರಾಜ್ಯದ ದ್ವಾರಕ ಪಟ್ಟಣ ಹಾಗೂ ದ್ವಾರಕಾಧೀಶ ದೇವಾಲಯವನ್ನು ಶೋಧಿಸಿದರು. ಭಾರದೊಂದಿಗೆ ಸಾವಿರಾರು ವರ್ಷದ ಹಿಂದೆ ಅರಬ್ ರಾಷ್ಟ್ರಗಳು ವ್ಯಾಪಾರ ಸಂಬಂಧವನ್ನು ಹೊಂದಿದ್ದ ಗುಜರಾತ್ ರಾಜ್ಯದ ಲೋಥಲ್ ಬಳಿಯ ಸಮುಂದ್ರದಲ್ಲಿ ಹಡಗು ಕಟ್ಟೆ (ಡಾರ್ಕ್ ಯಾರ್ಡ್) ಮಾರ್ಗನನ್ನು ಕಂಡು ಹಿಡಿದರು. ಮಹಾರಾಷ್ಟ್ರದ ಔರಂಗಾಬಾದ್ ವೃತ್ತದ ಅಜಂತಾ, ಎಲ್ಲೋರಾ, ಎಲಿಪೆಂಟಾ ಗುಹೆಗಳ ಬಗ್ಗೆ ಅಧ್ಯಯನ ನಡೆಸಿ ದೇವಾಲಯಗಳನ್ನು ಅಗೆದು ತೆಗೆದು ಜೀರ್ಣೋದ್ಧಾರವನ್ನು ಮಾಡಿದ ಅಧ್ಯಾತ್ಮಿಕ ಜೀವಿಯೂ ಕೂಡ ವಿಜ್ಞಾನಿ ಡಾ. ರಾವ್ ತಾವೇ ಸ್ವತಃ ಸಾಗರದಲ್ಲಿ ಇಳಿದು ಆಳ, ವಿಸ್ತಾರದ ಅರಿವಿನ ಅನುಭೂತಿಯನ್ನೇ ಹೊಂದಿದವರು. ''ಸಾಗರತಳದ ಪ್ರಾಚ್ಯಶಾಸ್ತ್ರ'' (ಮರೈನ್ ಅರ್ಕಿಯಾಲಜಿ) ಎಂಬ ಹೊಸ ವೈಜ್ಞಾನಿಕ ಶಾಖೆಯನ್ನು ಹುಟ್ಟು ಹಾಕಿದರು. ಸಿಂಧೂ ನದಿ ಕಣಿವೆಯ ಹರಪ್ಪ ಮೊಹೆಂಜೊದಾರೊದಲ್ಲಿ ದೊರೆತ ಲಿಪಿ, ಚಿತ್ರಕಲೆಗಳನ್ನು ದ್ವಾರಕಾನಗರದಲ್ಲಿ ದೊರೆತ ಲಿಪಿ ಚಿತ್ರದೊಂದಿಗೆ ವಿಶ್ಲೇಷಿಸಿ, ತಾಳೆನೋಡಿ ಸಿಂಧೂ ನಾಗರೀಕತೆ ಭಾರತದ ಉತ್ತರ ಭಾಗಕ್ಕೆ ಮಾತ್ರ ಸೀಮಿತವಾಗದೇ ಮಧ್ಯ ಪೂರ್ವ ಭಾಗಕ್ಕೂ ವಿಸ್ತರಿಸಿತ್ತು ಎಂದು ತಿಳಿಸಿದ ವಿಶ್ವದ ಏಕೈಕ ಪ್ರಾಚ್ಯಶಾಸ್ತ್ರಜ್ಞ ಡಾ. ರಾವ್ ಇಂದು ನಮ್ಮೊಂದಿಗಿಲ್ಲ ನಮ್ಮನಗಲಿ ಒಂದು ತಿಂಗಳಾಗಿದೆ. ಸಾಗರದಲ್ಲಿ ದೊರೆತ ಮುತ್ತೊಂದು ಸಾಗರದಲ್ಲೇ ಬಿದ್ದಿದೆ. ಯಾವ ಕಪ್ಪೆ ಚಿಪ್ಪಿನೊಳಗೆ ಅಡಗಿ ಶೋಧನೆಗಾಗಿ ಪರಿತಪಿಸುತ್ತಿದೆಯೋ ಡಾ. ರಾವರವರ ಆತ್ಮ ಒಟ್ಟಿನಲ್ಲಿ ಕಳೆದ ಎರಡು ತಿಂಗಳಲ್ಲಿ ನೂರಾರು ಮಂದಿ ಕಣ್ಮುಚ್ಚಿದ್ದಾರೆ. ಸಾವಿರಾರು ಜನ್ಮಗಳು ಕಳೆಯಿಂದ ಇಳೆಗೆ ಧುಮುಕ್ಕಿವೆ, ಎಲ್ಲೋ ಒಂದು ಗರ್ಭದಿಂದ ದೆಹಲಿಯ ಆ ಹೆಣ್ಣು ಮಗಳು ಜನಸಿದ್ದಾಳೊ, ಶ್ರೀಗಳು ಉದಯಿಸಿದಾರೋ, ಊಹುಂ.... ಉತ್ತರ ಸಿಗದೇ.... ಮೌನಕ್ಕೆ ಜಾರಿದ್ದೇನೆ... ಕ್ಷಮಿಸಿ..



ಶಾಶ್ವತವಾದ ಗೌರವಬೇಕೆ ? ಹೃದಯ ಪೂರ್ವಕವಾಗಿ ಸಮಾಜ ಸೇವೆ ಮಾಡಿ.

# ಥೈರಾಯಿಡ್ ಕ್ಯಾನ್ಸರ್

ಡಾ. ಸಿ. ಎಸ್. ಜಗದೀಶ್
ಹಾಸನ

ಥೈರಾಯಿಡ್ ಕ್ಯಾನ್ಸರ್ ಯಾವ ಕಾರಣಕ್ಕೆ ಬರಬಹುದು ?

ನಲ್ವತ್ತರನಂತರ ಇದು ಕಾಣಿಸಿ ಕೊಳ್ಳಬಹುದು. ಯಾರು ವಿಕಿರಣಕ್ಕೆ ಒಳಗಾಗಿರುತ್ತಾರೆಯೋ ಅವರಲ್ಲಿ ಇದು ಹೆಚ್ಚು ವಿಕಿರಣವೆಂದರೆ ಅನವಶ್ಯಕ ಕುತ್ತಿಗೆಯ ಫಿಸಿಯೋಥೆರಫಿ, ಗುತ್ತಿಗೆಯ ಎಕ್ಸರೇ, ಅತಿಯಾದ ಮೊಬೈಲ್ ಬಳಕೆ.

ಕುತ್ತಿಗೆಯ ಭಾಗಕ್ಕೆ ಎಕ್ಸರೇ ಹಾಗೂ ಗ್ಯಾಮರೇ ಎಂಬ ವಿಕಿರಣಕ್ಕೆ ಈಡಾವವದವರಿಗೆ ಪ್ಯಾಪಲ್ಲರೀ ಹಾಗೂ ಫಾಲಿಕ್ಯುಲರ್ ಎಂಬ ವೈವಿಧ್ಯತೆ ಹೆಚ್ಚೆಂದು ಸಾಬೀತಾಗಿದೆ. ಚಿಕ್ಕವಯಸ್ಸಿನಲ್ಲಿ ಎಕ್ಸರೇಗೆ ಈಡಾದಲ್ಲಿ ಇದರ ಸಾಧ್ಯತೆ ಹೆಚ್ಚುತ್ತಾ ಹೋಗುತ್ತದೆ. ಹಿರೋಷಿಮಾ ನಾಗಾಸಾಕಿಯಲ್ಲಿನ ಅಣುಬಾಂಬ್ ವಿಸ್ಫೋಟದ ನಂತರ ಅಲ್ಲಿ ಈ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಂಡಿರುತ್ತದೆ. ನಾವು ಸೇವಿಸುವ ಐಯೋಡಿನ್ ಎಂಬ ಉಪ್ಪಿನ ಭಾಗವು ಸೇವಿಸುವ ಮುನ್ನ ರೇಡಿಯೋ ಆಕ್ಟೀವ್ ಎಂಬ ವಿಕಿರಣ ಪ್ರಸರಣಕ್ಕೆ ಪ್ರಾರಂಭವಾಗಿದ್ದಲ್ಲಿ, ಈ ಕ್ಯಾನ್ಸರ್ ಸಾಧ್ಯತೆ ಹೆಚ್ಚಾಗಬಲ್ಲದು ಎಂದು ಗಮನಿಸಲಾಗಿದೆ. ಒಂದು ಅಧ್ಯಯನದ ಪ್ರಕಾರ ಐಯೋಡಿನ್ ಎಂಬ ಉಪ್ಪಿನ ಅಂಶ ಆಹಾರದಲ್ಲಿ ಕೊರತೆಯಾದಗಲೂ ಸಹ ಈ ಕ್ಯಾನ್ಸರ್ ಸಾಧ್ಯತೆ ಹೆಚ್ಚುತದೆಯಂತೆ. ಆದರೂ ಈ ಅಂಶ ಇನ್ನೂ ವೈಜ್ಞಾನಿಕ ಜಿಜ್ಞಾಸೆಯಾಗಿಯೇ ಉಳಿದಿದೆ.

ಆಹಾರದಲ್ಲಿ ಸೇವಿಸುವ ಎಲೆಕೋಸು ಹಾಗೂ ಹೂ ಕೋಸುಗಳ ಅಧಿಕ ಸೇವನೆಯೂ ಈ ನಿಟ್ಟಿನಲ್ಲಿ ಸ್ವಲ್ಪ ಅಪಾಯಕಾರಿ ಎಂದು ಗೊತ್ತಾಗಿದೆ.

ಈ ಕ್ಯಾನ್ಸರ್ ಮಹಿಳೆಯರಲ್ಲಿ ಪುರುಷರಿಗಿಂತ ಮೂರು ಪಟ್ಟು ಅಧಿಕ ಹಾಗೂ 45 ರ ಆಸುಪಾಸಿನಲ್ಲಿಯೇ ಹೆಚ್ಚಾಗಿ ಕಂಡು ಬರುತ್ತದೆ. ಆದರೆ ವಿಶ್ಲೇಷಣೆಗಳಿಂದ ಮುಟ್ಟಿನ ಚಕ್ರಗಳಿಗೂ ಮತ್ತು ಚಕ್ರದ ಸಂತಾನ ಸಂಬಂಧಿತ ವಿಷಯಗಳಿಗೂ ಹಾಗೂ ಹೆಂಸರಗಲ್ಲಿ ಈ ಕ್ಯಾನ್ಸರ್ ಅಧಿಕ ಇರುವಿಕೆಗೂ ಯಾವ ಸಂಬಂಧವನ್ನೂ ಗುರುತಿಸಲಾಗಿಲ್ಲ. ನಮ್ಮ ಜನರಲ್ಲಿ ಐಯೋಡೈಸ್ಡ್ ಉಪ್ಪಿನ ಕೊರತೆ ಅಥವಾ ಅಧಿಕ ಉಪಯೋಗದಿಂದಾಗಿ ಕಾಣಿಸಿಕೊಳ್ಳುವ ಗಳಗಂಟೆ (ಕುತ್ತಿಗೆಯ ಮುಂಭಾಗದ ಗಂಟುಗಳೂ ಹಾಗೂ ಇನ್ನಿತರೇ ಬಿನೈನ್ ಗಡ್ಡೆಗಳು) ಅತ್ಯಂತ ವಿರಳವಾಗಿ ಈ ಕ್ಯಾನ್ಸರ್ ಆಗಿ ಪರಿವರ್ತನೆಯಾಗುವ ಸಾಧ್ಯತೆಯೂ ಇಲ್ಲದಿಲ್ಲ. ಇದನ್ನೂ ಕೂಡ ಇನ್ನೂ ವೈಜ್ಞಾನಿಕವಾಗಿ ವಿಶ್ಲೇಷಣೆ ಗೊಳಪಡಿಸ ಬೇಕಾಗಿದೆ.

ಅತ್ಯಂತ ಅಪರೂಪವಾಗಿ ಫಾಲಿಕ್ಯುಲರ್ ಹಾಗೂ ಪ್ಯಾಪಲ್ಲರೀ ವೈವಿಧ್ಯತೆಗಳು ಕೆಲವೊಂದು ಸಂಸಾರ ವಾಹಿನಿಯಾಗಿ ಕಾಣಿಸಿಕೊಳ್ಳಬಹುದು ಹಾಗೂ ಇವೆಲ್ಲವೂ ಅನೇಕ ಅಪರೂಪದ ಸಿಂಡ್ರೋಮ್ ವಿವಿಧ ಚಿಹ್ನೆಯುಳ್ಳ ಕಾಯಿಲೆಗ ಳಲ್ಲಿ ಮಾತ್ರ ಅಪರೂಪವಾಗಿ ಕಾಣಿಸಿ ಕೊಳ್ಳಬಹುದು.

ಗಮನಿಸಿ : ಇದು ಅತ್ಯಂತ ಅಪರೂಪ, ಚಿಂತೆಬೇಡ, ಇವು ಹೆರಿಡಿಟರಿ ಮೆಡ್ಯಲರಿ ಥೈರಾಯಿಡ್ ಕ್ಯಾನ್ಸರ್ ಎಂಬ ವೈವಿಧ್ಯತೆಯಲ್ಲಿ 4 ನೇ ಕೋಡಾನ್ ಎಂಬಲ್ಲಿನ ಜೀನ್‌ಗಳಿಂದ ಬಂದಿರಬಹುದಾಗಿರುತ್ತದೆ ಎಂದು ಇತ್ತೀಚೆಗೆ ಗುರುತಿಸಲಾಗಿದೆ. ಆದರೂ ವಂಶವಾಹಿನಿಯ ಥೈರಾಯಿಡ್ ಕ್ಯಾನ್ಸರ್ ಅತೀ ಅಪರೂಪ.

ಕ್ಯಾನ್ಸರ್ ಸೂಚನೆಗಳು : ಈ ಕ್ಯಾನ್ಸರ್ ಅತೀ ಮೊದಲ ಹಂತದಲ್ಲಿ ಹೆಚ್ಚು ಚಿಹ್ನೆಗಳನ್ನು ಉಂಟುಮಾಡದಿರಬಹುದು. ಕೆಲವೊಂದು ಸಣ್ಣ ಸಣ್ಣ ಗಂಟುಗಳು ಕುತ್ತಿಗೆಯ ಮುಂಭಾಗದಲ್ಲಿ ಕಾಣಿಸಿಕೊಂಡರೂ ಅವೆಲ್ಲಾ ಕ್ಯಾನ್ಸರ್ ಆಗಿರುವ ಸಾಧ್ಯತೆ ಅತೀ ಕಡಿಮೆ. ಆದರೆ ಈ ಗಂಟುಗಳೂ ಶೀಘ್ರವಾಗಿ ದೊಡ್ಡದಾಗುತ್ತಿದ್ದಾಗ ಹಾಗೂ ಆ ಗಂಟುಗಳಲ್ಲಿ ನೋವುಂಟಾದಾಗ ತಪಾಸಣೆ ಅತೀ ಅವಶ್ಯಕ.

ಈ ಗಂಟುಗಳು ಕ್ಯಾನ್ಸರ್ ಆಗಿದ್ದಾಗ್ಯೆ ಧ್ವನಿ ಬದಲಾವಣೆ, ನುಂಗಲು ಅಡಚಣೆ ಹಾಗೂ ಉಬ್ಬಸದಂತಹ ಚಿಹ್ನೆಗಳ ಸಾಧ್ಯತೆ ಮುಂದುವರೆದ ಹಂತದಲ್ಲಿ ಮಾತ್ರ ಸಾಧ.

ಈ ಥೈರಾಯಿಡ್ ಕ್ಯಾನ್ಸರ್‌ನ್ನು ಹೇಗೆ ತಪಾಸಣೆ ಮಾಡಬಹುದು ?

ನೇರ ಬಯಾಪ್ಸಿಯ ಮೂಲಕ ಥೈರಾಯಿಡ್ ಗಂಟುಗಳನ್ನು ತಪಾಸಣೆಗೊಳ ಪಡಿಸಬಹು ದಾಗಿದೆ ಅಥವಾ ಶಸ್ತ್ರ ಚಿಕಿತ್ಸೆಯ ಮೂಲಕ ಪೂರ್ಣವಾಗಿ ತೆರೆದ ನಂತರವೂ ಈ ಸಣ್ಣ ಗಡ್ಡೆಗಳನ್ನು ತಪಾಸಣೆಗಳೊಳ ಪಡಿಸಬಹುದಾ ಗಿದೆ. ಥೈರಾಯಿಡ್ ಗ್ರಂಥಿಯಲ್ಲಿ ಗಂಟುಗಳು ಸಾಮಾನ್ಯವಾಗಿ ಕಾಣಿಸಿಕೊಂಡರೂ ಸಹ 10 ಗಂಟುಗಳಲ್ಲಿ ಕೇವಲ ಒಂದು ಗಂಟು ಮಾತ್ರ ಈ ಕ್ಯಾನ್ಸರ್ ಸಾಧ್ಯತೆ ಹೊಂದಿರುತ್ತದೆ.

ಅಪರೂಪಕ್ಕೆ ಥೈರಾಯಿಡ್ ಗ್ರಂಥಿಯಲ್ಲಿ ಮೇಲ್ನೋಟಕ್ಕೆ ಯಾವುದೇ ಬದಲಾವಣೆ ಇಲ್ಲದಿದ್ದಾಗಲೂ ಸಹ ಆಸುಪಾಸಿನ ಲಿಂಫ್ಸ್ ಗ್ರಂಥಿಗಳಲ್ಲಿ ಇದರಂತೆ ಕ್ಯಾನ್ಸರ್ ಹರಡಿಬಿಟ್ಟಿರ ಬಹುದಂಥ ಸಂದರ್ಭಗಳು ಸಾಧ್ಯವಿದೆ. ಆದರೂ ಇದೂ ಕೂಡ ಅತೀ ವಿರಳ. ಅತೀ ಸಂಕೀರ್ಣವಾದ ಹಾಗೂ ವಿಶೇಷವಾದ ಅಲ್ಟ್ರಾಸೋನೋಗ್ರಫಿ ಪರೀಕ್ಷೆಯಿಂದ ಸಣ್ಣಸಣ್ಣ ಗಂಟುಗಳನ್ನೂ ನಿಖರವಾಗಿ ಗುರುತಿಸಬಹು ದಾಗಿದೆ. ಆದರೂ ಈ ಪರೀಕ್ಷೆಯಿಂದ ಗುರುತಿಸಿದ ಗಂಟುಗಳು ಸಾಮಾನ್ಯವೋ ಅಥವಾ ಕ್ಯಾನ್ಸರ್‌ಗಳೋ ಎಂದು ಗುರುತಿಸು ವುದು ಸೂಜಿ ಪರೀಕ್ಷೆಯಿಂದ ಹಾಗೂ ಶಸ್ತ್ರ ಚಿಕಿತ್ಸೆಯ ಮೂಲಕ ಬಯಾಪ್ಸಿ ಮಾಡಿದಾಗ ಮಾತ್ರ ಈ ಕ್ಯಾನ್ಸರ್ ತಪಾಸಣೆ ನಿಖರವಾಗ ಬಲ್ಲದು. ಅಲ್ಟ್ರಾಸೌಂಡ್ ಪರೀಕ್ಷೆಯ ಮೂಲ ಕವೂ ಸೂಚಿ ಪರೀಕ್ಷೆ ಮಾಡುವುದು ಸುಲಭ ಸಾಧ್ಯ.

ಥೈರಾಯಿಡ್ ಕ್ಯಾನ್ಸರ್ ಚಿಕಿತ್ಸೆ ಸಾಧ್ಯವೇ ?

ಮೊತ್ತ ಮೊದಲ ಚಿಕಿತ್ಸೆ - ಶಸ್ತ್ರ ಚಿಕಿತ್ಸೆಯ ಮೂಲಕವೇ ಇದಾದ ನಂತರ ಥೈರಾಯಿಡ್ ಹಾರ್ಮೋನ್‌ಗಳ ಸೇವನೆ ಜೀವನ ಪರ್ಯಂತ ಬೇಕಾಗಿರುತ್ತದೆ.

ಕಡಿಮೆ ಪ್ರಖರತೆಯುಳ್ಳ ಪ್ಯಾಪಿಲ್ಲರಿ ವಿಧದಲ್ಲಿ ಇಷ್ಟೇ ಚಿಕಿತ್ಸೆ ಸಾಕಾಗುತ್ತದೆ. ಇದರಲ್ಲಿ ಕ್ಯಾನ್ಸರ್ ಮರುಕಳಿಸುವುದು ಅತೀ ಅಪರೂಪ.

ಶಸ್ತ್ರಚಿಕಿತ್ಸೆಯೇ ಅತೀ ಮುಖ್ಯ ಮಾರ್ಗ. ಇದನ್ನು ಕ್ಯಾನ್ಸರ್ ತಜ್ಞರಿಂದ ಮಾಡಿಸು ವುದೇ ಅತೀ ಉತ್ತಮ. ಬಿನೈನ್ ಗಂಟುಗಳನ್ನು ತೆಗೆಸುವ ಅವಶ್ಯಕತೆ ಇಲ್ಲ. ಕೇವಲ ಅಲ್ಟ್ರಾ ಸೌಂಡ್ ತಜ್ಞರಿಂದ ಆಗಾಗ್ಯೆ ಪರೀಕ್ಷಿಸಿಕೊಂಡರೆ ಸಾಕಾಗುತ್ತದೆ.

ಶಸ್ತ್ರಚಿಕಿತ್ಸೆಯಲಲ್ಲಿ ಲೋಬೆಕ್ಟಮಿ ಎಂಬ ಸ್ವಲ್ಪ ಭಾಗದ ಶಸ್ತ್ರ ಚಿಕಿತ್ಸೆ, ಸಬ್‌ಟೋಟಲ್ ಥೈರಾಯಿಡೆಕ್ಟಮಿ, ನಿಯರ್ ಟೋಟಲ್ ಥೈರಾ ಯಿಡೆಕ್ಟಮಿ ಹಾಗೂ ಟೋಟಲ್ ಥೈರಾಯಿಡ ಕ್ಟಮಿಯಂತಹ ವೈವಿಧ್ಯತೆಗಳಿದ್ದು ಅದನ್ನು ರಿಪೋರ್ಟ್‌ನ ಆಧಾರದ ಮೇಲೆ ಹಾಗೂ ಹಂತಗಳನ್ನು ಆಧರಿಸಿ ಕ್ಯಾನ್ಸರ್ ತಜ್ಞರೇ ನಿರ್ಧರಿಸಬಲ್ಲರು. ಮುಂದುವರೆದ ಹಂತದಲ್ಲಿ ಯೂ ಸಹ (ಕುತ್ತಿಗೆಯ ಅನೇಕ ಭಾಗಗಳಲ್ಲಿ ಹರಡಿದಾಗ್ಯೂ) ಶಸ್ತ್ರ ಚಿಕಿತ್ಸೆಯಿಂದ ಗುಣ ಸಾಧ.ಯ.

ಈ ಶಸ್ತ್ರ ಚಿಕಿತ್ಸೆಯ ನಂತರ ರೇಡಿಯೋ ಆಕ್ಟಿವ್ ಆಯೋಡಿನ್ ಎಂಬ ಚಿಕಿತ್ಸೆ ಕೆಲವೊಮ್ಮೆ ಬೇಕಾಗುತ್ತದೆ. ❖



ನಿನ್ನ ನೀನು ಹೇಗೆ ಭಾವಿಸುವಿಯೋ ಹಾಗೆಯೇ ಆಗುವೆ.

# ಚುಕ್ಕಿ ತುಂಬಲಿ ಬಾಲ್ಯ ಬಾನಲಿ

ಅಂದು ಹಾಸನದ ಪಕ್ಕದಲ್ಲಿರುವ ಒಂದು ಹಳ್ಳಿಯಲ್ಲಿನ ಶಾಲೆಗೆ ಮಕ್ಕಳಿಗಾಗಿ ನಾಯಕತ್ವ ಶಿಬಿರವನ್ನು ನಡೆಸಲು ಹೋಗಿದ್ದೆ. ಶಿಬಿರವನ್ನು ಮುಗಿಸಿ ಮನೆಗೆ ಹಿಂತಿರುಗಲು ಬೈಕ್‌ನತ್ತ ಹೋಗುತ್ತಿದ್ದಾಗ ಆರನೇ ತರಗತಿಯ ಪುಟ್ಟ ಬಾಲಕನೊಬ್ಬ ನನ್ನ ಹಿಂದೆ ಓಡಿ ಬಂದು, "ಫಾದರ್, ದಯವಿಟ್ಟು ನನ್ನ ಅಪ್ಪ ಅಮ್ಮನಿಗಾಗಿ ಪ್ರಾರ್ಥನೆ ಮಾಡಿ", ಎಂದ. ಅವನ ಮುಖದಲ್ಲಿ ಏನೋ ಒಂದು ರೀತಿಯ ನೋವು ತುಂಬಿಕೊಂಡಿತ್ತು. ಅವನ ತಂದೆ-ತಾಯರಿಬ್ಬರೂ ಯಾವುದಾದರೂ ಕಾಯಿಲೆಗೆ ಗುರಿಯಾಗಿರಬಹುದೆಂದೇ ಊಹಿಸಿ, "ಯಾಕೆ?..... ಏನಾಯ್ತುವರಿಗೆ?"ಎಂದೆ. ಆ ಪುಟ್ಟ ಬಾಲಕ ತನ್ನೆಲ್ಲಾ ಮುಗ್ಧತೆಯಿಂದ, "ಫಾದರ್, ದಿನಾ ನಮ್ಮಪ್ಪ ಕುಡ್ದು ಬರ್ತಾರೆ.......ಅಮ್ಮನ ಜೊತೆ ಜಗ್ಳ ಆಡ್ತಾರೆ, ಅಮ್ಮನ ಹೊಡೀತ್ತಾರೆ....ನೋಡಿ ನೋಡಿ ಸಾಕಾಗಿದೆ ಫಾದರ್", ಎಂದ ಆ ಪುಟ್ಟ ಮಗುವಿನ ನೋವನ್ನು ಅರಿತು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಲೆಂದೇ ತೋಚದೆ ಒಂದ್ನಿಮಿಷ ಅಲ್ಲೇ ಅವಕ್ಕಾಗಿ ನಿಂತುಬಿಟ್ಟಿದ್ದೆ ನಂತರ, "ಸರಿ ಅವರಿಗಾಗಿ ಪ್ರಾರ್ಥನೆ ಮಾಡ್ತೀನಿ" ಎನ್ನುತ್ತಾ ಗಾಡಿ ಸ್ಟಾರ್ಟ್‌ಮಾಡಿ ಹಾಸನದತ್ತ ಪ್ರಯಾಣ ಬೆಳೆಸಿದ್ದೆ. ಸುಮಾರು ಏಳೆಂಟು ವರ್ಷಗಳ ಹಿಂದೆ ನಡೆದ ಘಟನೆ ಇದು ಅದನ್ನೀಗ ನೆನಸಿಕೊಂಡರೂ ನನ್ನ ಮೈಯಲ್ಲಿ ವಿದ್ಯುತ್ ಹರಿದಂತೆ ಭಾಸವಾಗುತ್ತದೆ. 'ಆ ತಂದೆ ಪುಣ್ಯಾತ್ಮನಿಗೆ ಒಂದಿಷ್ಟು ಮನಸಾಕ್ಷಿ, ಇದ್ದಿದ್ದರೆ ನಿರಂತರ ಕುಡಿದು ಬಂದು ತನ್ನ ಮಕ್ಕಳ ಮುಂದೆ ಜಗಳಾಡುತಿದ್ದನೆ?, ಹೆಂಡ್ತಿ-ಮಕ್ಕಳ ಮನಸನ್ನು ದಿನಾ ನೋಯಿಸುತ್ತಾ, ಅವರಿಗೆ ಮಾನಸಿಕ ಹಿಂಸೆ ಕೊಡುತ್ತಿದ್ದನೆ? ಎಂಬ ಪ್ರಶ್ನೆ ಅದೆಷ್ಟೋ ಸಲ ನನ್ನ ಮನಸಲ್ಲಿ ಮೂಡಿದೆ.

ನನಗೆ ತಿಳಿದಿರುವ ಮಟ್ಟಿಗೆ, ಮಕ್ಕಳ ವಿರುದ್ಧ ನಡೆಯುವಷ್ಟು ದೌರ್ಜನ್ಯ ಮತ್ತ್ಯಾರ ವಿರುದ್ಧ ನಡೆಯುವುದೇ ಇಲ್ಲ. ಶ್ರೀಮಂತರು, ಬಡವರು ಎಂಬ ತಾರತಮ್ಯವಿಲ್ಲದೆ ಮುಗ್ಧ ಮಕ್ಕಳನ್ನು ಹಿಂಸೆಗೆ ಗುರಿಮಾಡುವ ಪೋಷಕರು ಅದೆಷ್ಟೋ ಜನ ನಮ್ಮ ಸಮಾಜದಲ್ಲಿದ್ದಾರೆ. ಮಕ್ಕಳಿಗೆ ಊಟ, ಬಟ್ಟೆ ಸೂರು ಕೊಟ್ಟರೆ ಸಾಲದು. ಅವರನ್ನು ಗೌರವಿಸಬೇಕು. ಅವರ ಭಾವ-ಭಾವನೆಗಳಿಗೆ ಸ್ಪಂದಿಸಬೇಕು. ಎಲ್ಲಕ್ಕಿಂತ ಮಿಗಿಲಾಗಿ ಅವರನ್ನು ಪ್ರೀತಿಸಬೇಕು, ಅವರನ್ನು ಪ್ರೀತಿಸುತ್ತಿರುವ ವಾಸ್ತವ ಮಕ್ಕಳಿಗೂ ಗೊತ್ತಾಗಬೇಕು.

ಮಕ್ಕಳನ್ನು ಹೆರುವುದಕ್ಕೆ ಮಾತ್ರ ತಮ್ಮ ಪಾತ್ರ ಮೀಸಲು ಎಂಬ ಭಾವನೆ ಅದೆಷ್ಟೋ ಪೋಷಕರಲ್ಲಿದೆ. ಪೋಷಕರ ಹೊಣೆ ಆರಂಬವಾಗೋದೆ ತಮ್ಮ ಮುದ್ದಿನ ಮಕ್ಕಳನ್ನು ಮಡಿಲಲ್ಲಿ ಪಡೆದಾಗ. ಆದರೆ, ಇಂದು ಮಕ್ಕಳು ಒಳಗಾಗುತ್ತಿರುವ ಕೆಲವಾರು ಸಮಸ್ಯೆಗಳತ್ತ ಕಣ್ಣಾಯಿಸಿದರೆ ಮಕ್ಕಳ ಭವಿಷ್ಯ ತುಂಬಾ ಕಷ್ಟಕರವಾಗಿದೆ ಎಂಬ ಸತ್ಯ ವ್ಯಕ್ತವಾಗದಿರದು. ಬಾಲ್ಯವಿವಾಹ, ದೇವದಾಸಿ ಪದ್ದತಿ, ಜೀತಪದ್ದತಿ, ಅನಕ್ಷರತೆ, ಬಾಲಕಾರ್ಮಿಕತೆ, ಕೌಟುಂಬಿಕ ಕಲಹಗಳಿಂದ ಮನೆ ತೊರೆಯಬೇಕಾದ ದುರದೃಷ್ಟ. ಬೀದಿಗೆ ಬಂದಿರುವ ಮಕ್ಕಳು ಮಾನಸಿಕ ಮತ್ತು ದೈಹಿಕ ತೊಂದರೆಗೆ ಒಳಗಾಗಿರುವವರು, ಅಕ್ರಮ ಮಾರಾಟಕ್ಕೆ ತುತ್ತಾಗಿ ಮಾನಹರಣೆಕ್ಕೆ ತುತ್ತಾಗಿರುವವರು............ ಹೀಗೆ ಮಕ್ಕಳ ವಿರುದ್ಧ ನಡೆಯುವ ಕೃತ್ಯಗಳ ಪಟ್ಟಿ ದೊಡ್ಡದಾಗುತ್ತಲೇ ಹೋಗುತ್ತದೆ.

ಸರ್ಕಾರ ಸಂಘ-ಸಂಸ್ಥೆಗಳು ಎಷ್ಟೇ ದುಡಿದರೂ, ಶ್ರಮಿಸಿದರೂ ಪೋಷಕರಿಗೆ ತಮ್ಮ ಮಕ್ಕಳ ಬಗ್ಗೆ ಪ್ರೀತಿ ಕಾಳಜಿ ಮೂಡದಿದ್ದರೆ ಅಷ್ಟೆ. ಯಾರೂ ಈ ಸಮಸ್ಯೆಯಿಂದ ಮಕ್ಕಳನ್ನು ಪಾರುಮಾಡಲಾರರು. ಈ ವಾಸ್ತವ ಮತ್ತೇ ಸಹಜ ಸ್ಥಿತಿಗೆ ಎಂದೂ ಬಾರದು. ಮಕ್ಕಳ ಬಾಲ್ಯವನ್ನು ಚೆಲುವುಗೊಳಿಸುವುದು ಪೋಷಕರ ಅದ್ಯ ಕರ್ತವ್ಯಗಳಲ್ಲೊಂದು, ಕಳೆದುಹೋದ ಬಾಲ್ಯ ಮತ್ತೆಂದೂ ಮರುಕಳಿಸದು. ಅದು ಹಿರಿಯರ ಅನುಭವ ತಾನೆ? ಈ ನಿಟ್ಟಿನಲ್ಲಿ ಮಕ್ಕಳು ಬಾಲ್ಯದಲ್ಲಿ ಬಾಲ್ಯದ ಸೊಗಸನ್ನು ಸವಿಯುವಂತೆ ಮಾಡುವುದು ಪೋಷಕರ ಹೊಣೆ.

ಇಂದು ಅಬಲ ಮಕ್ಕಳು ಅನುಭವಿಸದ ಕಹಿ ಅನುಭವಗಳಿಲ್ಲ ಒಳಗಾಗದ ಶೋಷಣೆಗಳಿಲ್ಲ. ಅವರನ್ನು ಅರ್ಥಮಾಡಿಕೊಂಡು ಅವರ ಕನಸುಗಳನ್ನು ನನಸುಮಾಡೋರೂ ಕಮ್ಮಿ ಆಗುತ್ತಿದ್ದಾರೆ. ಅವರ ಹಕ್ಕುಗಳಿಗೆ ಆದ್ಯತೆ ನೀಡಿ ಅವುಗಳ ಪೂರೈಕೆಗಾಗಿ ಎಷ್ಟು ಜನ ಶ್ರಮಿಸುತ್ತಿದ್ದಾರೆ? ನಮ್ಮಲ್ಲಿ ಎಷ್ಟು ಜನರಿಗೆ ಮಕ್ಕಳ ಹಕ್ಕುಗಳ ಬಗ್ಗೆ ಅರಿವಿದೆ?

ಆ ಪುಟ್ಟ ಬಾಲಕ ತಮ್ಮ ತಂದೆ ತಾಯರಿಗೆ ವಿಚ್ಛೇದನೆ ನೀಡಲು ಮುಂದಾದ. ಮಾಧ್ಯಮದವರು ಅವನ ಬಾಲಕನ ತಂದೆಯನ್ನು ಕೇಳಿದರು, "ನಿಮ್ಮ ಮಗ ನಿಮಗೆ ವಿಚ್ಛೇದನೆ ನೀಡಲು ಬಯಸಿರುವನಲ್ಲ ಯಾಕೆ?"

ತಂದೆ ಕಣ್ಣೀರಿಡುತ್ತಾ ನುಡಿದ "ನನ್ನ ಮಗನಿಗೆ ಬೇಕಾದುದೆಲ್ಲವನ್ನು ನೀಡಿದ್ದೇನೆ. ಇಲ್ಲಿಯವರೆಗೂ ಯಾವುದನ್ನೂ ನಾನು ನಿರಾಕರಿಸಿಲ್ಲ. ಆದರೂ ಅವನ್ಯಾಕೆ ವಿಚ್ಛೇದನೆ ಬಯಸುತ್ತಿದ್ದಾನೋ ಗೊತ್ತಿಲ್ಲ......"

ತಂದೆಯ ಮಾತಿಗೆ ಆ ಬಾಲಕ ಪ್ರತಿಕ್ರಿಯಿಸಿದ ಪರಿ ಇದು, "ಹೌದು, ನಿಜ. ನನ್ನ ತಂದೆ ನನಗೆ ಬೇಕಾಗಿದ್ದ ವಸ್ತುಗಳನ್ನೆಲ್ಲ ಕೊಡಿಸಿದ್ದಾರೆ. ಆದರೆ ಪ್ರೀತಿಯನ್ನಂತು ಅವರು ಇಲ್ಲಯವರೆಗೂ ಕೊಡಲೇ ಇಲ್ಲ ಅವರ ಪ್ರೀತಿಗಾಗಿ ಪ್ರತಿ ದಿನ, ಪ್ರತಿ ಕ್ಷಣ ಹಾತೊರೆಯುತ್ತಿದ್ದೆ........." ಅದಕ್ಕೆ ನಾನು ಮೊದಲೇ ಹೇಳಿದ್ದು, 'ಮಕ್ಕಳನ್ನು ಪ್ರೀತಿಸಿದರೆ ಸಾಲದು, ಆ ಸತ್ಯ ಮಕ್ಕಳಿಗೂ ಗೊತ್ತಾಗಬೇಕು" ಅಂತ.

ಸಮಾಜದಲ್ಲಿ ಬೆಳೆದು ನಿಂತಿರುವ ನಾವು ಈಗಲೂ ನಮ್ಮೆಲ್ಲಾ ಅನುಭವ, ತರಬೇತಿ, ಕಲಿಕೆ ಇತ್ಯಾದಿಗಳನ್ನೆಲ್ಲ ಹೊತ್ತುಕೊಂಡು ನಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಎಷ್ಟೊಂದು ಕಷ್ಟಪಡುತ್ತೇವಲ್ಲವೆ? ಬಲಿತು, ಬೆಳೆದು ನಿಂತಿರುವ ನಮಗೇ ಆ ರೀತಿಯ ಕಷ್ಟಗಳಿದ್ದರೆ ಇನ್ನೂ ನಮ್ಮ ಮಕ್ಕಳು ಎಷ್ಟೊಂದು ಕಷ್ಟ ಪಡುತ್ತಿರಬಹುದು ಒಮ್ಮೆ ಯೋಚಿಸಿ.

ನನ್ನ ಅಕ್ಕನ ಮಗ ಜಗದೀಶ್‌ಗೆ ಶಾಲೆಗೆ ಹೋಗುವಷ್ಟು ಕಷ್ಟದ ಕೆಲಸ ಬೇರ್‍ಯಾವುದೂ ಇಲ್ಲ. ಶಾಲೆಗೆ ಹೋಗಬೇಕಾದ ಮೊದಲನೇ ದಿನ, ಪರೀಕ್ಷಾ ದಿನ ಈಗಲೂ ಅವನಿಗೆ ಯಾರಿಗೂ ಗೊತ್ತಿಲ್ಲದ ಜ್ವರ ಬರುತ್ತದೆ. ಶಾಲೆಗೆ ಹೋಗದಿರಲು ಒಂದು ಚಿಕ್ಕ ನೆಪ ಸಿಕ್ಕರೆ ಸಾಕು ಯಾವುದೇ ಮುಲಾಜಿಲ್ಲದೆ ಶಾಲೆಗೆ ಚಕ್ಕರ್ ಮನೆಯುವರೆಲ್ಲರೂ ಅವನ ಬಗ್ಗೆ ಏನೇ ಕಂಪ್ಲೇಟ್ ಮಾಡಿದರೂ ನನಗಂತೂ ಅವನನ್ನು ಬೈಯೋದಕ್ಕೂ, ಅವನ ಮೇಲೆ ರೇಗಾಡೋದ್ದಕ್ಕೂ ಮನಸು ಒಪ್ಪದು. ಕಾರಣ ಇಷ್ಟೆ : ಬಾಲ್ಯದಲ್ಲಿ ಅಪ್ಪಟ ಅವನಂತೆ ನಾನಿದ್ದೆ. ಶಾಲೆಗೆ ಹೋಗೋಕೆ ಒಂದಿಷ್ಟೂ ಇಷ್ಟವಾಗುತ್ತಿರಲಿಲ್ಲ. ಶಾಲೆಯಲ್ಲಿ ಕುಳಿತು ಕಲಿಯುವ ಹಿಂಸೆ, ಕಷ್ಟವನ್ನು ನಾನು ಮಾತ್ರ ಬಲ್ಲವನಾಗಿದ್ದೆ.

ನಮಗೆ ನಮ್ಮ ವೈಯಕ್ತಿಕ ಅನುಭವಗಳು ಪಾಠಕಲಿಸಬೇಕು. ನಮ್ಮ ಕಹಿ ಅನುಭವಗಳು ಮಕ್ಕಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡಬೇಕು.

ಆನಂದ್ ಎಸ್.ಡಿ.ಬಿ.,

ನಿಮ್ಮ ಮುಗ್ಧ, ಸಭ್ಯ ಮಕ್ಕಳನ್ನು ಅರ್ಥಮಾಡಿಕೊಂಡು ಪ್ರಜ್ಞಾವಂತರನ್ನಾಗಿಸುವಲ್ಲಿ ನಿಮ್ಮ ಪ್ರಯತ್ನವಿರಲಿ. ಅವರ ಅಸಹಾಯಕ ಬಾಲ್ಯದ ಸಮಯದಲ್ಲಿ ಅವರಿಗೆ ಆಸರೆಯಾಗಿರಿ, ನೆರಳಾಗಿರಿ, ಮುಂದೆ ನಿಮ್ಮ ಅಸಹಾಯಕ ಸಮಯದಲ್ಲಿ ಅವರು ನಿಮಗೆ ಖಂಡಿತವಾಗಿಯೂ ಆಸರೆಯಾಗಿರುವರು. ಈ ನಿಟ್ಟಿನಲ್ಲಿ ಅವರ ಹಕ್ಕುಗಳ ಬಗ್ಗೆ ಒಂದಿಷ್ಟು ಕಣ್ಣಾಯಿಸುವುದು ಒಳಿತು ಎಂದು ನನಗನ್ನಿಸುತ್ತದೆ.

ಕೆಳಗೆ ನೀಡಿರುವ ಮಕ್ಕಳ ಹಕ್ಕುಗಳ ಬಗ್ಗೆ ಗಮನವಿಟ್ಟು ಓದಿ. ನಿಮ್ಮ ಮಕ್ಕಳ ಹಕ್ಕುಗಳನ್ನು ನೀವು ಗೌರವಿಸುತ್ತಿರುವಿರೋ ಎಂದು ಸ್ವಲ್ಪ ಚಿಂತನೆ ಹರಿಸಿ, ಆತ್ಮವಲೋಕನ ಮಾಡಿಕೊಳ್ಳಿರಿ.

1. ಬದುಕುವ ಹಕ್ಕು : ಹೆಸರು, ರಾಷ್ಟ್ರೀಯತೆ, ಪೌಷ್ಟಿಕ ಆಹಾರ, ಆರೋಗ್ಯ ಸೇವೆ ಪಡೆಯುವ ಹಕ್ಕು.

2. ರಕ್ಷಣೆಯ ಹಕ್ಕು : ತಂದೆ - ತಾಯಿರೊಂದಿಗೆ ಇರುವ ಹಾಗೂ ಸಾಮಾಜಿಕ ಭದ್ರತೆ ಪಡೆಯುವ ಹಕ್ಕು.

3. ಭಾಗವಹಿಸುವ ಹಕ್ಕು : ಸಂಘಟಿತರಾಗುವ, ವಿಶ್ರಾಂತಿ ಪಡೆಯುವ, ಸಭೆ, ಸಮಾರಂಭ ನಡೆಸುವ ಹಕ್ಕು.

4. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು : ಶಿಕ್ಷಣ ಪಡೆಯುವ, ಮಾಹಿತಿ ಪಡೆಯುವ, ಆರೋಗ್ಯ ಸೇವೆ ಪಡೆಯುವ, ಮನರಂಜನೆ ಪಡೆಯುವ ಹಕ್ಕು

ಮಕ್ಕಳ ಹಕ್ಕುಗಳ ಮಾಸಾಚಾರಣೆ ಅಂಗವಾಗಿ ನಡೆಯಬೇಕಾದ ಚಟುವಟಿಕೆಗಳು

1. ಪ್ರತಿ ಶಾಲೆಯ ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ಅರಿವು. ಜಾಗೃತಿ ಶಿಬಿರ ನಡೆಸುವುದು.

2. ಗ್ರಾಮ ಪಂಚಾಯಿತಿ ಸದಸ್ಯರಿಗೆ, ಸ್ವ-ಸಹಾಯ ಸಂಘದ ಸದಸ್ಯರಿಗೆ, ಯುವ ಸಂಘದ ಸದಸ್ಯರಿಗೆ ತರಬೇತಿ ನೀಡುವುದು.

3. ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಘಟಕಗಳನ್ನು ಸ್ಥಾಪಿಸುವುದು.

4. ಮಕ್ಕಳ ಸಮಾವೇಶ

5. ಮಕ್ಕಳು ತಮ್ಮ ಜನರ ಪ್ರಮಾಣಪತ್ರ ಪಡೆಯುವಂತೆ ಪ್ರೇರಣೆ ನೀಡುವುದು.

ನಿಧಾನವಾಗಿ ಚಿಂತಿಸಬೇಕು ಬೇಗ ಕಾರ್ಯ ಪ್ರವೃತ್ತರಾಗಿರಬೇಕು.

# ಕತ್ತೆಗೆ ಬುದ್ಧಿವಂತಿಕೆ ಇದೆ! ಸಂಶಯವೇ !

ಕಪಟ ನಟನೆ ಬೇಕಿಲ್ಲ, ಸುಳ್ಳು ಹೇಳ ಬೇಡ, ಪ್ರಾಮಾಣಿಕನಾಗಿ ಸೇವೆ ಮಾಡು ಇಂತಹ ಮಾತು ಮುತ್ತುಗಳನ್ನು ಗುರು ಹಿರಿಯರು ಹೇಳುವುದನ್ನು ನಾವು ಸದಾ ಕೇಳುತ್ತೇವೆ. ಸತ್ಯವನ್ನೇ ಸುಳ್ಳು ಎಂದು ಸಾಧಿಸುವವರೂ ಅನೇಕರು ಇರುತ್ತಾರೆ. ಸತ್ಯವಂತನನ್ನು ಕಪಟಿ ಎಂದು ಸಾಧಿಸುವಲ್ಲಿ ಸಹಾಯಕ್ಕೆ ಬರುವವರೂ ಅನೇಕ ಮಂದಿ ಸಂದರ್ಭ ಹೀಗೆ ಬಂದಾಗ ಕೋಪಗೊಂಡು ಮುನಿದು ಮನ ಶಾಂತಿ ಕದಡಿಸಿ ಬಾಳುವುದಕ್ಕಿಂತ ಅಂತಹ ಸಂದರ್ಭಗಳಿಂದ ದೂರ ಇರುವುದು ಒಳಿತು.

ನಾಗನ ಹಳ್ಳಿಯಲ್ಲಿ ಒಬ್ಬ ರೈತನಿದ್ದ ಅವನ ಗದ್ದೆಗಳಲ್ಲಿ ಬತ್ತ, ಜೋಳ, ಗೋದಿ ಮೊದಲಾದ ದಾನಗಳನ್ನು ಬೆಳೆಸುತ್ತಿದ್ದ. ಆ ದಾನ್ಯಗಳನ್ನು ಪಟ್ಟಣಕ್ಕೆ ಕೊಂಡುಹೋಗಿ ಮಾರಿ ತನ್ನ ಹಾಗೂ ತನ್ನ ಕುಟುಂಬದ ಜೀವನವನ್ನು ರೈತ ನಡೆಸುತ್ತಿದ್ದ. ರೈತನು ತನ್ನ ಧಾನ್ಯಗಳನ್ನು ಗೋಣಿ ಚೀಲದಲ್ಲಿ ತುಂಬಿಸುತ್ತಿದ್ದ. ಗೋಣಿ ಚೀಲಗಳನ್ನು ಸಾಗಿಸಲು ಒಂದು ಕತ್ತೆಯನ್ನು ಹಲವು ವರ್ಷಗಳಿಂದ ಸಾಕುತ್ತಿದ್ದ. ಕತ್ತೆ, ತನ್ನ ಧನಿಯ ಸೇವೆಯಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿತ್ತು. ಪ್ರಯತ್ನ ಪಟ್ಟು ಧನಿಯ ವ್ಯಾಪರದಲ್ಲಿ ಲಾಭ ಬರುವಂತೆ ಮಿತಿ ಮೀರಿ ದುಡಿಯುತ್ತಿತ್ತು. ಆದರೆ ವರುಷಗಳು ಹೋದಂತೆ ಕತ್ತೆಯು ಮುದುಕ ಆಗುತ್ತಿತ್ತು. ಮೊದಲಿನ ಹಾಗೆ ಹೊರೆಗಳನ್ನು ಹೊರಲು ಕಷ್ಟಪಡುತ್ತಿತ್ತು. ಈಗ ಧನಿಗೆ ಕತ್ತೆಯೇ ಒಂದು ಹೊರೆ ಆಗ ಲಾರಂಭಿಸಿತು. ಅದೊಂದು ದಿನ ಕತ್ತೆ ಹಿತ್ತಲಲ್ಲಿ ಪಕ್ಕದಲ್ಲಿ ಹೊಟ್ಟೆ, ಹಸಿವು ನೀಗಿಸಲು ಆಹಾರವನ್ನು ಹುಡುಕುತ್ತಿತ್ತು. ಪ್ರಾಯದ ದೋಷ, ಕಣ್ಣು ಸರಿಯಾಗಿ ಕಾಣದೇ ಕತ್ತೆ, ಬಗಲಲ್ಲಿ ಇದ್ದ ನೀರಿಲ್ಲದ ಪಾಳು ಬಾವಿಗೆ ಬಿದ್ದುಬಿಟ್ಟಿತು.

"ಹೆದರಿ ಕಂಗಾಲದ ಮುದಿ ಕತ್ತೆ ಕಾಪಾಡಿ ಕಾಪಾಡಿ ಎಂದು ಕಿರುಚಿ ಬೊಬ್ಬೆ ಇಟ್ಟಿತು. ಹೊರೆಯಾದ ಮುದಿ ಕತ್ತೆಯ ಕಿರುಚಾಟ ರೈತನಿಗೆ ಕೇಳದಿರಲಿಲ್ಲ. ಅದರೆ ರೈತನು ಅದನ್ನು ಕಾಪಾಡುವ ಬದಲು ಹೊರೆಯಾದ ಕತ್ತೆಯನ್ನು ಹೇಗೆ ದೂರ ಮಾಡುವುದು ಎಂದು ಯೋಚಿಸಲು ತೊಡಗಿದನು. ಬಾವಿಗೆ ಮಣ್ಣು ತುಂಬಿಸಿ ಕತ್ತೆಯನ್ನು ಅಲ್ಲಿ ಹೂತು ಬಿಡುವುದು ಒಳಿತು ಎಂದು ಮನದಲ್ಲಿ ಯೋಚಿಸಿ ಸುಲಭದಲ್ಲ ಹೊರೆಯಾದ ಕತ್ತೆಯನ್ನು ಮುಗಿಸುವ ಆಲೋಚನೆಯಲ್ಲಿ ಸಂತೋಷ ಪಟ್ಟನು. ತನ್ನ ಸ್ನೇಹಿತರನ್ನು ಕರೆದು ಅತ್ತ ಇತ್ತಗಿನ ಮಣ್ಣನ್ನು ಹಾರೆಯಲ್ಲಿ ಎತ್ತಿ ಭಾವಿಗೆ ಹಾಕತೊಡಗಿದರು. ಈಗ ಕತ್ತೆ ಯೋಚಿಸ ಬೇಕಾಯ್ತು. ಬುದ್ದವಂತನಾಗ ಬೇಕಾಯ್ತು. ಮೊದ ಮೊದಲು ಮಣ್ಣು ಬೀಳುತ್ತಲೇ ನರಳುವಂತೆ ಮಾಡುವ ಕತ್ತೆ ಈಗ ಮೌನವಾಯ್ತು. ಇತ್ತ ರೈತ ಕತ್ತೆಯ ಸದ್ದು ಕೇಳದಾಗ ಕತ್ತೆ ಮಣ್ಣಿನ ಅಡಿಗೆ ಬಿದ್ದಿರ ಬೇಕು ಇನ್ನು ಹೆಚ್ಚು ಮಣ್ಣು ಬೇಕಾಗಿಲ್ಲ ಎಂದು ತಿಳಿದು ಕೆಲಸದ ಆಳನ್ನು ಒಬ್ಬನನ್ನು ಬಿಟ್ಟು ಇತರರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮೇಲಿಂದ ಕೆಲಸದ ಆಳು ಸ್ವಲ್ಪ ಸ್ವಲವೇ ಮಣ್ಣನ್ನು ಹಾರೆಯಲ್ಲಿ ತೆಗೆದು ಬಾವಿಗೆ ಸುರಿಯ ತೊಡಗಿದನು. ಬೆನ್ನ ಮೇಲೆ ಮಣ್ಣು ಬೀಳುತ್ತಿರುವಾಗ ಕತ್ತೆ ತನ್ನ ಮೈಯನ್ನು ಜಡಿದು ಮಣ್ಣಿನ ಮೇಲೆ ಜಿಗಿದು ನಿಲ್ಲುತಿತ್ತು.

ಬಾವಿಯಲ್ಲಿ ಮಣ್ಣು ಎರಿ ಬಂದಂತೆ ಕತ್ತೆಯೂ ಮೇಲು ಮೇಲಕ್ಕೆ ಬಂದಿತು. ಕೆಲಸದವನು ಮಣ್ಣು ಕೆದಕಿ ಹಾಕುವುದರಲ್ಲಿ ಮಗ್ನ. ಕತ್ತೆಯ ಸದ್ದಿಲ ಎಂದು ಅವನು ಬಾವಿಯಲ್ಲಿ ಇಣುಕಿ ಸಹ ನೋಡಲಿಲ್ಲ. ಅದರ ಸಮಾಧಿ ಎಂದೋ ಆಗಿದೆ ಎಂದು ಸಂತೋಷ ಪಟ್ಟು ಸ್ವಲ್ಪ ಆರಾಮಿಸಲು ಚಹಾ ಕುಡಿಯಲು ತೊಡಗಿದನು. ಇತ್ತ ಮೌನಿ ಯಾದ ಕತ್ತೆ ಭಾವಿಯಿಂದ ಹೊರಗೆ ಹಾರುವಷ್ಟು ಮೇಲಕ್ಕೆ ಬಂದಿತ್ತು. ಅದು ಯೋಚಿಸಿತು. ಇನ್ನು ಬಾವಿಯಲ್ಲಿ ಯಾಕೆ ಇರಲಿ ಈಗ ನನ್ನ ಗೆಲುವಿನ ಸಮಯ ಬಂದಿದೆ ಎಂದಿತು. ತನ್ನ ನಾಲ್ಕು ಕಾಲುಗಳ ಸಹಾಯದಿಂದ ಬಾವಿಯಲ್ಲಿ ಬಿದ್ದ ಮಣ್ಣನ್ನ ಕೆದಕಿ ಒಟ್ಟು ಗೂಡಿಸಿ ಒಂದು ಗುಡ್ಡದ ಹಾಗೆ ಎತ್ತರಿಸಿತು. ನಾನು ನನ್ನ ಧನಿಗೆ ಎಂದೂ ಮೋಸ ಬಗೆಯಲಿಲ್ಲ.

ನನ್ನ ಇಷ್ಟು ವರುಷದ ಸತ್ಯ ಮತ್ತು ಪ್ರಾಮಾಣಿಕ ಸೇವೆಯನ್ನು ಮರೆತನಲ್ಲವೇ ಈ ದುಷ್ಟ ರೈತ ! ಇನ್ನು ನಾನು ಯಾರಿಗೆ ಕಾಯಬೇಕು ? ಕೆಲಸದ ಆಳು ಚಹಾ ಕುಡಿದು ಬರುವುದರ ಒಳಗೆ ನಾನು ನನ್ನ ದಾರಿ ನನ್ನ ರಕ್ಷಣೆಯ ದಾರಿ ಹಿಡಿಯಬೇಕು ಎಂಬ ಬುದ್ದಿವಂತಿಗೆ ಬಂತು. ಬಾವಿಯಿಂದ ಮೇಲೆ ಹಾರಿ ಓಡಿ ತನ್ನ ರಕ್ಷಣೆಯನ್ನು ಕೊನೆಗೂ ಕತ್ತೆ ಬುದ್ದಿವಂತಿಗೆ ಇಂದಲೇ ಪಡೆಯಿತು. ದುಷ್ಟ ಮನಸ್ಸಿನ ಹೃದಯವೇ ಇಲ್ಲದ ರೈತನಿಗೆ ಕತ್ತೆಯೇ ಬುದ್ದಿ ತಿಳಿಸ ಬೇಕಾಯಿತು.

❖

ವಿನ್ನಿಫ್ರೆಡ್‌ರೆಗೋ,
ಮಂಗಳೂರು

ನವನವೀನ, ವಿನೂತನ
ಮಾದರಿಯ ಪರಮಪ್ರಸಾದದ
ಕಾರ್ಡುಗಳು ಹಾಗೂ ಮದುವೆಯ
ಆಮಂತ್ರಣ ಪತ್ರಗಳು ನಮ್ಮಲ್ಲಿ
ಸದಾ ಲಭ್ಯವಿದೆ.





ಮೀರಾ
ಮುದ್ರಣಕ್ಕೊಂದು
ನಂ. 1 ಹೆಸರು

ಮೀರಾ ಪ್ರಿಂಟರ್ಸ್

ಕಪಿತಾನಿಯೋ ಶಾಲಾ ರಸ್ತೆ, ಪಂಪ್‌ವೆಲ್, ಕಂಕನಾಡಿ,
ಮಂಗಳೂರು - 2, ದೂರವಾಣಿ : 2435497, 5515497

ಚಿಕ್ಕಮಗಳೂರು ಮತ್ತಿತರ
ದೂರದ ಊರುಗಳಿಂದ
ಬರುವವರಿಗೆ ಅದೇ ದಿನ
ಮುದ್ರಣ ಮಾಡಿ ಕೊಡುತ್ತೇವೆ.

ಕಂಪ್ಯೂಟರ್ ಅಕ್ಷರ
ಜೋಡಣೆ – ಆಫ್‌ಸೆಟ್
ಪ್ರಿಂಟಿಂಗ್ ಮೂಲಕ
ಶೀಘ್ರ ಮುದ್ರಣ



ಏಳು ಬಾರಿ ಬಿದ್ದರೂ ಪರವಾಗಿಲ್ಲ ಆದರೆ ಎಂಟನೆ ಬಾರಿಯಾದರೂ ಎದ್ದು ನಿಲ್ಲು

# ಸಂತ ಜೋಸೆಫ್ - ಕಾರ್ಮೆಲ್ ಸಭೆ

ಪರಿಶುದ್ಧ ಕನ್ಯಾಮರಿಯಳ ಪತಿ ಹಾಗೂ ಮಾನವ ರೂಪತಾಳಿದ ಲೋಕ ರಕ್ಷಕ ಯೇಸುವಿನ ಪೋಷಕ ತಂದೆಯೇ ಸಂತ ಜೋಸೆಫ್. ಶುಭ ಸಂದೇಶಗಳಲ್ಲಿ ಇವರನ್ನು 'ನೀತಿವಂತ' ಎಂದು ಕರೆಯುತ್ತೇವೆ. ಬಹು ಹಿಂದಿನಿಂದಲೂ ಈ ಸಂತರ ಭಕ್ತಿಯಾಚರಣೆ ರೂಢಿಯಲ್ಲಿದ್ದು, ನಾಲ್ಕನೇ ಶತಮಾನದಿಂದ ಇವರ ಗೌರವಾರ್ಥ ಹಬ್ಬವನ್ನು ಆಚರಿಸಲಾಗುತ್ತಿದೆ. ಧರ್ಮಸಭೆಯು ಸಂತ ಜೋಸೆಫರ ಭಕ್ತಿಯನ್ನು ಒತ್ತಿ ಹೇಳುತ್ತದೆ. ಧರ್ಮಪ್ರಾಂತ್ಯಗಳು, ಗುರುಮಠಗಳು, ಕನ್ಯಾಮಠಗಳ ಕೇಂದ್ರಗಳನ್ನು ಸಂತ ಜೋಸೆಫರ ಪಾಲನೆಗೆ ಸಮರ್ಪಿಸಿರುತ್ತಾರೆ. ಕಾರ್ಮೆಲ್ ಸಭೆಯಲ್ಲಿಯೂ ಸಂತ ಜೋಸೆಫರಿಗೆ ಹೆಚ್ಚಿನ ಪ್ರಾಸಸ್ತ್ಯವನ್ನೀಯಲಾಗಿದೆ. ಅವಿಲ್ಲಾದ ಸಂತ ತೆರೇಸ (ದೊಡ್ಡ ತೇರೆಸಮ್ಮ ಜೊಸೆಫರನ್ನು ಸುಧಾರಣೆಗೊಂಡ ತಮ್ಮ ಕಾರ್ಮೇಲ್ ಸಭೆಯ ಪಾಲಕರನ್ನಾಗಿ ಆರಿಸಿ ಕೊಂಡು ಅವರ ಮೂಲಕ ಕಾರ್ಮೆಲ್ ಸಭೆಯಲ್ಲಿ ಪರಿಶುದ್ಧತೆಗೆ ಹೆಚ್ಚಿನ ಪ್ರಾಶಸ್ತ್ಯವನ್ನಿತಿದ್ದಾರೆ.



ಕಾರ್ಮೆಲ್ ಸಭೆಯ ಉಗಮದಿಂದಲೇ ಸಂತ ಜೋಸೆಫರು ತಮ್ಮ ಪ್ರಭಾವವನ್ನು ಬೀರಿದ್ದಾರೆ. ಏಕೆಂದರೆ ಕಾರ್ಮೆಲ್ ಸಭೆಯು ಸಂತ ಜೋಸೆಫರ ನಾಡಾಗಿರುವ ಪ್ಯಾಲೇಸ್ಟೀನಿನಲ್ಲಿ ಹುಟ್ಟಿದ್ದಾಗಿದೆ. ಮಾತೆ ಮರಿಯಾ ಈ ಸಭೆಯನ್ನು ಪೋಸಿಸಿದಂತೆ ಸಂತ ಜೋಸೆಫ್ ಆರಂಭದಿಂದಲೇ ಈ ಸಭೆಯನ್ನು ಸಾಕಿ ಸಲಹಿದ್ದಾರೆ. 15ನೇ ಶತಮಾನದ ಮಧ್ಯಭಾಗದಲ್ಲಿ ಕಾರ್ಮೆಲ್ ಸಭೆಯ ಗುರುಗಳು ಸಂತ ಜೋಸೆಫರ ಗೌರವಕ್ಕೆ ಪ್ರತ್ಯೇಕ ಪ್ರಾರ್ಥನೆಯನ್ನು ರಚಿಸಿ ಪ್ರಾರ್ಥಿಸಿದವರಲ್ಲಿ ಮೊದಲಿಗರೆನಿಸಿಕೊಂಡಿದ್ದಾರೆ.

ಸಂತ ಜೋಸೆಫರ ಬಗೆಗಿನ ಧರ್ಮಸಭೆಯ ಬೋಧನೆಯನ್ನು ಒಳಗೊಂಡಿರುವ ಪ್ರಾರ್ಥನೆಯಲ್ಲಿ ಕಾರ್ಮೇಲ್ ಸಭೆಯನ್ನು ಸುಧಾರಣೆ ಮಾಡಿದ ಅವಿಲ್ಲಾದ ಸಂತ ತೆರೇಸಾ ಕನ್ಯಾಮಠದಲ್ಲಿರುವಾಗ ಪ್ರಾರ್ಥಿಸಿ ಧ್ಯಾನಿಸಿದರು. ಸಂತ ತೆರೇಸಾರವರು ಸಂತ ಜೋಸೆಫರನ್ನು ತಾವು ಸುಧಾರಣೆಗೊಳಿಸಿರುವ ಹಾಗೂ ಸ್ಥಾಪಿಸಿದ ಹೊಸ ಕನ್ಯಾಮಠಗಳ ಪಾಲಕರನ್ನಾಗಿಸಿದ್ದರು. ಅವರು ಸ್ಥಾಪಿಸಿದ ಪ್ರತಿಯೊಂದು ಮಠದ ಪ್ರವೇಶದ್ವಾರದಲ್ಲಿ ಸಂತ ಜೋಸೇಫರ ಸ್ವರೂಪವನ್ನಿಟ್ಟು ಇಡೀ ಮಠದ ವ್ಯವಸ್ಥೆಯನ್ನು ಸಂತ ಜೋಸೆಫರಿಗೆ ಅರ್ಪಿಸುತ್ತಿದ್ದರು. ತಾನು ಸ್ಥಾಪಿಸಿದ 17 ಮಠಗಳನ್ನು ಸಂತ ಜೊಸೆಫರ ಹೆಸರಿನಿಂದ ಕರೆದರು.

ಸಂತ ಜೋಸೆಫರ ಚಿಕ್ಕದಾದ ಸ್ವರೂಪವೊಂದನ್ನು ಯಾವಾಗಲೂ ತಮ್ಮ ಬಳಿಯಲ್ಲಿಟ್ಟು ಕೊಂಡಿರುತ್ತಿದ್ದರು. ಮಾತ್ರವಲ್ಲದೆ ಪ್ರಯಾಣಿಸುವಾಗಲೂ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿದ್ದರು. ಪ್ರತಿಯೊಂದು ಕಾರ್ಮೆಲ್ ಮಠದ ಪ್ರಾರ್ಥನಾಲಯದಲ್ಲಿ ಮಾತೆ ಮರಿಯಾ ಮತ್ತು ಸಂತ ಜೋಸೆಫರ ಸ್ವರೂಪಗಳಿದ್ದು ಆ ಮಠಗಳ ಅಧಿಕಾರ ಚಲಾಯಿಸುವ ಸಂಕೇತಗಳಾಗಿವೆ.

ಆಧ್ಯಾತ್ಮೀಕ ಜೀವನದಲ್ಲಿ ಪ್ರಗತಿ ಹೊಂದುತ್ತಿರುವ ಪ್ರತಿಯೊಬ್ಬರೂ ಸಂತ



ಜೋಸೆಫರನ್ನೇ ತಮ್ಮ ಆಧ್ಯಾತ್ಮಿಕ ಗುರುವಾಗಿ ಸ್ವೀಕರಿಸಬೇಕು ಎಂದು ಸಂತ ತೆರೇಸಮ್ಮನವರ ಅಭಿಪ್ರಾಯವಾಗಿದೆ. ಹೀಗಾಗಿ ತನ್ನ ಜೀವನವನ್ನೇ ಪ್ರಾರ್ಥನೆಗೆ ಮುಡುಪಾಗಿಟ್ಟಿರುವ ಕಾರ್ಮೆಲ್ ಸಭೆ ಕನ್ಯಾಸ್ತ್ರೀಯರು ಸಂತ ಜೋಸೆಫರಲ್ಲಿ ವಿಶೇಷ ಭಕ್ತಿನ್ನಿರಿಸಿಕೊಂಡಿದ್ದಾರೆ. ಅವಿಲ್ಲಾದ ಸಂತ ತೆರೇಸಮ್ಮ ಹೇಳುವಂತೆ ಪ್ರಾರ್ಥನೆಯೆಂದರೆ ''ನಮ್ಮನ್ನು ಪ್ರೀತಿಸುವ ದೇವರೊಂದಿಗಿನ ಸಹಮಿಲನ ಮತ್ತು ಏಕಾಂತದಲ್ಲಿ ನಡೆಯುವ ಪ್ರೀತಿಯ ಸಂವಾದ'' ಈ ವ್ಯಾಖ್ಯೆಯ ಮೂಲಕ ಮಾನವ ಜನ್ಮತಾಳಿದ ಯೇಸು ಕ್ರಿಸ್ತರೊಡನೆ ಸ್ನೇಹದ ಸಂಬಂಧವನ್ನು ಬೆಳೆಸಿಕೊಳ್ಳಲು ತೆರೇಸ ಪ್ರೋತ್ಸಾಹಿಸುತ್ತಾರೆ. ಯೇಸುವಿನೊಂದಿಗೆ ಈ ರೀತಿಯ ಸಂಬಂಧವನ್ನಿಟ್ಟುಕೊಂಡವರಲ್ಲಿ ಸಂತ ಜೋಸೆಫರೊಬ್ಬರು. ತನ್ನೆಲ್ಲಾ ಜೀವನವನ್ನು ದೇವ ಸ್ವರೂಪಿ ಯೇಸುವಿನ ಸೇವೆಯಲ್ಲಿ ಕಳೆದ ಸಂತ ಜೋಸೆಫರಿಗೆ ಯೇಸುವಿನೊಂದಿಗೆ, ಯೇಸುವಿಗಾಗಿ ಜೀವಿಸುವುದು ಅವರ ಜೀವನದ ಮೂಲಧ್ಯಾಯವಾಗಿತ್ತು. ಪ್ರಾರ್ಥನೆಯನ್ನು ತನ್ನನ್ನು ಪ್ರೀತಿಸುವ ಗೆಳೆಯ (ದೇವರು) ನೊಂದಿಗಿನ ಸಂಭಾಷಣೆಯನ್ನು ಪರಿಗಣಿಸುವುದಾದರೆ ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುವುದು ಅತ್ಯಗತ್ಯ. ಸಂತ ಜೋಸೆಫರು ತನ್ನ ಪುತ್ರ ಯೇಸುವಿನ ಮಾತುಗಳನ್ನು ಕೇಳಿ ಅವುಗಳನ್ನು ತನ್ನ ಹೃದಯದಲ್ಲಿ ಸಂಗ್ರಹಿಸಿಟ್ಟು ಧ್ಯಾನಿಸುತ್ತಿದ್ದರು. ಈ ರೀತಿ ತೆರೇಸ ಪ್ರಾರ್ಥನೆ ಬಗ್ಗೆ ನೀಡಿರುವ ವ್ಯಾಖ್ಯೆ ಸಂತ ಜೋಸೆಫರ ಜೀವನದಲ್ಲಿ ಕಾರ್ಯಗೊಂಡಿರುವುದು ಕಾಣುತ್ತದೆ.

ಕಿರಿಯ ಪುಷ್ಪ ಸಂತ ತೆರೇಸರವರು ಸಂತ ಜೋಸೆಫರ ಭಕ್ತೆಯಾಗಿದ್ದು ಸದಾ ಅವರಲ್ಲಿ ಪ್ರಾರ್ಥಿಸುತ್ತಿದ್ದರು. ಸಂತ ಜೋಸೆಫ ಕನ್ಯೆಯರ ಪಾಲಕ ಹಾಗೂ ರಕ್ಷಕರೆಂದಿದ್ದಾರೆ. ರೋಮ್ ನಗರಕ್ಕೆ ಯಾತ್ರೆಯನ್ನು ಕೈಗೊಂಡಾಗ ತನ್ನನ್ನು ರಕ್ಷಿಸುವಂತೆ ಸಂತ ಜೋಸೆಫರನ್ನು ಕೇಳಿಕೊಂಡಿದ್ದರು. ಸಂತ ಜೋಸೆಫರ ನಮ್ರತೆ ಹಾಗೂ ಮಾತೆ ಮರಿಯಮ್ಮನವರ ಜೀವನ ಯೇಸುಕ್ರಿಸ್ತರ ಸೇವೆ ಮಾಡಲು ನಾಂದಿಯಾಯಿತು ಮತ್ತು ಹಲವಾರು ಕವನಗಳನ್ನು ರಚಿಸಿದ್ದಾರೆ. ಸಂತ ಜೋಸೆಫರ ನೆಚ್ಚಿನ ಭಕ್ತರಾಗಿದ್ದ ಹಲವಾರು ಕಾರ್ಮೆಲ್ ಸಭೆ ಕನ್ಯಾಭಗಿನಿಯರು ಪುನೀತರಾಗಿದ್ದಾರೆ.

ಸಂತ ಜೋಸೆಫರ ಭಕ್ತಿ ಕಾರ್ಮೆಲ್ ಸಭೆಯ ಅವಿಭಾಜ್ಯ ಅಂಗವಾಗಿದೆ. ತಮ್ಮ ಸುಧಾರಕಿ ಅವಿಲ್ಲಾದ ತೆರೇಸರ ಆದರ್ಶ ಮತ್ತು ಬೋಧನೆಗಳನ್ನು ಇಂದಿಗೂ ಸಹಾ ಅವರ ಅನುಯಾಯಿಗಳು ಅನುಸರಿಸುತ್ತಲೇ ಬಂದಿದ್ದಾರೆ.

ಕಾರ್ಮೆಲ್ ಸಭೆಯ ಚರಿತ್ರೆ, ಬಹಳ ಹಿರಿಮೆಯುಳ್ಳದ್ದಾಗಿದ್ದು ಪ್ರವಾದಿ ಎಲಿಜ ಪ್ರೇರಣಾಕಾರವೆಂಬುದಾಗಿ ತೀರ್ಮಾನಿಸಿ, ಬಹಳ ಹಿಂದಿನಿಂದಲೂ ನಿಜದೇವರನ್ನು ಆರಾಧಿಸಿ, ಧ್ಯಾನಮಗ್ನರಾಗಿ, ಜಪತಪಶ್ಚರ್ಯ ಮತ್ತು ಆಧ್ಯಾತ್ಮಿಕ ಜೀವನದಿಂದ ಮುಕ್ತಿಯನ್ನು ಪಡೆಯುವ ಮಾರ್ಗವಾಗಿದೆ, ಹಲವಾರು ಸಂತಭಕ್ತರನ್ನು ಹೊಂದಿದ್ದು, ಕಥೋಲಿಕ ಧರ್ಮಸಭೆಯಲ್ಲಿ ಹೆಸರಾಂತ ಸಂತರಾಗಿದ್ದಾರೆ.

ಯುವತಿಯರೇ, ಈ ಪ್ರಪಂಚನಶ್ವರ, ದೇವರೇ ಶಾಶ್ವತ ಮತ್ತು ಯೇಸುವಿನ ಅತೀ ಹತ್ತಿರದ ಕನ್ಯಾಸ್ತ್ರೀ ಮತ್ತು ಯೇಸುವಿನ



ವಧುವಾಗಲೂ ನಿಮ್ಮನ್ನು ಪ್ರೀತಿಸುವ ಯೇಸುವನ್ನು ಸ್ನೇಹದ ಮಿಲನವನ್ನು ಏಕಾಂತದಲ್ಲಿ ಮೌನದಲ್ಲಿ, ಜಪದಲ್ಲಿ ಕ್ರಿಸ್ತರೊಂದಿಗೆ ಸಂಭಾಷಿಸಲು ಕಾರ್ಮೆಲ್ ಸಭೆ ನಿಮ್ಮನ್ನು ಸ್ವಾಗತಿಸುತ್ತಿದೆ. ಪ್ರಪಂಚದದ್ಯಾಂತ ಹಲವಾರು ಮಠಗಳು ನಮ್ಮ ಭಾರತದಲ್ಲೂ ಅದರಲ್ಲೂ ಹಾಸನದಲ್ಲೂ ಈ ಮಠವಿದೆ. ನಿಮ್ಮನ್ನು ಪ್ರೀತಿಯ ಆದರದಿಂದ ಸ್ವಾಗತಿಸಿ ಕರೆಯುತ್ತಿದೆ. ಆದ್ದರಿಂದ ಕಾರ್ಮೆಲ್ ಕನ್ಯಾಮಠಸ್ಥೆಯಾಗಲು ಇಚ್ಛಿಸುವವರು ಕೆಳಗಿನ ವಿಳಾಸ ಸಂಪರ್ಕಿಸಿರಿ.

ಮದರ್ ಸುಪೀರಿಯರ್
ಕಾರ್ಮೆಲ್ ಮಾತಾ ಆಶ್ರಮ
ಬಾಗದೇರ ಕೊಪ್ಪಲು, ವಿದ್ಯಾನಗರ ಅಂಚೆ, ಹಾಸನ - 573202. ಕರ್ನಾಟಕ. ದೂ. : 08177 245892

''ಬನ್ನಿ .... ಇತರರನ್ನು ಕರೆತನ್ನಿ.... ಕನ್ಯಾಭಗಿನಿಯಾಗಿ ಪುಣ್ಯವಂತರಾಗಿರಿ''.

# ದೀನ ನೇತಾರ ಸಂತ ಜೋಸೆಫರು



ದೇವರ ರಹಸ್ಯ ರಕ್ಷಣಾಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಪವಿತ್ರಾತ್ಮರು ದೀನತೆ, ಉದಾರತೆ, ವಿಧೇಯತೆ, ಪ್ರಾಮಾಣಿಕತೆ ಹಾಗೂ ಪರಿಮಿತಿಗಳಿರುವ ವ್ಯಕ್ತಿಗಳ ಸಹಾಯವನ್ನು ಯಾಚಿಸುತ್ತಾರೆ, ಅಂತಹ ವ್ಯಕ್ತಿಗಳಲ್ಲಿ ದಾವೀದಕುಲದ ಜಾತರಾದ ಸಂತ ಜೋಸೆಫರನ್ನು ಅತಿಶಯ ಪರಾಮರಿಕೆಯಿಂದ ಆರಿಸಿಕೊಂಡರು. ''ಮನುಷ್ಯರನ್ನು ಕಾಯಲು ದೇವರು ದೇವದೂತರನ್ನು ಗೊತ್ತು ಮಾಡಿದ್ದಾರೆ. ಅದೇ ದೇವಕುಮಾರನನ್ನು ಕಾಪಾಡಲು ಜೋಸೆಫರನ್ನು ನೇಮಿಸಿದರು'' ಎಂದು ಕಾರ್ತಾಜೀನ್ ಅಭಿವ್ಯಕ್ತಿಗೊಳಿಸಿದ್ದಾರೆ, ಇವರಿಗೆ ಸಂತರಲ್ಲಿ ಅಗ್ರಸ್ಥಾನ ಆದಿಧರ್ಮಸಭೆಯಲ್ಲಿ ಕ್ರೈಸ್ತ ಭಕ್ತರು ತಮ್ಮ ವಿಶ್ವಾಸವನ್ನು ಕಾಪಾಡಿಕೊಳ್ಳಲು ಹೋರಾಡಬೇಕಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಭಕ್ತರು ಯೇಸುಸ್ವಾಮಿಯನ್ನು ಶತ್ರು ಖಡ್ಗದಿಂದ ರಕ್ಷಿಸಿದ ಸಂತ ಜೋಸೆಫರ ಮೊರೆಹೋಗುತ್ತಿದ್ದರು. ಸಂತ ಹೆಲೆನ ಅವರು ಸಂತ ಜೋಸೆಫರ ಗೌರವಾರ್ಥ ಜೆರುಸಲೇಮಿನಲ್ಲಿ ಒಂದು ಗವಿಯನ್ನು ಕಟ್ಟಿಸಿದರು. ಈ ಪುಣ್ಯಕ್ಷೇತ್ರಕ್ಕೆ ದೇಶವಿದೇಶಗಳಿಂದ ಅಸಂಖ್ಯಾತ ಭಕ್ತರು ತೀರ್ಥಯಾತ್ರೆ ಕೈಗೊಳ್ಳುತ್ತಿದ್ದರು. ತಾವು ಎದುರಿಸುತ್ತಿರುವ ಆತ್ಮಿಕ ತಂತ್ರಶೋಧನೆಗಳಿಗೂ ಬಾಹ್ಯ ಪ್ರತಿಭಟನೆಗೂ ಬೇಕಾದ ಶಕ್ತಿಯನ್ನು ಪಡೆದು ಪಾವನ ಪಥದಲ್ಲಿ ಮುಂದುವರೆಯುವುದು ಸಹಜ ಸ್ಥಿತಿಯಾಗಿತ್ತು. ಸಂತ ಜೋಸೆಫರ ಭಕ್ತಿ ಕಾಲಾನುಕ್ರಮದಲ್ಲಿ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ಅನಾವರಣಗೊಂಡಿದೆ. ರಕ್ತಸಾಕ್ಷಿಗಳ ಪವಿತ್ರ ಸ್ಮಾರಕ, ಸಂತರುಗಳ ಪುಣ್ಯ ಅವಶೇಷಗಳು ಸಾರ್ವಜನಿಕ ಭಕ್ತಿಯಾಚರಣೆಗೆ ಮೂಲ ಕಾರಣವಾಗಿದ್ದರಿಂದ ಸಂತ ಜೋಸೆಫರ ಬಗ್ಗೆ ಅಧಿಕ ಮಾಹಿತಿ ಲಭ್ಯವಿಲ್ಲ. ನಾಲ್ಕನೇ ಶತಮಾನದಿಂದ ಇವರ ವಿಶೇಷ ಭಕ್ತಿಗೌರವಾದರಣೆ ಪ್ರಚಲಿತದಲ್ಲಿದೆ. ಬೈಬಲ್ ಶ್ರೀ ಗ್ರಂಥದಲ್ಲಿ ಈ ಸತ್ಪುರುಷನನ್ನು 'ನೀತಿವಂತರು' ಎಂಬ ಒಂದೇ ವಾಕ್ಯದಲ್ಲಿ ವರ್ಣಿಸಲಾಗಿದೆ. ''ಸಂತ ಜೋಸೆಫರು ಎಲ್ಲಾ ಸದ್ಗುಣಗಳ ಆಗರವಾಗಿದ್ದರು ಮತ್ತು ದೈವೇಚ್ಛೆಗೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದರು''. ಆದುದರಿಂದ ನೀತಿವಂತರೆಂದು ಕರೆಸಿಕೊಳ್ಳುವುದಕ್ಕೆ ಪಾತ್ರರು ಎಂದು ಸಂತ ಪೀಟರ್ ಕ್ರಿಸೋಲಗಸ್‌ರವರು ತಿಳಿಸಿರುತ್ತಾರೆ. ಕೀರ್ತನೆ 92ರಲ್ಲಿ ನೀತಿವಂತರನ್ನು ಖರ್ಜೂರದ ವೃಕ್ಷಕ್ಕೆ ಹೋಲಿಸಲಾಗಿದೆ. ದೈವಾ ವಾಗ್ದಾನಕ್ಕೆ ವಿಶ್ವಾಸವೇ ಆಧಾರ ದೈವಾನುಗ್ರಹವೇ ಮೂಲ.

ಸಂತ ಜೋಸೆಫರನ್ನು 1870 ಡಿಸೆಂಬರ್ 8 ರಂದು ಜಗದ್ಗುರುಗಳಾದ ಒಂಬತ್ತನೆಯ ಪಯಸ್‌ರವರು 'ಅಖಿಲ ಧರ್ಮಸಭೆಯ ಪಾಲಕ'ರೆಂದು ಘೋಷಿಸಿದರು ಮತ್ತು 1955ರಲ್ಲಿ ಜಗದ್ಗುರುಗಳಾದ 12ನೇ ಪಯಸ್‌ರವರು 'ಕಾರ್ಮಿಕರ ಪಾಲಕ'ರೆಂದು ಬಿರುದನ್ನಿತ್ತು ಗೌರವಿಸಿದರು. ಕಥೋಲಿಕ ಧರ್ಮಸಭೆಯು ಮಾರ್ಚ್ 19 ರಂದು ಸಂತ ಜೋಸೆಫರ ಹಬ್ಬವನ್ನು ವಿಜೃಂಭಣೆಯಿಂದ ಕೊಂಡಾಡುತ್ತದೆ. ''ಪ್ರಾರ್ಥನೆ ಮತ್ತು ಧ್ಯಾನ ಬದುಕನ್ನು ಯಾರ್‍ಯಾರು ಬಯಸುತ್ತಾರೋ ಅಂತಹವರು ಸಂತ ಜೋಸೆಫರನ್ನು ಮಾದರಿಯಾಗಿ ಸ್ವೀಕರಿಸಲಿ ಏಕೆಂದರೆ ಜೋಸೆಫರು ಸನ್ಮಾರ್ಗದಲ್ಲ ಭಕ್ತರನ್ನು ಮುನ್ನಡೆಸುವ ಸಂತರು'' ಎಂದು ಕಿರಿಯಪುಷ್ಪ ಸಂತ ತೆರೇಜ ತಿಳಿಸುತ್ತಾರೆ. ಸಂತ ಜೋಸೆಫರು ಸರಳ - ಸಾತ್ವಿಕ ಶ್ರಮಜೀವಿ, ಮಿತಭಾಷಿ, ತ್ಯಾಗಮಯಿ, ನಿಯಮಪಾಲಕ, ಸಹನಶೀಲ, ನೀತಿವಂತ, ಪ್ರಾಮಾಣಿಕ ನಾಗರಿಕ, ವಿಶ್ವಾಸದ ಗಣಿ, ದಿವ್ಯ ದೃಷ್ಟಿ ಸಂಪನ್ನ, ಸಮಸ್ತ ಸದ್ಗುಣಗಳ ಆಗರ, ಸದಾಸಿದ್ಧ ಕ್ರಿಯಾಶೀಲ, ಅಪರೂಪದ ಅಧ್ಯಾತ್ಮಿಕ ವ್ಯಕ್ತಿ, ಎಂತಹ ವಿಷಮ ಘಳಿಗೆಯಲ್ಲೂ ದೈವೇಚ್ಛೆಗೆ ಇವರ ಸಮರ್ಪಣ ಭಾವ ಶ್ಲಾಘನೀಯ ! ದೈವ ಸಾಮ್ರಾಜ್ಯಕ್ಕೆ ಅಮೋಘ ಸೇವೆ ಸಲ್ಲಿಸಿದ ಮಹಾನುಭಾವರು ಹಾಗೂ ಬ್ರಹ್ಮಚರ್ಯೆಯ ಜೀವನದಿಂದ ಯಾವುದೇ ಕಳಂಕವಿಲ್ಲದೆ ಶೋಭಿಸುತ್ತಿದ್ದಾರೆ. ''ಮರಿಯಮ್ಮ ಮಾತ್ರ ಕನ್ಯೆಯಲ್ಲ. ಆಕೆಯ ಪತಿಯಾದ ಜೋಸೆಫರು ಸಹ ಸನ್ಯಾಸಿಯೇ ! ಈ ಕನ್ಯಾವ್ರತದ ವಿವಾಹದ ಮೂಲಕ ಕನ್ಯಾಪುತ್ರರು ಜನಿಸಿದರು''. ಎಂದು ಸತ ಜೆರೋಮರು ಉಲ್ಲೇಖಿಸಿದ್ದಾರೆ.

ನಮ್ಮ ಜೀವನದಲ್ಲಿ ತೊಂದರೆತೊಡಕುಗಳು, ದೌರ್ಬಲ್ಯಗಳು, ಕಷ್ಟಕಾರ್ಪಣ್ಯಗಳು ಸಂತ ಜೋಸೆಫರ ಜೀವನದಲ್ಲಿ ಎದುರಾಯಿತು. ಮರಿಯಳೊಂದಿಗೆ ನಿಶ್ಚಿತಾರ್ಥವಾಗಿದ್ದು ಸಂತ ಜೋಸೆಫರಿಗೆ ಗಾಬ್ರಿಯೇಲ್ ದೇವದೂತರು ಕನಸ್ಸಿನಲ್ಲಿ ದರ್ಶನವಿತ್ತು, ನಿಷ್ಕಳಂಕ ಕನ್ನಿಕೆಯಾದ ಮರಿಯಳು ಪವಿತ್ರಾತ್ಮರ ಪ್ರಭಾವದಿಂದ ಗರ್ಭಧಾರಣೆಯಾದ ವಿಷಯ ತಿಳಿಸಿದರು.

✍ ಫಿಲೋಮಿನ ಮೊರಾಸ್
ಚಿಕ್ಕಮಗಳೂರು

(ಮತ್ತಾಯ 1:18-21). ಸಂತ ಜೋಸೆಫರು ದೈವ ಪ್ರೀತಿ-ಪ್ರೀತಿ-ಭೀತಿ, ನೀತಿ, ಶಿಸ್ತಿನ ಸಾಕಾರ ಮೂರ್ತಿಯಾಗಿದ್ದರಿಂದ ವಾರ್ತೆಯೆಂಬವರು ಮನುಷ್ಯ ರೂಪ ತಾಳಿದ ದೈವಯೋಜಿತ ಯೇಸುವಿನ ವಿಸ್ಮಯಕಾರಿ ಜನನದ ಪ್ರಕರಣ ಪ್ರಶ್ನಿಸದೆ, ಲವಲೇಶ ಸಂದೇಹ ಪಡದೆ, ಮರಿಯಳನ್ನು ಅವಮಾನಕ್ಕೆ ಗುರಿಪಡಿಸದೆ ಮೌನಿಯಾಗಿದ್ದೇ ಮಹತ್ಕಾರ್ಯಗಳನ್ನು ಎಸಗಿದ ದೀನ ನೇತಾರ ಸಂತ ಜೋಸೆಫರು. ಅಂತಿ ಕ್ಷಣದವರೆಗೆ ವಿವೇಕತೆ, ಅಪರೂಪದ ಪರಿಜ್ಞಾನ, ಧರ್ಮಶೀಲತೆ ಮತ್ತು ಅತಿಶಯ ವಿಶ್ವಾಸದಲ್ಲಿ ನೆಲೆಯೂರಿ ನಿಂತರು. ''ಸಂತ ಜೋಸೆಫರು ದೇವರ ಯೋಜನೆಯಲ್ಲಿ ಅವರ ಕುಮಾರರ ಪೋಷಕರಾದರು. ಜನರ ದೃಷ್ಟಿಯಲ್ಲಿ ಪ್ರಭು ಯೇಸುವಿನ ತಂದೆಯಾದರು'' ಜಗದ್ಗುರು ಲಿಯೊ ಮಾತ್ರವಲ್ಲ ಮನುಕುಲದ ರಕ್ಷಣಾ ಕಾರ್ಯದಲ್ಲಿ ಸಹಭಾಗಿತ್ವವನ್ನು ಪಡೆದರು.

ಕುಟುಂಬವು ಸ್ವಾಭಾವಿಕ ಚಿಕ್ಕ ಘಟಕ, ಮಾನವ ಬದುಕಿನ ಬುನಾದಿ, ಧರ್ಮಸಭೆಯ ಮೂಲೆಗಲ್ಲು, ಸಾಂಪ್ರದಾಯಿಕ ಸಮಾಜಕ ಸಂಸ್ಥೆಯಾಗಿದೆ. ವರ್ತಮಾನ ಯುಗದಲ್ಲಿ ಕುಟುಂಬ ಜೀವನ ಅತಂತ್ರದಿಂದ ಕೂಡಿದೆ. ನಜರೇತಿನ ಪವಿತ್ರ ಕುಟುಂಬದಲ್ಲಿದ್ದ ಎರಡು ಪ್ರಮುಖ ಮೂಲೋದ್ದೇಶಗಳ ಕೊರತೆಯಿಂದಾಗಿ ಕುಟುಂಬಗಳು ಅಳಿವಿನ ಅಂಚಿನಲ್ಲಿವೆ. (1) ಹಿರಿಯರಿಗೆ ಸಲ್ಲಬೇಕಾದ ಗೌರವ (ಮಾರ್ಕ್ 12:17) , (2) ವಿವಾಹ ಬಂಧನದಲ್ಲಿ ವಿಶ್ವಾಸ (ಮತ್ತಾಯ 19:6), ರಾಜವಂಶದಲ್ಲಿ ಜನಸಿದರೂ ಬಡತನದಲ್ಲಿ



ಒಬ್ಬರನ್ನು ಖಂಡಿಸಬೇಕಾದರೆ ಪ್ರತ್ಯೇಕವಾಗಿ ಖಂಡಿಸಿರಿ. ಒಬ್ಬನನ್ನು ಹೊಗಳಬೇಕಾದರೆ ಎಲ್ಲರೆದುರಿಗೆ ಹೊಗಳಿರಿ.

ಜೀವನ ಸಾಗಿಸುತ್ತಾ, ಕಷ್ಟಪರಿಶ್ರಮ, ಇಕ್ಕಟ್ಟಿನ ಸನ್ನಿವೇಶ, ಸಮಸ್ಯೆಗಳನ್ನು ಎದುರಿಸಿ ಮಾತೆ ಮರಿಯಮ್ಮನವರಿಗೆ ನೀಡಿದ ಸಲ್ಲಿಸಿದ ಪ್ರೀತಿಮಯ ಸೇವೆ ಮತ್ತು ಬಾಲ ಯೇಸುವಿಗೆ ತೋರಿದ ಪಿತೃವಾತ್ಸಲ್ಯ ಅಮೋಘ! "ಸಂತ ಜೋಸೆಫರೊಬ್ಬರೇ ಮರಿಯಮ್ಮನವರ ದುಃಖಕ್ಲೇಶ ಸಮಸ್ಯೆಗಳಲ್ಲಿ ಶಾಂತ್ವನ ವೀಯಲು ಶಕ್ತರಾಗಿದ್ದರು'' ಎಂದು ಸಂತ ಬರ್ನಾಡರ ಅಭಿಪ್ರಾಯ. ಇವರು ಪ್ರಾಮಾಣಿಕ ಕೌಟುಂಬಿಕ ಶಿರಸ್ಸಾಗಿ / ಯಜಮಾನರಾಗಿ, ಮರಿಯಮ್ಮನವರ ಸದ್ಭಾವನ ಪತಿಯಾಗಿ, ದೇವತನಯನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ಮಾರ್ಗದರ್ಶನ ತಂದೆಯಾಗಿ, ದೇವರ ಚಿತ್ತವನ್ನು ಅನುಷ್ಠಾನಕ್ಕೆ ತರುವಲ್ಲಿ ಕ್ರಿಸ್ತೀಯ ಜೀವನಕ್ಕೊಂದು ದೃಷ್ಟಾಂತ ವಾಗಿದ್ದಾರೆ. ಸೃಷ್ಟಿಕರ್ತರಾದ ಪಿತದೇವರು ಸಂತ ಜೋಸೆಫರ ಮುಖಾಂತರ ದೈವೀಶಿಸುವಿಗೆ ಆಸರೆಯನ್ನಿತ್ತು ಮಾನವ ಪ್ರೀತಿವಾತ್ಸಲ್ಯವನ್ನು ಧಾರೆಯೆರೆದರು. ದೇವಸುತನಿಂದ 'ಅಪ್ಪ'-'ತಂದೆಯೇ' ಎಂದು ಕರೆಯಲ್ಪಡುವ ಸೌಭಾಗ್ಯವನ್ನು ಹೊಂದಿರುವ ಸಂತ ಜೋಸೆಫರಲ್ಲಿ ಪಿತದೇವರ ಪ್ರತಿರೂಪ ಬಿಂಬಿಸುತ್ತದೆ. "ಯೇಸುಸ್ವಾಮಿಯನ್ನು ಬಾಲ್ಯದಲ್ಲಿ ಲಾಲನೆ - ಪಾಲನೆ ಮಾಡಿ, ಮುದ್ದಾಡಿ, ಬಾಲಯೇಸುವಿನೊಡನೆ ಆಟವಾಡಿದ ಸಂತ ಜೋಸೆಫರಿಗೆ ಸಿಕ್ಕಂತಹ ಸೌಭಾಗ್ಯ ಮತ್ತಾರಿಗೂ ಸಿಗಲಿಲ್ಲ'' ಎಂದು ಸಂತ ಎಫ್ರೆಮರು ಹೆಮ್ಮೆ ಪಡುತ್ತಾರೆ. ನಮ್ಮ ಕುಟುಂಬಗಳು ಪವಿತ್ರ ಕುಟುಂಬದ ಮೌಲ್ಯಗಳ ಗಳಿಕೆಗಾಗಿ ಪ್ರಯತ್ನಿಸುವುದು ಕಾಲೋಚಿತ. ಸಂತ ಜೋಸೆಫರ ನೇತೃತ್ವದಲ್ಲಿ ನಮ್ಮ ಕುಟುಂಬಗಳನ್ನು ಮುನ್ನಡೆಸೋಣ.

ದೇವರ ಸೃಷ್ಟಿಯ ಮುಕುಟವಾದ ಮಾನವನಿಗೆ ಕೆಲಸವೆನ್ನುವುದು ದೇವರ 'ಕರೆ' ಯಾಗಿದೆ. ಪವಿತ್ರ ಧರ್ಮಸಭೆಯು ದುಡಿಮೆಯ ಸ್ಥಾನಮಾನ ಮತ್ತು ಹಕ್ಕನ್ನು ಕಾಪಾಡಿಕೊಂಡು ಬರಲು ಕರನೀಡುತ್ತದೆ, "ಸ್ವಾಭಾವಿಕವಾಗಿ ಮಾನವ ಒಬ್ಬ ಕಾರ್ಮಿಕ'' ಎಂದು ಜೋಸೆಫ್ ಕೋನ್ರಾಡ್‌ರವರು ಬರೆದಿರುತ್ತಾರೆ. "ದುಡಿಯಲೊಲ್ಲದವನು ಉಣಲೂಬಾರದು'' (2 ಥೆಸ 3:10) ಎಂಬ ಪೌಲರ ಉಪದೇಶವೂ ದುಡಿಮೆಯ ಹಿರಿಮೆ ಮತ್ತು ಮೂಲಭೂತ ಅವಶ್ಯಕತೆಯನ್ನು ಸೂಚಿಸುತ್ತದೆ. ತಲೆಂತು ಸಾಮತಿಯಂತೆ (ಮತ್ತಾ 25:14-30) ದೇವರೆಮಗೆ ಉದಾರವಾಗಿ ಅನುಗ್ರಹಿಸಿರುವ ಪ್ರತಿಭೆಗಳನ್ನು ಶೋಧಿಸಿ ಹಾಗೂ ಸಾಮರ್ಥ್ಯಗಳನ್ನು ವಿನಿಯೋಗಿಸಿ ಸ್ವಾವಲಂಬಿಗಳಾಗಿ ಯಾವುದೇ ಕಾಯಕವನ್ನು ಮಾಡಿದಾಗ ಅದಕ್ಕೆ ಘನತೆ, ಗೌರವ, ಆತ್ಮವಿಶ್ವಾಸ, ಸಂತೃಪ್ತಿ, ವ್ಯಕ್ತಿತ್ವವನ್ನು ಪ್ರತಿನಿಧಿಸುವ ಸದಾವಕಾಶ ಪ್ರಕಟಗೊಳ್ಳುತ್ತದೆ. ಅದೇ ಕೈಲಾಸ, ಪ್ರತಿ ಮಾನವೀಯ ಚಟುವಟಿಕೆ ಮತ್ತು ಕಾರ್ಯಗಳು, ದೈವೀ ಸಂಪತ್ತು ಮತ್ತು ಯೋಜನೆಯಿಂದ ಕೂಡಿದಾಗ ಮಾತ್ರ ಮಾನವನು ನೂರ್ಮಡಿ ಸಫಲತೆ ಮತ್ತು ದೇವರ ಆಶೀರ್ವಾದಕ್ಕೆ ಪಾತ್ರನು. "ಕೆಲಸ ಮಾಡುವವನಿಗೆ ಮಾತ್ರ ಕಳಸ'' ಎಂಬಂತೆ ಬಡಗಿಯ ಕೆಲಸ ಸಂತ ಜೋಸೆಫರ ಸಂಸಾರದ ನೌಕೆ ಸಾಗಿಸಲು ಆಧಾರವಾಗಿತ್ತು. ಅವರ ಕೃಪಾಪೋಷಣೆಯಲ್ಲಿ ಬೆಳೆದ ಬಾಲಯೇಸು ವಿನಲ್ಲಿ ವೃತ್ತಿ ಪ್ರೇಮ, ವೃತ್ತಿ ಪರತೆ ಬಿತ್ತಿದರು. ದೇವರ ರಕ್ಷಣೆಯ ರಹಸ್ಯಕಾರ್ಯದಲ್ಲಿ ಸಹಕಾರ್ಮಿಕರಾಗಿ ಸಹಕರಿಸಿ ದೇವರನ್ನು ಮಹಿಮೆ ಪಡಿಸಿದರು. ದುಡಿಮೆಯಿಂದ ಜೀವನವನ್ನು ಪಾವನಗೊಳಿಸಿ ಕಾರ್ಮಿಕರ ಪಾಲಕರಾಗಿ ಅಮರರಾದರು. ಪ್ರತಿಯೊಬ್ಬ ನಾಗರಿಕನು ನಿಷ್ಠಾವಂತ ಕಾಯಕದಿಂದ ಸಮಾಜದ ಮತ್ತು ರಾಷ್ಟ್ರದ ಋಣವನ್ನು ತೀರಿಸಲು ಸಾಧ್ಯ. ಶ್ರಮಜೀವನ ಕ್ಷೀಣಿಸುತ್ತಿರುವ ಇಂದಿನ ದಿನಗಳಲ್ಲಿ ಸಂತ ಜೋಸೆಫರ ಮಾರ್ಗದರ್ಶನ ನಮಗೆ ಸ್ಫೂರ್ತಿದಾಯಕ. ಅವರ ದೈವಿ ಆದರ್ಶ ಬದುಕು, ದಕ್ಷತೆಯ ಕೆಲಸದಿಂದ ನಾವು ಪ್ರೇರೇಪಿತರಾದಾಗ ಸಾರ್ಥಕತೆಯನ್ನು ಪಡೆಯುತ್ತೇವೆ. "ಜಯಶಾಲಿಯಾಗಲಿಕ್ಕಲ್ಲ ದೇವರು ನನ್ನನ್ನು ಕಳುಹಿಸಿದ್ದಾರೆ. ಪ್ರಾಮಾಣಿಕವಾಗಿ ಅವರೊಂದಿಗೆ ದುಡಿಯಲಿಕ್ಕಯಷ್ಟೇ'' ಎಂಬ ಮದರ್ ತೇರೇಜರವರ ನುಡಿಮುತ್ತುಗಳು ಎಷ್ಟೊಂದು ಅರ್ಥಗರ್ಭಿತ!.

ಪ್ರಭು ಯೇಸು ಬಹಿರಂಗ ಜೀವನವನ್ನು ಪ್ರಾರಂಭಿಸುವ ಮೊದಲು ಜೆರಸಲೇಮಿಗೆ ಬಂದಾಗ ಸಂತ ಜೋಸೆಫರು ಮೃತರಾಗಿದ್ದರು. ಅವರನ್ನು ಗೆತ್ಸೆಮಿನಿ ತೋಪಿನಲ್ಲಿ ಭೂಸ್ಥಾಪನೆ ಮಾಡಲಾಗಿತ್ತು. ಇವರ ಬಗ್ಗೆ ಅನೇಕ ಗ್ರಂಥಗಳು. ಸಂತ ಭಕ್ತರು, ಅಭಿಮಾನಿಗಳು, ಪಂಡಿತರು, ಅತ್ಯಮೋಘ ವಿಷಯಗಳನ್ನು ಬೆಳಕಿಗೆ ತಂದಿರುವರು. ಅವಿಲಾದ ಸಂತ ತೆರೇಸಾ ಸಂತ ಜೋಸೆಫರ ಪರಮ ಭಕ್ತೆ. ತನ್ನ ದೈನಂದಿನನುಭವಗಳ ಆಧಾರಿತ ತನಗೆ ಸಂತ ಜೋಸೆಫರಿಂದ ಲಭಿಸಿರುವ ಕೃಪಾವರಗಳ ಸರಮಾಲೆ ಬಗ್ಗೆ ಸಾಕ್ಷ್ಯ ನುಡಿದಿದ್ದಾರೆ. ಕಾರ್ಮೆಲ್ ಸಭೆ, ಸಂತ ಫ್ರಾನ್ಸಿಸ್ ಸಭೆ, ದೊಮಿನಿಕ್ ಸಭೆ, ಸಂತ ಜೋಸೆಫರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನಿತ್ತಿರುವರು. "ಇವರು ಎಲ್ಲಾ ಸಂತರುಗಳಿಗಿಂತ ವಿಭಿನ್ನರು, ಏಕೆಂದರೆ ಜನಸಾಮಾನ್ಯರ ಬದುಕಿನಲ್ಲಿ ಅವರವರ ಪಾಲಕರಾಗಿ ಕಾರ್ಯ ನಿರ್ವಹಿಸುವುದಲ್ಲದೆ ವಿಶ್ವಾಸಿಗಳ ಕೋರಿಕೆಗಳನ್ನು ಈಡೇರಿಸುವ ತಂದೆಯಾಗಿದ್ದಾರೆ'' ಎಂದು ಸಂತ ತೋಮಸ್ ಅಕ್ವಿನಾಸ್ ನುಡಿದಿದ್ದಾರೆ. ಅವರೊಬ್ಬ ಸಾರ್ವತ್ರಿಕ ಪರಾಕ್ರಮಿಯಾಗಿದ್ದಾರೆ. ಅವರನ್ನು ಕುಟುಂಬದ ಒಡೆಯರು, ಗ್ರಹಸ್ಥರ ಆಧಾರ, ವಿರಕ್ತತ್ವದ ಮಾದರಿ, ಕಾರ್ಮಿಕರ ಆದರ್ಶ, ಆಪತ್ಕಾಲದ ಸಂರಕ್ಷಕ, ದೈವಕರೆಯ ಪ್ರೇರಕ, ಆಸ್ತಿ - ಮನೆಮಾರುಗಳ ಆದರಣೆ, ಯುವಕರ ಮಾರ್ಗದರ್ಶಕ, ವ್ಯಾದಿಸ್ಥರ ಸೌಖ್ಯ, ವಿದ್ಯಾರ್ಜನೆ, ನಿರುದ್ಯೋಗಿ, ದುಷ್ಟಶಕ್ತಿಗಳ ಪರಿಪಾಲಕ, ಮರಣಾವಸ್ಥೆಯಲ್ಲಿರುವವರ ಆಶ್ರಯದಾತ ಇತ್ಯಾದಿ ಎಂದು ಕರೆಯಲಾಗುತ್ತದೆ. ವಿಶ್ವವ್ಯಾಪಿ ಇವರ ನಾಮಧೇಯದಿ ಅನೇಕ ದೇವಾಲಯಗಳು, ವಿದ್ಯಾಸಂಸ್ಥೆಗಳು, ಗುರು- ಕನ್ಯಾಸ್ತ್ರಿ ಮಠಗಳು, ಸಂಘಸಂಸ್ಥೆಗಳು, ತಾಂತ್ರಿಕೋದ್ಯಮಗಳು, ಆರೋಗ್ಯ ಕೇಂದ್ರಗಳು, ವೃದ್ಧಾಶ್ರಮಗಳು, ಸೇವಾ ಕೇಂದ್ರಗಳು, ಕ್ರೈಸ್ತ ಭಕ್ತಾದಿಗಳ ಹೆಸರುಗಳಿವೆ.

ಕೊರತಾದ ಸಂತ ಮಾರ್ಗರೀತಮ್ಮನಿಗೆ ದರ್ಶನವಿತ್ತ ಯೇಸುಸ್ವಾಮಿಯೂ "ನನ್ನ ಪಾಲಕ ತಂದೆ ಸಂತ ಜೋಸೆಫರಿಗೆ ನೀನು ತೋರುವ ಪ್ರೀತಿ ಮತ್ತು ಭಕ್ತಿಯನ್ನು ಕಂಡು ನನಗೆ ಸಂತೋಷವಾಗುತ್ತಿದೆ. ಆದರೂ ಇನ್ನೂ ಅಧಿಕವಾಗಿ ಅವರನ್ನು ಗೌರವಿಸಬೇಕು, ಏಕೆಂದರೆ ಅವರು ಸಾಕು ತಂದೆಯಾದರಿಂದ ನನ್ನ ಪ್ರೀತಿಗೆ ಪಾತ್ರರು'' ಎಂದರು. ಈ ಸಂತರು ನಮ್ಮ ಧರ್ಮಕೇಂದ್ರ, ಧರ್ಮಕ್ಷೇತ್ರ, ಧರ್ಮ ಸಭೆಯ ಸಂರಕ್ಷಕರೂ ಆಗಿದ್ದಾರೆ. ನಮ್ಮ ವಿಶ್ವಾಸ ಮತ್ತು ಧರ್ಮವನ್ನು ಕಾಪಾಡುವಲ್ಲಿ ನಮಗೆ ಬೆಂಬಲಿಗರಾಗಿದ್ದಾರೆ. ನಮ್ಮ ದೀನ ಭಿನ್ನಹಗಳನ್ನು ಈಡೇರಿಸಿ ನಮ್ಮನ್ನು ಪಾರಮಾರ್ಥಿಕವಾಗಿ ಕೃತಾರ್ಥರನ್ನಾಗಿ ಮಾಡಿರೆಂದು ದೀನ ನೇತಾರ ಸಂತ ಜೋಸೆಫರ ಆಶ್ರಯಕ್ಕಾಗಿ ಪ್ರಾರ್ಥಿಸೋಣ. ಚಿಕ್ಕಮಗ ಳೂರು ಧರ್ಮಕ್ಷೇತ್ರದ ಸುವರ್ಣೋತ್ಸವ ಮತ್ತು ವಿಶ್ವಾಸದ ವರ್ಷದ ಆಚರಣೆಗೆ ಬಾಧ್ಯಸ್ಥರಾಗಲು ಸಂತ ಪೌಲರ ಬೋಧನೆಯಂತೆ ಆಧ್ಯಾತ್ಮಿಕ ಅಸ್ತ್ರಗಳಿಂದ ಸಜ್ಜಾಗಿ ದೇವರ ಸಾಮ್ರಾಜ್ಯಕ್ಕಾಗಿ ಹಾತೊರೆಯೋಣವೇ ?

❖

ಒಡಹುಟ್ಟಿದವರಂತೆ ಇರಿ, ಆದರೆ ಲೆಕ್ಕಾಚಾರ ಇಟ್ಟುಕೊಳ್ಳಿರಿ.

# ಶೋಷಿತ ಮಹಿಳೆ ಸಮಾನತೆಯೆಡೆಗೆ !

ಮಹಿಳಾ ಸಬಲೀಕರಣ ಯೋಜನೆಯನ್ನು ನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಮಹಿಳಾ ಹಕ್ಕು ಹೋರಾಟಗಾರರು ಮತ್ತು ತೋರಿಕೆಗೆ ಅಥವಾ ಪ್ರಚಾರಕ್ಕಾಗಿ ಅಥವಾ ನಿಯಮ ಪಾಲನೆಗೋಸ್ಕರ ಸರ್ಕಾರ ಮತ್ತು ಇಲಾಖೆಗಳಿಗೆ ಮಾರ್ಚ್ ತಿಂಗಳು ಎಂದಾಗ ಮಹಿಳಾ ದಿನಾಚರಣೆಯ ನೆನಪಾಗಿ ದೇಶದ್ಯಾಂತ ಔಪಚಾರಿಕವಾಗಿ ಮಹಿಳೆಯರಿಂದ ಮೆರವಣಿಗೆ ಮಾಡಿಸಿ ಕೆಲವು ಬೆರಳೆಣಿಕೆಯಷ್ಟು ಮಹಿಳಾ ನಾಯಕರಿಂದ ಮತ್ತು ವೇದಿಕೆಯಲ್ಲಿ ಹೆಚ್ಚಾಗಿ ಪುರುಷರನ್ನು ಕೂರಿಸಿ (ಯಾಕೆಂದ್ರೆ ಪುರುಷ ನಾಯಕರನ್ನು ಕೆಳಗೆ ಮಹಿಳಾ ಸಮವಾಗಿ ಕೂರಿಸಿದರೆ ಅವರ ಗೌರವ ಕಡಿಮೆಯಾಗುತ್ತದೆಂಬ ಇಬ್ಬರಲ್ಲಿರುವ ಕೀಳರಿಮೆ) ಮಹಿಳಾಪರ ಕಾಳಜಿ, ಸಮಾನತೆ, ಅವರ ಹಕ್ಕುಗಳ ರಕ್ಷಣೆಯ ಬಗ್ಗೆ ಆಶ್ವಾಸನೆಗಳ ಸುದೀರ್ಘ ಬಾಷಣದ ರಂಜನೆ ಮಾಡಲಾಗುತ್ತಿತ್ತು. ಆದರೆ ವಾಸ್ತವದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಅನಾಚಾರ ಕಂಡಾಗ ಇಲ್ಲಿಯವರೆಗೆ ನಮ್ಮ ನಾಯಕರು ಹೇಳಿದ್ದು ಕ್ರಿಯಾತ್ಮಕತೆ ಇಲ್ಲದ ಬರೀ ಬೊಗಳೆ ಅಂದಾಯಿತು. ಆದುದರಿಂದ ಇನ್ನಾದರೂ ಮಹಿಳೆಯರ ಮಾನ ಪ್ರಾಣ ರಕ್ಷಣೆ ಮಾಡಲು ಕ್ರಿಯಾಶೀಲವಾಗಿ ಸ್ಪಂದಿಸುವಂತೆ ದೇಶಾದ್ಯಾಂತ ಅಕ್ರೋಶಭರಿತ ಪ್ರತಿಭಟನೆಗಳು ಕಳೆದ ಡಿಸೆಂಬರ್ 16 ರ ನಿರ್ಭಯಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯಂತಹ ಅನಾಗರೀಕ ಕೃತ್ಯದ ನಂತರ ಪ್ರಜ್ಞಾವಂತ ನಾಗರಿಕರು ಎಚ್ಚೆತ್ತು ಕೊಂಡಿದ್ದಾರೆ. ಇಂತಹ ಹೀನ ಕೃತ್ಯಗಳು ಹೆಚ್ಚಿದ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಾಂತ ನಡೆಯುವ ಈ ವರ್ಷದ ಮಹಿಳಾ ದಿನಾಚರಣೆ ಹೆಚ್ಚಿನ ಮಹತ್ವ ಪಡೆದು ಕೊಂಡಿದ್ದು ರಚಾನಾತ್ಮಕವಾಗಿ ಚಿಂತನೆಮಾಡಿ ಈ ನಿಟ್ಟಿನಲ್ಲಿ ಸರಕಾರ ಮತ್ತು ಸಮಾಜ ಕಾರ್ಯ ಪ್ರವೃತರಾಗದಿದ್ದಲ್ಲಿ ಉದಾತ್ತ ಸಂಸ್ಕೃತಿಯುಲ್ಲ ದೇಶ ಅನಾಗರಿಕತೆಯೆಡೆಗೆ ಹೋಗುವುದರಲ್ಲಿ ಸಂಶಯವಿಲ್ಲ.

ಭಾರತ ಜಗತ್ತಿನಲ್ಲಿಯೇ ಅತೀ ದೊಡ್ಡ ಪ್ರಜಾಪ್ರಭುತ್ವದೊಂದಿಗೆ ತನ್ನ ಪ್ರಜೆಗಳಿಗೆ ಸಮಾನತೆಯ ಉನ್ನತ ಮೂಲಭೂತ ಹಕ್ಕುಗಳನ್ನು ಕೊಟ್ಟಿರುವ ವಿಶಾಲ ಸಂವಿಧಾನ ಹೊಂದಿರುವ ದೇಶದಲ್ಲಿ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಬೀದಿಗಿಳಿದು ಮಾನ ರಕ್ಷಣೆಗಾಗಿ ಹೋರಾಟ ಮಾಡುತ್ತಿದ್ದಾರೆಂದರೆ ನಾಚಿಗೇಡಿನ ಸಂಗತಿ. ದೇಶದಲ್ಲಿ ಮಹಿಳೆಯರನ್ನು ದೇವತೆಗಳು, ಸಂಸಾರದ ಕಣ್ಣು ಎಂದು ಹೇಳುತ್ತಿರುವುದು ತೋರಿಕೆಗೆ ಮಾತ್ರ ಎಂಬುವುದು ವಾಸ್ತವತೆ ನೋಡಿ ಗೊತ್ತಾಗಿದೆ. ದೇಶದ ಅಭಿವೃದ್ಧಿಗೆ ಔಪಚಾರಿಕ/ಅನೌಪಚಾರಿಕವಾಗಿ ಪುರುಷರಿಗಿಂತ ಹೆಚ್ಚಿನ ಕೊಡುಗೆಯನ್ನು ನೀಡಿರುವುದು ಮಹಿಳೆಯರೆಂಬುವುದು ಸೂರ್ಯನಷ್ಟು ಸತ್ಯ. (ಆದರೆ ಇದನ್ನು ದ್ವಂದ್ವ ಹಾಗೂ ಸಂಕುಚಿತ ನಿಲುವು ಹೊಂದಿರುವವರು ಒಪ್ಪಲಾರರು) ಇಂತಹ ವಾಸ್ತವತೆ ಇರುವಾಗ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಹಾಗೂ ರಕ್ಷಣೆ ಮಾಡುವಲ್ಲಿ ಕೇವಲ ಕಾಳಜಿ ಮತ್ತು ಭರವಸೆ ನೀಡದೆ ಜವಾಬ್ದಾರಿ ಸ್ಥಾನದಲ್ಲಿರುವರು ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಮಹಿಳಾ ದೌರ್ಜನ್ಯ ಶತಶತಮಾನಗಳಿಂದ ಅಸ್ಥಿತ್ವದಲಿದ್ದರೂ ಮಹಿಳೆಯರು ಅದರ ವಿರುದ್ಧ ಪ್ರತಿಭಟಿಸಲಾರದೆ ದಬ್ಬಾಳಿಕೆಯ ನೋವನ್ನು ಸಹಿಸಿಕೊಂಡು ಬಂದಿದ್ದರು. ಆದರೆ ಮೊದಲ ಬಾರಿಗೆ 1887 ಮಾರ್ಚ್ 8 ರಂದು ತಮ್ಮ ಉದ್ಯೋಗದಲ್ಲಿನ ಅಸಮಾನ ಶೋಷಣಾಭರಿತ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ ಅಮೇರಿಕದಲ್ಲಿ ನೇಕಾರ ಮಹಿಳೆಯರು ಸಂಘಟಿತರಾಗಿ ಹೋರಾಟ ನಡೆಸಿದ್ದರು ಹಾಗೆಯೇ 1910 ರಲ್ಲಿ ರಷ್ಯದ ಕ್ರಾಂತಿಕಾರಿ ಮಹಿಳೆಯಾದ ಕ್ಲೇರಾ ಜೆಟ್ಕಿನಾರವರು ಮಾರ್ಚ್ 8ನ್ನು ಅಂತರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲು ಜಗತ್ತಿನ್ ಎಲ್ಲಾ ಮಹಿಳೆಯರಿಗೂ ಕರೆಕೊಟ್ಟಂದಿನಿಂದ ಈವರಗೂ ಪ್ರತೀವರ್ಷ ಮಾರ್ಚ್ ತಿಂಗಳಿನಲ್ಲಿ ಮಹಿಳಾ ದಿನಾಚರಣೆ ಮಾಡಿ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಅವಲೋಕನ ಮಾಡಿದಾಗ ವಾಸ್ತವದಲ್ಲಿ ನಡೆಯುವ ಅತ್ಯಾಚಾರ ಹಾಗೂ ಮಹಿಳಾ ಶೋಷಣೆಯ ಹಿನ್ನೆಲೆ ಹಾಗೂ ನಿಯಂತ್ರಣ ಕ್ರಮಗಳನ್ನು ವಿಶ್ಲೇಸುವುದುಚಿತ.

ಕೇಂದ್ರ ಅಪರಾಧ ವಿಭಾಗದ ವರದಿಯ ಪ್ರಕಾರ ದೇಶದಾದ್ಯಂತ ಪ್ರತೀ 22 ನಿಮಿಷಕ್ಕೆ ಒಂದು ಮಹಿಳಾ ದೌರ್ಜನ್ಯದಂತಹ ಪ್ರಕರಣ ದಾಖಲಾಗುತ್ತಿದೆ. ಆದರೆ ಸಾಮಾಜಿಕ ಕಳಂಕ, ತಾರತಮ್ಮ, ದಬ್ಬಾಳಿಕೆಯ ಭಯದಿಂದ ದಾಖಲಾಗದ ಪ್ರಕರಣಗಳು ಅದೆಷ್ಟೋ. ಶತಮಾನಗಳಿಂದ ದೇಶವು ವಿದೇಶಿ ಸಾಮ್ರಾಜ್ಯ ಶಾಹಿಗಳಿಂದ ಮಹಿಳೆಯರ ಮಾನ ಕೊಳ್ಳೆ ಹೊಡೆದಕ್ಕಿಂತ ಹೆಚ್ಚಾಗಿ 66 ವರ್ಷದ ಸ್ವಾತಂತ್ರ್ಯ ಭಾರತದಲ್ಲಿ ಹೆಣ್ಣು ಮಕ್ಕಳ ಮಾನ ಹರಜಾಗುತ್ತಿದೆ ಎಂದರೆ ಅತೀಶಯೋಕ್ತಿಯಾಗಲಾರದು. ಸಾವಿರಾರು ವರ್ಷಗಳ ಇತಿಹಾಸದ ಉನ್ನತ ನಾರೀಕತೆ ಹೊಂದಿದ ಪ್ರಸಿದ್ಧ ದಾರ್ಶನಿಕರು, ಸಮಾಜ ಸುಧಾರಕರು, ಚಿಂತಕರು ಬಾಳಿ ಬದುಕಿದ ಸಮಾಜ ಇಂದು ಸಾಗುತ್ತಿರುವ ರೀತಿ ಆತಂಕಕಾರಿ. ಹೀಗಿರುವ ಪರಿಸ್ಥಿತಿಯಲ್ಲಿ ಪ್ರಜ್ಞಾವಂತ ನಾಗರೀಕರು ಇದಕ್ಕೆ ಮುಕ್ತಿಯನ್ನು ಹಾಡಲೇಬೇಕು ಎಂಬ ಬದ್ಧತೆಯಿಂದ ಬೀದಿಗಿಳಿದು ನಮ್ಮನ್ನು ಆಳುವ ದಪ್ಪ ಕಿವಿಯ ಅಘೋಷಿತ ದೊರೆಗಳಲ್ಲಿ ಒತ್ತಾಯಿಸುತ್ತಿದ್ದಾರೆ. ಜೊತೆಗೆ ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯ ಬದಲಾವಣೆ ತರಲು ಅಲ್ಲಿ ಇಲ್ಲಿ ಚಿಂತನೆ ಪ್ರಾರಂಭವಾಗಿದೆ. ಈ ನಿಟ್ಟಿನಲ್ಲಿ ಕೊನೆಗಾದರೂ ನಾಗರಿಕ ಸಮಾಜ ಎಚ್ಚೆತ್ತುಕೊಂಡಿರುವುದು ಉತ್ತಮ ಬೆಳವಣಿಗೆ.

ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವಲ್ಲಿ ಜಗತ್ತಿನಾದ್ಯಂತ ಹಲವು ವಿರೋದಾಬಾಸಗಳು ಕಂಡು ಬರುತ್ತಿದ್ದು ಸಂಪೂರ್ಣ ಸ್ವಾತಂತ್ರ್ಯ ಮರೀಚಿಕೆಯಾಗಿದೆ. ಇದರ ಹಿಂದೆ ಪುರುಷ ಪ್ರೇರಿತ ವ್ಯವಸ್ಥೆಯು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನೀಡಲು ನಿರಾಕರಿಸುತ್ತಿದ್ದು ಅದನ್ನು ಕೊಟ್ಟರೂ ತಾವು ಕೊಟ್ಟ ಭಿಕ್ಷೆ ಎಂಬ ಹುಂಬತನದಿಂದ ವರ್ತಿಸುತ್ತಿದೆ (ಇದಕ್ಕೆ ಮಹಿಳೆಯರಲ್ಲಿನ ಕೀಳರಿಮೆಯೂ ಕಾರಣ) ಅದಕ್ಕೆ ಇತ್ತೀಚೆಗೆ ಕೆಲವರು ಮಹಿಳೆಯರ ವಿರುದ್ಧ ದ್ವಂದ್ವ ನಿಲುವುಗಳನ್ನು ಮಂಡಿಸಿ ತಮ್ಮ ನೈಜ ಮುಖವಾಡವನ್ನು ಬಹಿರಂಗಪಡಿಸಿ ನಗೆಪಾಟಲಾಗಿದ್ದಾರೆ. ಧಾರ್ಮಿಕತೆಯಲ್ಲಿ ಸಂಪ್ರದಾಯ, ಕಂದಾಚಾರ, ಆಚರಣೆ, ಕಟ್ಟುಪಾಡುಗಳನ್ನು ಮಾಡಿ ಮಹಿಳೆಯರನ್ನು ನಿಯಂತ್ರಿಸಲಾಗಿದ್ದು ಅದು ಅತೀ ಮೌನದಿಂದ ಮುಂದುವರಿಯುತ್ತಿದೆ. ಅಲ್ಲದೆ ಪುರುಷ ಪ್ರೇರಿತ ಅಲಿಖಿತ ಸಂವಿಧಾನವನ್ನು ರಚಿಸಿ ಮಹಿಳೆಯರನ್ನು ದಾರ್ಮಿಕ ವಿಧಿ ವಿದಾನಗಳಲ್ಲಿ ಸಮಾನವಾಗಿ ಪಾಲ್ಗೊಳ್ಳಲು ನಿರಾಕರಿಸುತ್ತಿರುವುದಲ್ಲದೆ ಅಧರ್ಮಕತೆಯ ಅಪರಾಧವನ್ನು ವಿಧಿಸಿದ್ದಾರೆ ಹಾಗೆಯೇ ಇದರಿಂದ ಹಿಂದುಳಿದ ಜಾತಿಗಳಲ್ಲಿನ ಮಹಿಳೆಯರ ಬದುಕಂತು ಇನ್ನೂ ಶೋಚನೀಯವಾಗಿದೆ.

ಹೆಣ್ಣು ಮಕ್ಕಳ ಮೇಲೆ ಹೆಚ್ಚಿದ ಕ್ರೌರ್ಯಗಳಿಂದ ಕೆಲವರು ಇತ್ತೀಚೆಗೆ ನಿರಾಶೆಯಿಂದ ಮಾತನಾಡುತ್ತಿರುವುದು ಕಳವಳಕಾರಿ ಸಂಗತಿ. "ಅಬ್ಬಾ ನಮಗೆ ಹೆಣ್ಣು ಮಕ್ಕಳಿಲ್ಲದ್ದು ಸರಿಹೋಯಿತು, ಇದ್ದಿದ್ದರೆ ಈಗಿನ ಪರಿಸ್ಥಿತಿಯಲ್ಲಿ ಕಾಮುಕರಿಂದ ರಕ್ಷಿಸುವುದು ಸಾಧ್ಯವಿರಲಿಲ್ಲ. ಹೆಣ್ಣು ಬೇಡವೇ ಬೇಡ ಎಂಬ ತಾತ್ಸಾರದ ಮಾತುಗಳು ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಅಂದರೆ ಲೋಕದ

ವಿನ್ಸೆಂಟ್ ಸಿಕ್ವೇರಾ,
ಸಿ.ಎಮ್.ಎಸ್.ಎಸ್.ಎಸ್, ಹಾಸನ.



ಸರಳವಾಗಿ ಬದುಕಲು ಕಲಿತುಕೊಳ್ಳಿ ಇದರಿಂದ ಲೆಕ್ಕವಿಲ್ಲದಷ್ಟು ಒಳಿತು ಉಂಟಾಗುತ್ತದೆ.

ಬೆಳಕನ್ನೇ ನೋಡುವ ಮುಂಚೆಯೇ ಹೆಣ್ಣು ಭ್ರೂಣ ಹಾಗೂ ಶಿಶುಗಳನ್ನು ಹತ್ಯೆ ಮಾಡಿ ಅವರ ಸಂಖ್ಯೆಯನ್ನು ಕಡಿಮೆಗೊಳಿಸಿ ಸಾಮಾಜಿಕ ಸಮಸ್ಯೆ ಸೃಷ್ಟಿಸಿದ್ದು ಇನ್ನು ಮುಂದೆ ಇದರ ಸಮಸ್ಯೆಯ ಕಂದಕ ಯಾವ ಪ್ರಮಾಣದಲ್ಲಿ ಉಂಟಾಗಬಹುದು ಎಂಬುವುದೇ ಭಯ ಹುಟ್ಟಿಸುತ್ತದೆ. ಇಲ್ಲಿ ಮಹಿಳೆ ಇಂತಹ ಅಮಾನುಷ ಕೃತ್ಯಕ್ಕೆ ಅನಿವಾರ್ಯವಾಗಿ ಬೆಂಬಲಿಸಬೇಕಾದ್ದು ಮಾತ್ರ ವಿಪರ್ಯಾಸ.

ಲೈಂಗಿಕ ಕಾರ್ಯಕರ್ತೆಯರ ವಿಷಯದಲ್ಲಿ ನಮ್ಮ ಸಮಾಜ ಕೇವಲ ಮಹಿಳೆಯರನ್ನು ದೂಷಣೆ ಮಾಡುವುದು ಕಂಡು ಬರುತ್ತದೆ. ಯಾರೂ ಬಯಸಿ ಈ ವೃತ್ತಿಗೆ ಇಳಿಯುವುದಿಲ್ಲ ಆದರೆ ಪುರುಷ ಪ್ರೇರಿತ ಸಮಾಜದ ಸ್ವಾರ್ಥ, ಕ್ರೌರ್ಯ ಮತ್ತು ಒತ್ತಡದಿಂದ ಶೇಕಡ 75 ರಷ್ಟು ಹೆಣ್ಣು ಮಕ್ಕಳು ಅನಿವಾರ್ಯವಾಗಿ ವೇಶ್ಯಾವಾಟಿಕೆಯನ್ನು ನಡೆಸಿ ಸಮಾಜದ ಕೆಂಗಣ್ಣಿಗೆ ಗುರಿಯಾಗಿ ಕಣ್ಣೀರಲ್ಲಿ ಕೈ ತೊಳೆಯುವಂತಹ ಸ್ಥಿತಿ ಮರುಕವೆನಿಸುತ್ತದೆ.

ಅತ್ಯಾಚಾರಗಳನ್ನು ತಡೆಯಲು ಹೆಣ್ಣಿನ ಮದುವೆ ವಯಸ್ಸನ್ನು ಕಡಿಮೆಗೊಳಿಸಿ ಬಾಲ್ಯ ವಿವಾಹಕ್ಕೆ ಉತ್ತೇಜನ ನೀಡಿ ಮಹಿಳೆಯರ ಸ್ಥಾನ ನಾಲ್ಕು ಗೋಡೆಗೆ ಸೀಮಿತಗೊಳಿಸುವಂತಹ ಹಾಗೂ ನಡೆಯವ ಹೀನ ಕೃತ್ಯಗಳಿಗೆ ಮಹಿಳೆಯರನ್ನು ಹೊಣೆ ಮಾಡಿ ನೀಡುವಂತಹ ಬೇಜವಾಬ್ದಾರಿ ಹೇಳಿಕೆಗಳು ಖಂಡನೀಯ ಮತ್ತು ಅದು ನಾಗರೀಕ ಸಮಾಜಕ್ಕೆ ಶೋಭೆ ತರುವಂತಹುದಲ್ಲ. ಅತ್ಯಾಚಾರ ಮಾಡುವವರು ದೈಹಿಕವಾಗಿ ಲೂಟಿಹೊಡೆಯುವುದು ಮಾತ್ರವಲ್ಲ ಅವಳ ಭಾವನೆ ಮತ್ತು ಅಸ್ತಿತ್ವವನ್ನೇ ನಾಶ ಮಾಡುತ್ತಾರೆ. ಪುರುಷ ಎಂದರೆ ಅಧಿಕಾರ ಮತ್ತು ಹೆಣ್ಣು ತನ್ನ ಅಡಿಯಾಳು ಎಂಬ ಶತ ಶತಮಾನಗಳಿಂದ ಅಳವಡಿಸಿಕೊಂಡ ಭಾವನೆಗಳಿಂದ ಮಹಿಳೆಯರ ಸ್ವಾತಂತ್ರ್ಯವನ್ನು ನೋಡಲಾಗದ ಅಸಹಾಯಕ ಮನಸ್ಸಿನವರಿಂದ ಮಹಿಳೆಯರ ಮೇಲೆ ವಿವಿದ ದೌರ್ಜನ್ಯಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಮಹಿಳೆಯರ ವಿರುದ್ಧವಿರುವ ಸಮಾಜದ ಮನೋಧರ್ಮವನ್ನು ಬದಲಿಸಬೇಕಾದ್ದು ಇಂದಿನ ಅವಶ್ಯಕತೆ. ಅದಕ್ಕಾಗಿ ಕಟ್ಟುನಿಟ್ಟಿನ ಕಾನೂನಿನ ಅನುಷ್ಠಾನ ಜೊತೆಗೆ ಸಮುದಾಯದ ವಿವಿದ ಸ್ತರಗಳಲ್ಲಿರುವ ನ್ಯಾಯದೀಶರು, ನ್ಯಾಯವಾದಿಗಳು, ಪೋಲಿಸರು, ಧಾರ್ಮಿಕ ಮುಖಂಡರು, ರಾಜಕಾರಣಿಗಳು, ಶಿಕ್ಷಕರು, ಅಧಿಕಾರಿವರ್ಗ ಮತ್ತು ಸಾರ್ವಜನಿಕರಿಗೆ ಲಿಂಗ ಸಂವೇದನೆಯನ್ನು ಮೂಡಿಸಬೇಕು.

ಇಂದು ಮಹಿಳೆಯರು ಯಾರನ್ನೇ ನಂಬಲಾಗದ ಪರಿಸ್ಥಿತಿ ಉಂಟಾಗಿದ್ದು ಮಾನವೀಯ ಸಂಬಂಧಗಳಿಗೆ ಎಳ್ಳು ನೀರು ಬಿಟ್ಟಂತಹ ಮೃಗೀಯ ಮನಸ್ಥಿತಿಯ ತಂದೆ, ಅಣ್ಣ, ಸಂಬಂಧಿಕರೇ ತಮ್ಮ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡುವುದು ಅಲ್ಲದೆ ಗುರು ದೇವೋಭಾವ ಸ್ಥಾನಕ್ಕೆ ಕಳಂಕಿತ ಶಿಕ್ಷಕರಿಂದ ಲೈಂಗಿಕ ಕಿರುಕುಳ ಅಲ್ಲದೇ ಚಿಕ್ಕ ಮಕ್ಕಳೆನ್ನದೇ ಅವರ ಮೇಲೆ ನಡೆಯುವ ಹೇಯ ಕೃತ್ಯಗಳು ಸಮಾಜದ ಅಧೋ:ಪತನಕ್ಕೆ ತಳ್ಳುವ ಮುನ್ಸೂಚನೆಯಂತೆ ಭಾಸವಾಗುತ್ತದೆ.

ಜಾತಿ ಅಂತಸ್ಥಿಗೆ ಕಳಂಕ ಎಂಬ ಕುರುಡು ಭ್ರಮೆಯಿಂದ ಪ್ರೀತಿಸಿ ಮದುವೆಯಾದ ತಮ್ಮ ಸ್ವಂತ ಮಕ್ಕಳು ಯಾವುದೇ ಕರುಣೆ ಇಲ್ಲದೆ ಮರ್ಯಾದ ಹತ್ಯೆ ಮಾಡುವ ಕಟುಕರು ಮಹಿಳೆ ಮೇಲೆ ನಡೆಯುವ ಹೀನ ಕೃತ್ಯ ಅಥವಾ ಅಮಾನುಷ ಅಪರಾದಿಗಳಿಗೆ ತಮ್ಮವರು ಎಂದು ಅವರಿಗೆ ಬೆಂಬಲ ಮತ್ತು ಸಹಕಾರ ನೀಡುತ್ತಿರುವುದು ಮಾತ್ರ ಅಧುನಿಕ ಸಮಾಜದ ದುರಂತ, ಇದರಿಂದ ಅಪರಾಧಿಗಳಿಗೆ ಇನ್ನೊಂದು ಅಪರಾಧ ಮಾಡಲು ಕುಮ್ಮಕ್ಕು ನೀಡಿದಂತೆ ಮತ್ತು ಇತರರಿಗೆ ಸಮಜ ಬಾಹಿರ ಕೆಲಸಗಳಲ್ಲಿ ತೊಡಗಲು ಭಯವಿಲ್ಲದ ವಾತವಾರಣ ಸೃಷ್ಟಿಸುತ್ತದೆ. ಈಗ ಎಂತಹ ಅಮಾನುಷ ಕೃತ್ಯಗಳನ್ನು ನಡೆಸಿದರೂ ಉಳ್ಳವರು ಕಾನೂನನ್ನು ಖರೀದಿಸಿ ಅಮಾಯಕರು ಜೀವನ ಪರ್ಯಂತ ನಲುಗುವಂತೆ ಮಾಡುತ್ತಿದ್ದಾರೆ. ಅಪರಾಧ ಪ್ರಕರಣಗಳಲ್ಲಿ ತಪ್ಪು ಮಾಡಿದವರನ್ನು ಯಾರೇ ಆಗಲಿ ಅವನ ಪರ ವಹಿಸದೆ ಖಂಡಿಸಲೇಬೇಕು ಮತ್ತು ಕಾನೂನು ಪ್ರಕಾರ ಶಿಕ್ಷೆಯಾಗಲು ಅನುವು ಮಾಡುವುದು ಮಾತ್ರವಲ್ಲ ಅಂತವರನ್ನು ಸಮಾಜದಿಂದಲೇ ಬಹಿಷ್ಕಾರ ಹಾಕುವಂತಾದರೆ ಸಮುದಾಯದಲ್ಲಿ ಉಂಟಾಗುವ ಅನಾಗರಿಕ ದುಷ್ಕೃತ್ಯಗಳು ಕಡಿಮೆಯಾಗಬಹುದು. ಹಾಗೆಯೇ ಅಪರಾಧಿಗಳು ನಮ್ಮ ಮದ್ಯೆ ಇರುವ ಒಂದು ಕುಟುಂಬದ ಸದಸ್ಯರಾಗಿರುವುದರಿಂದ ಅವರನ್ನು ಸಾಕಿ ಬೆಳಸಿದ ಸಮಾಜದ ಹಿನ್ನೆಲೆ ಪ್ರಶ್ನಿಸಬೇಕಾಗುತ್ತದೆ. ಆದುದರಿಂದ ಮಕ್ಕಳನ್ನು ತಿದ್ದಿ ತೀಡಿ ಸನ್ನಡತೆಯನ್ನು ಕಲಿಸಲು ಆಗದೆ ಅವರು ಸಮಾಜ ಕಂಟಕರಾಗಲು ಕಾರಣರಾಗಿ ಜೀವನ ಪರ್ಯಂತ ಪ್ರಾಯಶ್ಚಿತ ಪಡುವುದಕ್ಕಿಂತ ಅಂತವರು ಮಕ್ಕಳನ್ನು ಪಡೆಯದಿರುವುದೇ ಲೇಸು.

ಮಹಿಳೆಯರು ಸ್ವತಂತ್ರ ವಿಚಾರ ಮಾಡುವ ಸಾಮಾರ್ಥ್ಯಗಳಿಸದೆ ಹೋದರೆ ನಾಳಿನ ದಿನ ಅವರಿಗೆ ಉಳಿಗಾಲವಿಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತು ಶತಮಾನ ಕಳೆದರೂ ಈಗಲೂ ಪ್ರಸ್ತುತ. ಮಹಿಳೆಯರು ಅವಕಾಶ ನೀಡಿದರೂ ತಮ್ಮಲ್ಲಿರುವ ಕೀಳರಿಮೆ ಯನ್ನು ಬಿಡದೆ ಸೋಮಾರಿತನವನ್ನು ಬಿಟ್ಟು ಸಮಾಜದ ಮುಖ್ಯವಾಹಿನಿಗೆ ಬರಬೇಕಾಗಿದೆ. ನಿಮಗೆ ಬೇರೆಯುವರ ಅನುಕಂಪದಿಂದ ನೀಡುವ ಅವಕಾಶಗಳಿಂದ ನಿಮ್ಮ ಏಳಿಗೆ ಸಾಧ್ಯವಿಲ್ಲ ಇದರಿಂದ ನೀವು ಅವರ ಹಂಗಿನಲ್ಲಿಯೇ ಇರಬೇಕಾಗಿದೆ ಎಂದು ಅರ್ಥಮಾಡಿಕೊಳ್ಳಬೇಕು. ಆದುದರಿಂದ ಸಂವಿಧಾನದತ್ತ ಹಕ್ಕು ಅವಕಾಶಗಳನ್ನು ತಿಳಿದು ಪಡೆಯಲು ಸಬಲರಾದಲ್ಲಿ ಮಾತ್ರ ಮಹಿಳೆಯರ ಉದ್ಧಾರ ಸಾಧ್ಯ.

ಪಿತೃ ಪ್ರಧಾನ ವ್ಯವಸ್ಥೆ, ಹೆಣ್ಣು ಎಂದರೆ ಭೋಗದ ವಸ್ತು ಎನ್ನುವ ಕೀಳು ಮನಸ್ಥಿತಿ, ಸಮೂಹ ಮಾದ್ಯಮಗಳಲ್ಲಿ ಹೆಣ್ಣನ್ನು ಪ್ರಚೋದನಾತ್ಮಕವಾಗಿ ಚಿತ್ರಿಸುವುದು, ಅತೀಯಾದ ಪಾಶ್ಚಾತ್ತೀಕರಣದ ಅನುಕರಣೆಯ ಪ್ರಭಾವ ಹಾಗೂ ಅಶ್ಲೀಲ ಸಾಹಿತ್ಯಗಳು ಕೂಡ ಇಂದಿನ ಅತೀ ಕಾಮುಕತನಕ್ಕೆ ಪ್ರೇರಣೆ ನೀಡಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಹೆಚ್ಚಾಗಲು ಪ್ರತ್ಯಕ್ಷ ಅಥವಾ ಪರೋಕ್ಷ ಕಾರಣ ಎಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಕದಡದ ರೀತಿಯಲ್ಲಿ ಎಲ್ಲಾ ಸಾಮಾಜಿಕ ಜಾಲ ಹಾಗೂ ಮಾದ್ಯಮಗಳನ್ನು ಕಡಿವಾಣ ಹಾಕಲು ಬಿಗಿ ಕಾನೂನು ರಚನೆ ಮಾಡಿ ಮತ್ತು ಅದರ ಪರಿಣಾಮಕಾರಿ ಅನುಷ್ಠಾನ ಮಾಡುವಲ್ಲಿ ಸರಕಾರ ತನ್ನ ಇಚ್ಚಾ ಶಕ್ತಿಯನ್ನು ಪ್ರದರ್ಶಿಸಬೇಕು, ಮಹಿಳಾ ಶೋಷಣೆ ಕಡಿಮೆ ಮಾಡಿ ಸಮಾನತೆ ತರಲು ಶಿಕ್ಷಣದಲ್ಲಿ ಅಮೂಲಾಗ್ರ ಸುದಾರಣೆ ಅವಶ್ಯ. ಮೌಲ್ಯಾಧಾರಿತದ ಜೊತೆಗೆ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ಶಿಕ್ಷಣವನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಬೇಕು. ಅಲ್ಲದೆ ಹೆಣ್ಣುಮಕ್ಕಳಿಗೆ ಅದರಲ್ಲಿಯೂ ಹಿಂದುಳಿದ ಜಾತಿ, ಪಂಗಡ ಮತ್ತು ಕಡು ಬಡವರಿಗೆ ಉಚಿತ ಶಿಕ್ಷಣವನ್ನು ಖಾಸಗಿ ಹಾಗೂ ಸರಕಾರಿ ಶಾಲೆಗಳಲ್ಲಿ ನೀಡುವುದಲ್ಲದೆ ಕಡ್ಡಾಯವಾಗಿ ಉದ್ಯೋಗವನ್ನು ಒದಗಿಸಲು ಸರ್ಕಾರ ಮುಂದಾದಲ್ಲಿ ಕಾರ್ಲ್‌ಮಾರ್ಕ್ಸ್ ಪ್ರಕಾರ "ಹೆಣ್ಣು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸ್ವತಂತ್ರಳಾಗದ ಹೊರತು ಯಾವ ದೇಶದ ಅಭಿವೃದ್ಧಿಯೂ ಸಾಧ್ಯವಿಲ್ಲ" ಎಂಬ ಮಾತಿಗೆ ಮನ್ನಣೆ ನೀಡಿದಂತಾಗುತ್ತದೆ.

ಹಾಗೆಯೇ ಯುವ ಜನರು ಮಾಧ್ಯಮಗಳ ಹಾಗೂ ಇತರ ನಕಾರಾತ್ಮಕ ವಿಷಯಗಳ ಪ್ರಭಾವದಿಂದ ಪ್ರೇರಿತರಾಗಿ ಹೊತ್ತು ಗೊತ್ತು ಇಲ್ಲದ ವಯಸ್ಸಲ್ಲಿ ಆಕರ್ಷಣೆಯೇ ಪ್ರೀತಿ ಎಂದು ಭಾವಿಸಿ ಸಂಸಾರ ಸಡೆಸಲು ಮುಂದಾಗಿ ಮುಂದೆ ಸಂಭವಿಸುವ ಅತಂತ್ರ ಸ್ಥಿತಿಗೆ ಹೆಚ್ಚಾಗಿ ಹೆಣ್ಣೇ ನರಕಯಾತನೆ ಅನುಭವಿಸಬೇಕಾಗುತ್ತದೆ ಎಂಬುವುದನ್ನು ಹೆಣ್ಣು ಮಕ್ಕಳು ಮರೆಯಬಾರದು. ಈ ದಿಶೆಯಲ್ಲಿ ಪ್ರಾಪ್ತ ವಯಸ್ಸಿನಲ್ಲಿ ಯೋಗ್ಯ ಅವಧಿಯಲ್ಲಿ ಸ್ವತಂತ್ರ ನಿರ್ಧಾರ ಮಾಡಿ ಸೂಕ್ತ ಸಂಗಾತಿಯನ್ನು ಒಮ್ಮತದಿಂದ ಯಾವುದೇ ರೀತಿಯ ಅಮಿಷಕ್ಕೊಳಗಾಗದೆ ಆಯ್ಕೆ ಮಾಡಿ ಕುಟುಂಬ ಜೀವನಕ್ಕೆ ಮುಂದಾಗುವುದು ಜಾಣತನ.

ಅತ್ಯಾಚಾರಿಗಳಿಗೆ ಅತ್ಯುಗ್ರ ಶಿಕ್ಷೆಯಾದ ಗಲ್ಲು ಶಿಕ್ಷೆ ಅಥವಾ ಅವನ ಪುರುಷತ್ವ ಹರಣ ಮಾಡಿ ಜೀವನ ಪರ್ಯಂತ ಜೈಲು ಶಿಕ್ಷೆ ನೀಡುವುದೆ ಪಾಪಿಗಳಿಗೆ ನಿಜವಾದ ಶಿಕ್ಷೆ. ಆದರೆ ಅದು

ಸರಳವಾಗಿ ಬದುಕಲು ಕಲಿತುಕೊಳ್ಳಿ ಇದರಿಂದ ಲೆಕ್ಕವಿಲ್ಲದಷ್ಟು ಒಳಿತು ಉಂಟಾಗುತ್ತದೆ.

ಬಲಿಪಶುವಾದ ಹೆಣ್ಣನ್ನು ಪೀಡಿಸದೆ ಮತ್ತು ನ್ಯಾಯಕ್ಕಾಗಿ ಜಾತಕ ಪಕ್ಷಿಯಂತೆ ಕಾಯಿಸದೆ ಶೀಘ್ರದಲ್ಲಿ ವಿಚಾರಣೆ ಕೈಗೆತ್ತಿ ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗದೆ ನ್ಯಾಯ ಒದಗಿಸಬೇಕು. ಗಲ್ಲು ಶಿಕ್ಷೆ ಎಂದಾಗ ಕೆಲವರು ವಿರೋಧ ಮಾಡುವವರು ಇದ್ದಾರೆ ಅದರೆ ಎಳ್ಳಷ್ಟು ಮಾನವೀಯತೆ ಇಲ್ಲದ ಮೃಗ ಜಾತಿಗಳಿಗೆ ಕರುಣೆ ತೋರುವುದು ಅಕ್ಷಮ್ಯ ಅಪರಾದ. ಇನ್ನೋಬ್ಬರ ಬದುಕಿಗೆ ಗೌರವ, ರಕ್ಷಣೆ ಕೊಡದೆ ಅವರನ್ನು ಕ್ರೂರತೆಯಿಂದ ನಾಶಪಡಿಸುವವರಿಗೆ ಬದುಕುವ ಹಕ್ಕಿನ ಬಗ್ಗೆ ಯೋಚಿಸಲು ಇದು ಸಕಾಲ.

ಮಹಿಳೆಯರ ಪರ ವಹಿಸಿ ಪುರಷ ವಿರೋಧಿಯಾಗಿ ಮಾತ್ರ ವಾದಿಸಿದಲ್ಲಿ ಸಮಾನತೆಯ ಪರ ದುಡಿಯುವ ಪ್ರಾಮಾಣಿಕ ಪುರುಷರಿಗೆ ಹಾಗೂ ಮಹಿಳೆಯರಿಂದ ದೌರ್ಜನ್ಯಕ್ಕೋಳಗಾದ ಪುರುಷರಿಗೆ ಅನ್ಯಾಯ ಮಾಡಿದಂತಾಗುತ್ತದೆ. ತನ್ನ ಪರವಾಗಿರುವ ಕಾನೂನುಗಳನ್ನು ದುರುಪಯೋಗ ಮಾಡಿ ಸಮಾಜ ಬಾಹಿರ ಕೃತ್ಯಗಳಿಗೆ ಪ್ರೇರಣೆ ನೀಡಿ ಅಮಾಯಕ ಯುವಕರನ್ನು ವಂಚಿಸುತ್ತಿರುವ ಮಹಿಳೆಯರಿಗೆ ಯಾವುದೇ ರಿಯಾಯ್ತಿ ನೀಡದೆ ಶಿಕ್ಷಿಸಬೇಕು.

ಮಹಿಳೆಯರಿಗೆ ಅಧಿಕಾರ ನೀಡುವಲ್ಲಿ ರಾಜಕೀಯ ಪಕ್ಷಗಳು ಜಾಣ ಮೌನ ಹಾಗೂ ಜಾಣ ಕುರುಡು ಪ್ರದರ್ಶಿಸಿ ದಿನ ತಳ್ಳುತ್ತಿದ್ದಾರೆ. ಇಲ್ಲದಿದ್ದರೆ ಪಾರ್ಲಿಮೆಂಟಿನಲ್ಲಿ 33% ದಷ್ಟು ಮಹಿಳೆಯರಿಗೆ ಮೀಸಲಾತಿಯನ್ನು ಕೊಡುವ ಮಸೂದೆಯನ್ನು ಇಲ್ಲಿಯವರೆಗೂ ಜಾರಿಮಾಡಲು ಹಿಂದೇಟು ಹಾಕುತ್ತಿರಲಿಲ್ಲ. ಆದರೆ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಕೆಲವು ರಾಜ್ಯಗಳು 50% ರಷ್ಟು ರಾಜಕೀಯದಲ್ಲಿ ಮಹಿಳೆಯರಿಗೆ ಅವಕಾಶ ನೀಡಿದ್ದರೂ ಇಲ್ಲಿಯೂ ಮಹಿಳೆಯರ ಅಸಹಯಾಕತೆಯನ್ನು ದಾಳ ಮಾಡಿ ಪರೋಕ್ಷವಾಗಿ ಅವರ ಗಂಡಂದಿರು ಹಾಗೂ ಮೇಲ್ಜಾತಿ ಅಂದುಕೋಳ್ಳುವವರು ಮಹಿಳೆಯರ ಅಧಿಕಾರ ದುರುಪಯೋಗ ಮಾಡುತ್ತಿರುವುದು ವಿಪರ್ಯಾಸ. ಅದೂ ಅಲ್ಲದೆ ರಾಜಕೀಯ ಅಧಿಕಾರವು ಸಮಾಜದಲ್ಲಿ ಉಳ್ಳವರ ಮತ್ತು ರಾಜಕೀಯ ಹಿನ್ನೆಲೆ ಹೊಂದಿದವರಲ್ಲಿ ಹೆಚ್ಚಾಗಿ ಕೇಂದ್ರಿಕೃತವಾಗುತ್ತಿದ್ದು ಹಿಂದುಳಿದ ಜಾತಿ, ವರ್ಗ ಪಂಗಡಗಳ ಮಹಿಳೆಯರಿಗೆ ಸ್ವಯಂ ಅಧಿಕಾರ ಅವಕಾಶಗಳು ಗಗನ ಕುಸುಮವಾಗುತ್ತಿದೆ. ಹಾಗೆಯೇ ಇದ್ದರೂ ಅದನ್ನು ಚಲಾಯಿಸುವಲ್ಲಿ ಇಂತಹ ಮಹಿಳೆಯರು ಎಡವುತ್ತಿರುವುದು ಬೇಸರದ ಸಂಗತಿ.

ಮಹಿಳೆಗೆ ಮಹಿಳೆಯೇ ಶತ್ರು ಎಂಬ ನಾನ್ನುಡಿ ಈಗಲೂ ಪ್ರಸ್ತೂತ. ನಾನು ಕೊಡೆ ನೀನು ಬಿಡೆ ಎಂಬಂತಾಗಿದೆ ಮಹಿಳೆಯರಳೊಗಿನ ಸ್ಥಿತಿ. ಪುರುಷರೂ ಅವಕಾಶ ನೀಡಿದರೂ ಕೆಲವು ತಾಯಂದಿರು ನಿರಾಕರಿಸುವ ಉದಾಹರಣೆಗಳು ಪ್ರತೀ ನಿತ್ಯ ಸಂಭವಿಸುತ್ತದೆ. ಇದಕ್ಕೆ ಸಾವಿರಾರು ವರ್ಷಗಳಿಂದ ಬೆಳೆದು ಬಂದ ನಡವಳಿಕೆ ಮತ್ತು ಪಿತ್ರ ಪ್ರಧಾನ ವ್ಯವಸ್ಥೆಗೆ ಒಗ್ಗಿ ಹೋಗಿ ಅನಿವಾರ್ಯ ವಾಗಿ ಒಪ್ಪಿಕೊಂಡು ಬಂದ ಮಹಿಳೆಯರ ಮನಸ್ಥಿತಿ. ಕುಟುಂಬದಲ್ಲಿ, ಸಮೂದಾಯದಲ್ಲಿ, ಕೆಲಸ ಮಾಡುವ ಸ್ಥಳದಲ್ಲಿ ಅದರಲ್ಲಿಯೂ ಶೋತ ಸಮಾಜದ ಹೆಣ್ಣು ಜೀವಗಳಿಗೆ ಎಷ್ಟು ಮಹಿಳೆಯರು ಸಹಕಾರ, ಅವಕಾಶ ಹಾಗೂ ಪ್ರೋತ್ಸಾಹ ಕೊಟ್ಟಿದ್ದಾರೆ ಎಂಬುವುದನ್ನು ಆತ್ಮಾವಲೋಕನ ಮಾಡಿ ಎಲ್ಲಾ ಮಹಿಳೆಯರ ಸಬಲೀಕರಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಅತ್ತೆಯು ಸೊಸೆಗೆ ಗೌರವ ನೀಡದೆ ತನ್ನ ಮಗಳಿಗೆ ಇತರರ ಮನೆಯಲ್ಲಿ ಸಮೃಧ್ಧಿ ನೀರಿಕ್ಷಿಸುವುದು ಮೂರ್ಖತನವಾದಿತು.

ಇಂದು ಕೆಲವು ಹೆಣ್ಣು ಮಕ್ಕಳು ಧರಿಸುವ ಉಡುಗೆ ತೊಡುಗೆ ಬಗ್ಗೆ ಪ್ರಾಮಾಣಿಕವಾಗಿ ಹೇಳಿದರೆ ಅದುನಿಕ ಮಹಿಳೆಯರಿಗೆ ಸಹ್ಯವಾಗ ಕ್ಕಿಲ್ಲ, ಅವರ ವಾದದ ಪ್ರಕಾರ ಅಶ್ಲಿಲತೆ ಇರುವುದು ನೋಡುಗರ ಕಣ್ಣಲ್ಲಿ ಅಲ್ಲ ಮನಸ್ಸಲ್ಲಿ, ಹೌದು ಅದರೆ ಯಾವುದಕ್ಕೂ ಒಂದು ಮೀತಿ ಇದ್ದು ಅತಿಯಾದರೆ ಹಾಲೂ ವಿಷವಾದಂತೆ. ಅಂದರೆ ಕನಿಷ್ಠ ಬಟ್ಟೆಂದ ವಿಕ್ರತ ಕಾಮಕ್ಕೆ ಪ್ರಚೋದನೆ ನೀಡುತ್ತಿದೆ ಎನ್ನವುದು ಎಲ್ಲಾ ಸಮಯಗಳಲ್ಲಿ ನಂಬಾಲಾಗದಿದ್ದಾರೂ ಜೊತೆಗೆ ಇಂದಿನ ಮಾಧ್ಯಮಗಳ ಅಶ್ಲೀಲ ದೃಶ್ಯ ಸಾಹಿತ್ಯಗಳಿಂದ ಸ್ವಲ್ಪ ಪ್ರಮಾಣದಲ್ಲಿ ಲೈಂಗಿಕ ದೌರ್ಜನ್ಯಗಳಿಗೆ ಪ್ರೇರಣೆಯಾಗಿರುಹುದು ಮಾತ್ರ ಸತ್ಯ. ಹಾಗೆಯೇ ಅದುನಿಕ ಮಹಿಳೆ ಅಥವಾ ಬದಲಾದ ಹೆಣ್ಣು ಅಂದರೆ ಪ್ಯಾಂಟ್ ಅಂಗಿ, ಕನಿಷ್ಠ ಉಡುಗೆ ತೊಡುವುದು, ಹೊಮ್ ಸ್ಟೇ, ರೆಸೊರ್ಟ್, ಪಬ್, ಕ್ಲಬ್‌ಗಳಲ್ಲಿ ಗೆಳೆಯರ ಜೊತೆ ಹರಟೆ ಹೊಡೆಯುವವರಲ್ಲ ಅದಕ್ಕೂ ಮಿಗಿಲಾಗಿ ಪಿತೃ ಪ್ರದಾನ ವ್ಯವಸ್ಥೆಯಲ್ಲಿ ಪುರಷ ಸಮಾನವಾಗಿ ಅವಕಾಶ, ಸ್ವಾತಂತ್ರ್ಯ, ಸಮಾನತೆಯ ಜೊತೆ ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಶಕ್ತತೆ ಹೊಂದಿದ ಪ್ರಜ್ಞಾವಂತ ಹೆಣ್ಣು.

ಇನ್ನೊಂದು ಗಂಭೀರ ವಿಷಯ, ಹೆಣ್ಣು ಮಕ್ಕಳು ಹೊತ್ತಲ್ಲದ ಹೊತ್ತಲ್ಲಿ ಓಡಾಟ ಮಾಡುವುದು ಕಡಿಮೆ ಮಾಡಬೇಕೆಂಬುವುದನ್ನು ಅಲ್ಲಿ ಇಲ್ಲಿ ಕೇಳಿಬರುತ್ತ ಇದೆ. ಇದು ಒಪ್ಪಬೇಕಾದ್ದೇ ಯಾಕೆಂದ್ರೆ ತಲೆ ಗಟ್ಟಿಯಾಗಿದೆ ಎಂದು ಬಂಡೆಗೆ ಚಚ್ಚಿದಂಗೆ ಸ್ವಾತಂತ್ರ್ಯ ಇದೆ ಎಂದು ಹುಂಬ ಧೈರ್ಯ ಮಾಡಿ ಅಜ್ಞಾತ ಸ್ಥಳಗಳಲ್ಲಿ ಮತ್ತು ತಡ ರಾತ್ರಿಯಲ್ಲಿ ಒಡಾಡಿ ಅಪಾಯಕ್ಕೆ ಆಹ್ವಾನ ನೀಡುವ ಮುಂಚೆ ಯೋಚಿಸುವುದೊಳಿತು. ಯಾಕೆಂದ್ರೆ ಇಂದು ಹೆಣ್ಣು ಮಕ್ಕಳ ಮೇಲೆ ಅವ್ಯಹತವಾಗಿ ನಡೆಯುವ ಅತ್ಯಾಚಾರ ನೋಡಿದರೆ ಗಾಂಧಿ ಕನಸಿನ ಸ್ವಾತಂತ್ರ್ಯ ಭಾರತ ರಾಮರಾಜ್ಯ ಆಗುವುದಕ್ಕಿಂತ ರಾವಣರಾಜ್ಯ ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕೊನೆಗೊಳಿಸುವ ಮುನ್ನ ಎಲ್ಲಾ ಮಹಿಳೆಯರು ತಮ್ಮ ಕೀಳರಿಮೆ, ಸೋಮರಿತನವನ್ನು ಬಿಟ್ಟು ಸ್ವತಂತ್ರವಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವ ಆತ್ಮ ವಿಸ್ವಾಸವನ್ನು ಬೆಳೆಸಿಕೊಳ್ಳಬೇಕು. ಹಾಗೆಯೇ ಉಳ್ಳವರು ಉಳ್ಳವರಿಗಾಗಿ ಮಾತ್ರ ದುಡಿಯದೆ ನೊಂದ ಅಮಾಯಕ ಹಾಗೂ ಶೋತ ಸಮಾಜದ ಕಟ್ಟ ಕಡೆಯ ಹೆಣ್ಣು ಮಕ್ಕಳ ಹಕ್ಕುಗಳ ರಕ್ಷಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂಬ ದಿಟ್ಟ ನಿರ್ದಾರವನ್ನು ತೆಗೆದುಕೊಳ್ಳಬೇಕು. ಸಮಾಜದಲ್ಲಿ ಮಹಿಳೆಯರಿಗೆ ನಿಸರ್ಗದತ್ತವಾಗಿ ನೀಡಿರುವ ಗುಣ ಲಕ್ಷಣಗಳ ಜೊತೆಗೆ ಹೆಣ್ಣು ಮಕ್ಕಳಲ್ಲಿ ಸಧೃಡ ಮನೋಬಲ ರೂಪಿಸುವಲ್ಲಿ ಪ್ರಾರಂಭದಿಂದಲೇ ಪೂರಕ ಶಿಕ್ಷಣ, ಮಾರ್ಗದರ್ಶನ, ಪ್ರೋತ್ಸಾಹ ಹಾಗೂ ಭರವಸೆ ತುಂಬಬೇಕು. ಹಾಗೆಯೇ ಎಲ್ಲಾ ಹೆಣ್ಣು ಮಕ್ಕಳಿಗೆ ಆತ್ಮರಕ್ಷಣೆ ಮಾಡುವಂತಹ ಧೈಹಿಕ ಮತ್ತು ಮಾನಸಿಕ ಸಧೃಡ ಕೌಶಲ್ಯಗಳನ್ನು ಕಲಿಸಿ ರೂಡಿಸಿಕೊಳ್ಳಬೇಕಾಗಿದೆ. ಹಾಗೆಯೇ ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ಯಾವುದೇ ಕಾರಣದಿಂದ ಅಬಲೆ, ನಿಶ್ಯಕ್ತಳು, ನಾಚಿಕೆ ಸ್ವಬಾವ ಮುಂತಾದ ನಕಾರಾತ್ಮಕ ಅಂಶಗಳನ್ನು ಬಿತ್ತದೆ ಗಂಡು ಹೆಣ್ಣು ಎಂಬ ಬೇದವಿಲ್ಲದೆ ಸಮಾನ ಮಾನಸಿಕ ಮತ್ತು ಭೌಧ್ಧಿಕ ಬೆಳವಣಿಗೆಗೆ ಒತ್ತುನೀಡಬೇಕು.

ಹಾಗೆಯೇ ನಮ್ಮಲ್ಲಿ ಪಿತೃಪ್ರದಾನ ವ್ಯವಸ್ಥೆಯ ಮಹಿಳಾ ವಿರೋಧಿ ಕೆಡುಕುಗಳನ್ನು ಅಳಿಸಿ ನಮ್ಮನ್ನು ಜಗತ್ತಿಗೆ ಕರುಣಿಸಿದ ಮುಂದೆ ಜನ್ಮ ನೀಡುವ ಜೀವಗಳ ಮಾನ ಪ್ರಾಣ ರಕ್ಷಣೆಮಾಡಿ, ಗೌರವಿಸಿ ಸಮೂದಾಯದಲ್ಲಿ ಅವರಿಗೆ ಸಮಾನ ಅವಕಾಶ ಮತ್ತು ಸ್ವಾತಂತ್ರ್ಯವನ್ನು ಪಡೆಯಲು ಬೆಂಬಲಿಸುತ್ತೇವೆ ಎಂಬ ಬದ್ದತೆಯನ್ನು ಸಾರಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ದೇಶಗಳನ್ನು ಸಾಕರ ಗೊಳಿಸೋಣ. ವಿವಿದ ಕ್ಷೇತ್ರಗಳಲ್ಲಿ ಹೆಸರು ಗಳಿಸಿದ ಮಹನೀಯರ ಉನ್ನತಿಗೆ ಯಾವ ರೀತಿ ಒಬ್ಬರಿಗೊಬ್ಬರು ಸಾಕ್ಷಿಯಾಗಿದ್ದರೋ ಅದೇ ರೀತಿ ಸಮಾಜದ ಸರ್ವೋತೋಮುಕ ಏಳಿಗೆಗೆ ಇಬ್ಬರ ಕೊಡುಗೆಯೂ ಅನಿವಾರ್ಯ ಎಂಬುವುದನ್ನು ಅರಿತು ಪುರಷ ಮಹಿಳೆ ಎನ್ನದೆ ಜೊತೆ ಸೇರಿ ಸಮೃದ್ಧ ಸಮಾಜದ ಒಳಿತಿಗಾಗಿ ದುಡಿಯೋಣ.

ಹೆಣ್ಣೆ ಮನೆಯ ದೀಪ ಎಲ್ಲರ ಮನೆಯಲೂ
ಮನದಲ್ಲೂ
ಅವಳ ಬಯಕೆಗಳ ಬಲಿಕೊಡಬೇಡಿ ನಗುತ್ತಾ
ಬಾಳಲು
ಅವಕಾಶ ನೀಡಿ ಆಕೆಗೆ ಜೀವನ ಪರ್ಯಂತ



ನೀನು ಬಲಶಾಲಿಯಾಗಿರಲು ಬಯಸಿದಲ್ಲಿ ನಿನ್ನ ಬಲಹೀನತೆ ತಿಳಿದುಕೋ.

# ಪಾಸ್ಖ ಕಾಲದಲ್ಲಿ ನನ್ನ ವಿಶ್ವಾಸ

ಪಾಸ್ಖ ಹಬ್ಬ : ಪಾಸ್ಖ ಹಬ್ಬ ಎಂದರೇನು ? ಅದರ ಮಹತ್ವವೇನು ? ನಮ್ಮ ಕೆಲ ಹಿರಿಯರಲ್ಲಿ ಈ ಪ್ರಶ್ನೆಯನ್ನು ಕೇಳಿದರೆ ಅವರಿಂದ ಅನೇಕ ರೀತಿಯ ಉತ್ತರಗಳು ಬರುತ್ತವೆ. ಅವರಿಂದ ಬರುವ ಮುಖ್ಯ ಉತ್ತರ ಇದು ಹಿಂದಿನ ಕಾಲದಲ್ಲಿ ಇಸ್ರಯೇಲ್ ನಾಡಿನ ಜನರು ಸಬ್ಬತ್ ದಿನವನ್ನು ಆಚರಿಸುತ್ತಿದ್ದರು, ಅದೇ ರೀತಿಯಲ್ಲಿ ನಾವು ಈಗ ಪಾಸ್ಖ ಹಬ್ಬವನ್ನು ಆಚರಿಸುತ್ತಿದ್ದೇವೆ. ಅವರ ಪಾಲಿಗೆ ಇದು ಸರಿ ಎನಿಸಬಹುದು.

ಆದರೆ ಸಬ್ಬತ್ ದಿನಕ್ಕೂ ಪಾಸ್ಖ ಹಬ್ಬಕ್ಕೂ ಒಂದು ರೀತಿಯ ವ್ಯತ್ಯಾಸವಿದೆ. ಸಬ್ಬತ್ ದಿನವನ್ನು ಆಗಿನ ಜನರು ದೇವರು ತಮಗೆ ವಿಶ್ರಾಂತಿಗೆಂದು ನೀಡಿರುವ ದಿನ ಎಂದುಕೊಂಡಿದ್ದರು. ಆದರೆ ಈಗಿನ ನಾವು ಕ್ರೈಸ್ತರು ಪಾಸ್ಖಹಬ್ಬವನ್ನು ಪ್ರಭುಯೇಸುವಿನ ಪುನರುತ್ಥಾನದ ಸ್ಮರಣಾರ್ಥವಾಗಿ ಆಚರಿಸುತ್ತೇವೆ. ಇದು ಒಂದು ಕ್ರೈಸ್ತರ ಶ್ರೇಷ್ಠ ಹಬ್ಬವೂ ಹೌದು. ಅಂದ ಹಾಗೆ ಹಬ್ಬಗಳ ಆಚರಣೆಯೇನೊ ಜೋರಾಗಿ ನಡೆಸುತ್ತೇವೆ. ಆದರೆ ಆ ಹಬ್ಬದ ಮಹತ್ವದ ಮೇಲೆ ನಮ್ಮ ವಿಶ್ವಾಸವೆಷ್ಟು ? ಅಂದರೆ ಪ್ರಭುವಿನ ಪುನರುತ್ಥಾನದಲ್ಲಿ ನಾವು ಎಷ್ಟು ವಿಶ್ವಾಸಿಸುತ್ತೇವೆ. ಪ್ರಸ್ತುತ ವರ್ಷವನ್ನು ತಾಯಿ ಧರ್ಮಸಭೆ ವಿಶ್ವಾಸದ ವರ್ಷವನ್ನಾಗಿ ಆಚರಿಸುತ್ತಿದೆ. ಹಲವು ಧರ್ಮಕೇಂದ್ರಗಳಲ್ಲಿ ಮುಖ್ಯವಾಗಿ ಭಾನುವಾರದಂದು ನಮ್ಮ ವಿಶ್ವಾಸದ ವೃದ್ಧಿಗೋಸ್ಕರ ಅನೇಕ ರೀತಿಯ ಪ್ರಾರ್ಥನೆಗಳನ್ನು ಮಾಡುತ್ತಾರೆ. ಅದರ ಫಲವಾದರು ಏನು ? ನಮ್ಮ ಜೀವನದಲ್ಲಿ ಎಷ್ಟು ಪ್ರಮಾಣ ನಾವು ನಮ್ಮ ವಿಶ್ವಾಸವನ್ನು ವೃದ್ಧಿಸಲು ಪ್ರಯತ್ನ ಮಾಡುತ್ತೇವೆ?

ಪ್ರತಿದಿನ ಬೆಳಿಗ್ಗೆ ಬಲಿಪೂಜೆಗೆ ಬಂದರೆ ಗುರುಗಳು ಹೇಳಿದ್ದಾರೆ ಎಂಬ ಮಾತ್ರಕ್ಕೆ ವಿಶ್ವಾಸದ ವಿಧಾನವನ್ನು ಪಠಿಸುತ್ತೇವೆಯೆ ಹೊರತು ವಿಶ್ವಾಸದಿಂದಲ್ಲ, ಭಕ್ತಿಯಿಂದಲ್ಲ. ಅದನ್ನು ಪಠಿಸುವುದು ಕೂಡ ಅರ್ಧ ನಿದ್ರೆಯಲ್ಲಿಯೇ ಶುಭಸಂದೇಶದಲ್ಲಿ ಹಲವೆಡೆ ನಾವು ಕಾಣುವ ಸೂಚಕಕಾರ್ಯಗಳಲ್ಲಿ ವಿಶ್ವಾಸ, ನಂಬಿಕೆ ಎಂಬ ಪದಗಳು ಬರದೇ ಹೋಗಿಲ್ಲ. ಉದಾಹರಣೆಗೆ ಶತಾಧಿಪತಿಯ ಪ್ರಾರ್ಥನೆಯಲ್ಲಿ, ರಕ್ತಸ್ರಾವದಿಂದ ಬಳಲುತ್ತಿದ್ದ ಸ್ತ್ರೀಯ ವಿನಂತಿಯಲ್ಲಿ ಕುಷ್ಠರೋಗಿಗಳ ವಿಶ್ವಾಸ, ಮುಂತಾದ ಕಡೆ ನಾವು ಕಾಣಬಹುದು. ಈ ವಿಷಯಗಳಿಗೂ ಪಾಸ್ಖಕಾಲಕ್ಕೂ ನಾವು ಸಂಭಂದ ಕಲ್ಪಿಸಬಹುದು. ಪಾಸ್ಖಹಬ್ಬಕ್ಕೂ ಮುನ್ನ ನಲವತ್ತು ದಿನಗಳ ಕಾಲ ನಾವು ಪ್ರಭು ಯೇಸುವಿನ ಪೂಜ್ಯ ಪಾಡುಗಳನ್ನು ಧ್ಯಾನಿಸುತ್ತೇವೆ. ಈ ಕಾಲವನ್ನೇ ನಾವು ತಪಸ್ಸು ಕಾಲವೆಂದು ಕರೆಯುವುದು. ಈ ಕಾಲ ಶುರುವಾಗುವುದು ವಿಭೂತಿ ಬುಧವಾರದಂದು. ನಮ್ಮ ಹಿರಿಯರ ಅಂದರೆ ಅಜ್ಜ ಅಜ್ಜಿಯಂದಿರ ಕಾಲದ ಹಿರಿಯರು ನಲವತ್ತು ದಿನಗಳಲ್ಲಿ ದಿನಕ್ಕೆ ಒಮ್ಮೆಯಾದರೂ ಉಪವಾಸ ಕೈಗೊಳ್ಳುತ್ತಿದ್ದರು. ಆದರೆ ಈಗಿನ ವಿಜ್ಞಾನ ಯುಗದಲ್ಲಿ ನಮಗೆ ಆಹಾರವಿಲ್ಲದೇ ಒಂದು ಹೊತ್ತು ಕಳೆಯಲು ಸಾಧ್ಯವಾಗುವುದಿಲ್ಲ. ಈಗಿನವರಲ್ಲಿ ಹೆಚ್ಚಿನವರು ಕಾಯುವುದೇ ಯಾವಾಗ ತಪಸ್ಸು ಕಾಲ ಮುಗಿಯುವುದೆಂದು. ಇಂತಹ ಶ್ರೇಷ್ಠ ಹಬ್ಬಗಳನ್ನು ಆಚರಿಸಲು ಮುಂದಾಗುವುದು ಕೂಡ ನಮ್ಮ ಅಲ್ಪ ಸ್ವಲ್ಪ ವಿಶ್ವಾಸದಿಂದ.

ಒಬ್ಬ ವ್ಯಕ್ತಿಯಲ್ಲಿ ಒಳ್ಳೆಯ ಗುಣಗಳಿದ್ದರೆ ಅವನಲ್ಲಿ ಒಂದೆರೆಡಾದರೂ ಕೆಟ್ಟ ಗುಣಗಳು ಇರುತ್ತವೆ. ಹಾಗೆಯೇ ಈ ಜಗತ್ತಿನಲ್ಲಿ ಎಲ್ಲರೂ ವಿಶ್ವಾಸಿಗಳು ಅಥವಾ ಎಲ್ಲರೂ ಅವಿಶ್ವಾಸಿಗಳು ಎನ್ನಲು ಸಾಧ್ಯವಿಲ್ಲ. ಅವರವರ ಸಂದರ್ಭಕ್ಕೆ ತಕ್ಕಂತೆ ಅವರವರ ವಿಶ್ವಾಸ ಹೆಚ್ಚುತ್ತದೆ. ಕುಗ್ಗುತ್ತದೆ. ಮಗುವಿನ ದೀಕ್ಷಾಸ್ನಾನದ ಸಮಯದಲ್ಲಿ ಅಥವಾ ಪಾಸ್ಖ ಜಾಗರಣೆಯ ರಾತ್ರಿ ನಾವು ಮಾಡುವ ವಾಗ್ದಾನಗಳೇನೊ ನಿಜ. ಆದರೆ ಆ ವಾಗ್ದಾನಗಳನ್ನು ಪಾಲಿಸುತ್ತೇವೆಯೇ ? ನಮ್ಮನ್ನೇ ನಾವು ಪರೀಕ್ಷಿಸಬೇಕು. ಪವಿತ್ರ ಗ್ರಂಥದಲ್ಲಿಯೂ ಕೂಡ ಯೇಸು ಪೇತ್ರನನ್ನು ಕೇಳಿದಾಗ ಆತ ಮೂರು ಬಾರಿ ತನ್ನ ವಿಶ್ವಾಸವನ್ನು ಬಹಿರಂಗಪಡಿಸಿದ. ಅದೇ ಯೇಸು ಶಿಲುಬೆಯನ್ನು ಹೊರಲು ಸಿದ್ಧರಾದಾಗ ಅಷ್ಟೇ ಮೂರು ಬಾರಿ ಯೇಸುವನ್ನು ನಿರಾಕರಿಸಿದನು ಪೇತ್ರ. ನಮಗೂ ಪೇತ್ರನಿಗೂ ಹೆಚ್ಚು ಯಾವುದೇ ವ್ಯತ್ಯಾಸವಿಲ್ಲ. ಪೇತ್ರ ಅಂದು ನಾವು ಇಂದು. ವಿಶ್ವಾಸವೇನು ಒಂದೇ ಬಾರಿಗೆ ಮೈ ಮೇಲೆ ಹತ್ತುವುದಿಲ್ಲ. ಹೇಗೆ ಒಂದು ಸಣ್ಣ ಬೀಜ ಮೊಳೆತು ಗಿಡವಾಗಿ, ಮರವಾಗಿ ಫಲನ್ನು ನೀಡುತ್ತದೆಯೋ ಹಾಗೆಯೇ ನಮ್ಮ ವಿಶ್ವಾಸವನ್ನು ಗಿಡದ ಹಾಗೇ ಬೆಳೆಯುವಂತೆ ಮಾಡಬೇಕು. ಅದು ಬೆಳೆಯುವುದು ಕೂಡ ನಾವು ನಮ್ಮ ವಿಶ್ವಾಸವನ್ನು ಗಟ್ಟಿಮಾಡಿ ಕೊಂಡರೆ ಮಾತ್ರ ವಿಶ್ವಾಸ ಎಂಬ ಪದ ಬಂದಾಗ ನನಗೊಂದು ಕಥೆ ನೆನಪಿಗೆ ಬರುತ್ತದೆ. ಒಮ್ಮೆ ಒಂದು ಊರಿನಲ್ಲಿ ದೊಡ್ಡ ಬರಗಾಲವೊಂದು ತಲೆದೋರಿತ್ತು. ಕುಡಿಯಲು ನೀರಿಲ್ಲದೇ, ತಿನ್ನಲು ಆಹಾರವಿಲ್ಲದೇ ಜನರು ಹಸಿವೆಯಿಂದ ಬಳಲಿ ಸಾಯುತ್ತಿದ್ದರು. ಹೀಗೆ ದಿನಗಳು ಉರುಳುತ್ತಿದ್ದಂತೆ ಸಾವಿನ ಸಂಖ್ಯೆ ಹೆಚ್ಚತೊಡಗಿತು. ಆ ಊರಿನ ಜನರೆಲ್ಲರೂ ದೇವಸ್ಥಾನ, ಮಸದೀ, ಚರ್ಚು, ಮುಂತಾದ ಸ್ಥಳಗಳಿಗೆ ಹೋಗಿ ಮಳೆ ಬರಲೆಂದು ಪ್ರಾರ್ಥಿಸಲಾರಂಭಿಸಿದರು. ಒಂದು ದಿನ ಒಬ್ಬ ಹುಡುಗ ಹೀಗೆಯೇ ದೇವಾಲಯಕ್ಕೆ ಬರುವಾಗ ಭಕ್ತಿಯೊಂದಿಗೆ ಬಂದು ಜನರೆಲ್ಲ ಅಚ್ಚರಿಗೊಂಡು ಕೇಳಿದಾಗ ಆತನ ಉತ್ತರ ಇದಾಗಿತ್ತು ''ಇಂದು ಮಳೆ ಬರಲಿದೆ''', ವಿಶ್ವಾಸವೆಂದರೇ ಇದು. ಆ ಪುಟ್ಟ ಬಾಲಕನಲ್ಲಿದ್ದ ವಿಶ್ವಾಸ ನಮ್ಮಲ್ಲಿ ಎಳ್ಳಷ್ಟು ಇದ್ದರು ಸಾಕು ನಮ್ಮ ಕಾರ್ಯಗಳು ಕೈಗೊಡುತ್ತವೆ. ನಮ್ಮ ವಿಶ್ವಾಸ ದೇವರ ಪ್ರೀತಿಯ ಮೇಲಿರಬೇಕೇ ಹೊರತು ಅವರನ್ನು ಪರೀಕ್ಷಿಸಲು ಅಲ್ಲ.

ಪ್ರಿಯ ಓದುಗರೇ ಯೇಸುವಿನ ಮರಣವನ್ನು ನೆನೆಸಿ, ಪುನರುತ್ಥಾನವನ್ನು ಸ್ಮರಿಸಿ ಹಬ್ಬವನ್ನು ಆಚರಿಸುವಾಗ ನಾವು ನಿಜ ಕ್ರೈಸ್ತಭಕ್ತರಾಗಿ ವಿಶ್ವಾಸಿಸೋಣ, ವಿಶ್ವಾಸದಲ್ಲಿ ನೆಲೆಯೂರಿ ನಿಲ್ಲೋಣ. ಧರ್ಮಸಭೆಯ ಧ್ಯೇಯ ನಮ್ಮ ಸ್ವಂತ ಧ್ಯೇಯವನ್ನಾಗಿಸೋಣ.

''ವಿಶ್ವಾಸಿಸುತ್ತೇನೆ ಸ್ವಾಮಿ, ನನ್ನ ವಿಶ್ವಾಸವನ್ನು ವೃದ್ಧಿಸಿ''.

❖

ಸಹೋ. ರೊಯ್ಸ್ಟರ್ ಮೋನಿಸ್
'ಲೊಯೋಲಾ', ಮಂಗಳೂರು.

ನೀವು ನೆಟ್ಟಗೆ ನಿಂತಿರುವವರೆಗೆ ನಿಮ್ಮ ನೆರಳು ವಕ್ರವಾಗಿಯೇ ಇರುತ್ತದೆ. ಅದರ ಬಗ್ಗೆ ಚಿಂತಿಸಬೇಡಿ.

# ನೆನಪಿನ ಬುತ್ತಿಯಿಂದ -2

ಈ ಭಾವಜೀವಿಯ ನೆನಪಲ್ಲಿ ನೆನಪಾಗಿ ನೆನಪುಗಳ ನೆನಪಿಸುವ ಸಹೃದಯ ಓದುಗರೇ,

ನನ್ನ ಬದುಕಿನಲ್ಲಿ ವಿಶೇಷವಾದ ಹಾಗು ವಿಚಿತ್ರವಾದ ಹಲವು ಅನುಭವಗಳನ್ನು ನೀಡಿದ ವರ್ಷ, 2006. ಅದೇ ವರ್ಷದ ಜೂನ್ ತಿಂಗಳಲ್ಲಿ ಪೋಸ್ಟ್ ನೋವಿಷಿಯೇಟ್ ತರಬೇತಿಗಾಗಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿಗೆ ಸೇರಿದ ಪೋತ್ನಾಳ್ ಎಂಬ ಗ್ರಾಮಕ್ಕೆ ನಾನು ಮತ್ತು ನನ್ನ ಸಹಪಾಠಿಗಳು ಬಂದಿಳಿದೆವು. ಅದು ನಮ್ಮೆಲ್ಲರಿಗೆ ಸೆಮಿನರಿ ತರಬೇತಿಯ ಐದನೇ ವರ್ಷವಾಗಿತ್ತು. ಮೊದಲ ನಾಲ್ಕು ವರ್ಷಗಳಲ್ಲಿ ಜನರೊಂದಿಗೆ ಬೆರೆಯಲು ಅಷ್ಟೇನು ಅವಕಾಶವಿಲ್ಲದ್ದರಿಂದ ಈ ವರ್ಷದಲ್ಲಿ ಪೋತ್ನಾಳ್ ಗ್ರಾಮದ ಹಾಗು ಅಕ್ಕಪಕ್ಕದ ಹಳ್ಳಿಗಳ ಜನರ ಪರಿಸ್ಥಿತಿಗಳೊಂದಿಗೆ ಬೆರೆತು, ಅವರ ಸಮಸ್ಯೆಗಳನ್ನು ಕಣ್ಣಾರೆ ಕಂಡು, ಅಂಥಹ ಹಿಂದುಳಿದ, ಶೋಷಿತ ಜನರ ಏಳಿಗೆಗಾಗಿ ಶ್ರಮಿಸುವ ಉತ್ಸಾಹವನ್ನು ನಮ್ಮಲ್ಲಿ ಮೂಡಿಸಲು ಈ ಅವಕಾಶವನ್ನು ಕಲ್ಪಿಸಿಕೊಂಡಲಾಗಿತ್ತು. ಅದೇ ಈ ಪೋಸ್ಟ್ ನೋವಿಷಿಯೇಟ್ ತರಬೇತಿ ವರ್ಷದ ಉದ್ದೇಶವಾಗಿತ್ತು.

ರಾಯಚೂರು ಜಿಲ್ಲೆಯು, ನಮ್ಮ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲೊಂದಾಗಿದೆ. ಇಲ್ಲಿ ವಾಸ್ತವ್ಯ ಹೂಡಿರುವ ಬಹುತೇಕ ಜನರು ಬಡತನ ಮತ್ತು ಅನಕ್ಷರತೆಯಿಂದಾಗಿ ಕಂಗಾಲಾಗಿ ಹೋಗಿದ್ದಾರೆ. ಹಲವು ಸವಲತ್ತು, ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇಲ್ಲಿನ ಸಮಾಜದ ಅಭ್ಯುದೇಯಕ್ಕಾಗಿ, ಹಲವಾರು ಹೃದಯವಂತ ಸಮಾಜಸೇವಕರು ಅವಿರತ ಶ್ರಮಿಸುತ್ತಿದ್ದರೂ ಜಾತಿಪದ್ಧತಿ, ದೇವದಾಸಿ ಸಿಸ್ಟವ್, ಬಾಲ್ಯವಿವಾಹ ಮುಂತಾದ ಸಾಮಾಜಿಕ ಪಿಡುಗುಗಳನ್ನು ಗೊಡ್ಡು ಸಂಪ್ರದಾಯ ಹಾಗು ಮೂಡನಂಬಿಕೆಗಳನ್ನು ನಿರ್ಮೂಲನೆ ಮಾಡಲಾಗುತ್ತಿಲ್ಲ ಎಂಬುದು ವಿಷಾದದ ಸಂಗತಿ. ಕಾಲಕ್ಕೆ ತಕ್ಕಂತೆ ಮಳೆಯಾಗದೆ ಇದ್ದಾಗ ಉದ್ಯಾನನಗರಿ ಬೆಂಗಳೂರಿಗೆ ಅಥವಾ ಹತ್ತಿರದ ಆಂಧ್ರಪ್ರದೇಶಕ್ಕೆ ವಲಸೆಹೋಗುವುದು ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಇಲ್ಲಿನ ಜನರು ಶಾಂತಿಪ್ರಿಯರು, ಮುಗ್ದರು ಎಂಬುದು ನನ್ನ ಅನುಭವದ ಅನಿಸಿಕೆ. ಬೇರೆ ಪ್ರದೇಶಗಳ ಜನಜೀವನಕ್ಕೆ ಹೋಲಿಸಿದರೆ ತುಂಬಾ ವಿಭಿನ್ನವಾಗಿರೋ ರಾಯಚೂರು ಜಿಲ್ಲೆಯ ಜನಜೀವನ ಅವರ ಲೈಫ್‌ಸ್ಟೈಲ್ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಸವಿವರವಾಗಿ ಬರೆಯುತ್ತೇನೆ ? ಈ ವರ್ಷ ನಮಗೆ ಅಷ್ಟೇನು ಸೀರಿಯಸ್ ಸ್ಟಡೀಸ್ ಇಲ್ಲದ ನಮ್ಮ ಸಿಲಬಸ್‌ಗೆ ಕೆಲವು ಎಕ್ಸ್‌ಪೋಷರ್ ಪ್ರೋಗ್ರಾಮ್‌ಗಳು ಸೇರ್ಪಡೆಯಾಗಿದ್ದವು. ಈ ಎಲ್ಲಾ ಎಕ್ಸ್‌ಪೋಷರ್ ಪ್ರೋಗ್ರಾಮ್‌ಗಳನ್ನು ಸೆಮಿನರಿ ಬೌಂಡರಿಯಿಂದ ಹೊರಗೆ ಆಯೋಜಿಸಿದ್ದರಿಂದ ನಮ್ಮಲ್ಲಿ ಅವುಗಳ ಬಗ್ಗೆ ವಿಶೇಷ ಆಸಕ್ತಿಯಿತ್ತು.

ನನ್ನ ಸ್ಮೃತಿಪಟಗಳಲ್ಲಿ ಅಚ್ಚಳಿಯದೇ ಉಳಿದಿರುವ ಅಂಥಹ ಎಕ್ಸ್‌ಪೋಷರ್ ಪ್ರೋಗ್ರಾಮ್‌ಗಳಲ್ಲೊಂದು ಹೈದರಬಾದ್‌ನಲ್ಲಿ ನಾವು ಪಾಲ್ಗೊಂಡ ಹತ್ತು ದಿನಗಳ ವಿಪಸನ ಮೆಡಿಟೇಶನ್ ಶಿಬಿರ. ಪೂರ್ವ ಸಿದ್ಧತೆಯೊಂದಿಗೆ, ಆಂಧ್ರಪ್ರದೇಶದೆಡೆಗೆ ಪ್ರಯಣ ಬೆಳೆಸಿದ ನಾವು ನವೆಂಬರ್ 16ರ ಮಧ್ಯಾಹ್ನ ಈ ವಿಪಸನ ಮೆಡಿಟೇಶನ್ ಕೇಂದ್ರವನ್ನು ತಲುಪಿದೆವು. 'ಆಸೆಯೇ ದುಃಖಕ್ಕೆ ಮೂಲ' ಎಂದು ಲೋಕಕ್ಕೆ ಸಾರಿದ ಮಹಾನ್ ವ್ಯಕ್ತಿ ಗೌತಮ ಬುದ್ಧನ ಅನುಯಾಯಿಗಳು ಈ ಸಂಸ್ಥೆಯ ರೂವಾರಿಗಳು. ಬುದ್ಧನ ತತ್ವಗಳ ಪ್ರಕಾರ, ಧ್ಯಾನದ ಕಲೆ ಮತ್ತು ಕೌಶಲ್ಯಗಳನ್ನು ಆದಷ್ಟು ಜನರಿಗೆ ತಿಳಿಯಪಡಿಸಿ, ಅವರಿಗೆ "ಸ್ವ-ಪ್ರಯತ್ನದ ಮೂಲಕವೇ ಮುಕ್ತಿ ಪಡೆಯಬಹುದು'' ಎಂಬ ಸಂದೇಶವನ್ನು ಸಾರುವುದೇ ಅವರ ಧ್ಯೇಯವಾಗಿದೆಯೆಂತೆ.

ಧ್ಯಾನಕೇಂದ್ರದ ವಾತಾವರಣ ಪ್ರಶಾಂತವಾಗಿತ್ತು. ಸಿಟಿಯಿಂದ ಹಲವು ಕಿಲೋಮೀಟರ್ ದೂರವಿದ್ದುದರಿಂದ ಪರಿಸರ ಶುದ್ಧವಾಗಿತ್ತು. ಮೆಡಿಟೇಶನ್ ಮಾಡಿ ಬುದ್ಧನಂತಾಗಲು ಬಂದಿದ್ದ ನಮಗೆ ಧ್ಯಾನದೆಡೆಗೆ ಅತೀವ ಒಲವನ್ನು ಮೂಡಿಸುತ್ತಿತ್ತು. ಆದ್ರೆ ನಮಗೆ ಶಾಕ್ ಆಗಿದ್ದು ಗೋಡೆಯ ಮೇಲೆ ನೇತು ಹಾಕಿದ್ದ 'ಟೈಮ್ ಟೇಬಲ್' ನೋಡಿ! ಅಲ್ಲಿ ಬೆಳಿಗ್ಗೆ 4 ಗಂಟೆಗೆ ಎದ್ದೇಳ್ಬೇಕು ಅಂತ ಇತ್ತು. ಸೆಮಿನರಿಯಲ್ಲಿ ಬೆಳಗ್ಗೆ 5.30ಕ್ಕೆ ಏಳಬೇಕಾದ್ದರಿಂದ ಇಲ್ಲಿ ಸ್ವಲ್ಪ ರೆಸ್ಟ್ ತಗೋಬೇಕು ಅನ್ನೋ ನಮ್ಮ ಆಸೆಗೆ ತಣ್ಣೀರೆರೆಚಿದಂತಾಯ್ತು ! ಅಷ್ಟು ಮಾತ್ರ ಅಲ್ಲ ಟೈಮ್ ಟೇಬಲನ್ನು ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಮೂರ್‍ನಾಲ್ಕು ಸಲ ನೋಡಿದ್ರೂ ರಾತ್ರಿಯ ಊಟ ಯಾವಾಗ ಅನ್ನೋದ್ರ ಬಗ್ಗೆ ಸುದ್ದಿನೇ ಇರಲಿಲ್ಲ, ನಮಗಿನ್ನು ಏನೇನ್ ಕಾದಿದ್ಯೋ ಅನ್ಕೊಂಡು ಚಡಪಡಿಸ್ತಿದ್ವಿ. ಯಾಕಂತದ್ರೆ ಅಲ್ಲಿ ಒಂದ್ಸಲ ಒಳಗೆ ಬಂದ್ರೆ, ಹತ್ತು ದಿನಗಳ ಶಿಬಿರ ಮುಗಿಯುವ ತನಕ ಹೊರಗೆ ಹೋಗೋದಕ್ಕೆ ಅವಕಾಶವಿರಲಿಲ್ಲ. ನಮ್ಮನ್ನು ಹೊರತುಪಡಿಸಿ ಅಲ್ಲಿಗೆ ಬಂದಿದ್ದ ಬೇರೆ ಶಿಭಿರಾರ್ಥಿಗಳೆಲ್ಲರು 35 ರಿಂದ 40 ವರ್ಷ ಮೇಲ್ಪಟ್ಟಿದ್ದ ವ್ಯಕ್ತಿಗಳೇ ಆಗಿದ್ದರು. ಬಹುಶಃ ಸಂಸಾರದ ಜಂಜಾಟದಲ್ಲಿ ತಲೆಕೆಟ್ಟು, ಶಾಂತಿ ನೆಮ್ಮದಿಯನ್ನರಸಿ ಎಲ್ಲೆಲ್ಲಿಂದಲೋ ಅಲ್ಲಿಗೆ ಬಂದಿದ್ರು ಅಂತ ಕಾಣ್ಸುತ್ತೆ. ಕೂದಲಿಲ್ಲದ ಅವರ ಬೋಳುತಲೆಗಳನ್ನು ನೋಡಿದ ಮೇಲೆ ನಮಗದು ಅರಿವಿಗೆ ಬಂತು. ಅಲ್ಲಿದ್ದ 20-25 ವರ್ಷದ ಯುವಕರು ನಾವು ಮಾತ್ರ. ಚಂಛಲತೆ ತುಂಬಿ ತುಳುಕಾಡುವ ಆ ವಯಸ್ಸಿನಲ್ಲಿ, ಎಲ್ಲೆಲ್ಲೋ ಓಡುವ ಮನಸ್ಸಿಗೆ ಮೂಗುದಾರ ಹಾಕಿ ಏಕಾಗ್ರತೆಯೆಡೆಗೆ ಎಳೆದು ತರುವಂಥ ದುಸ್ಸಾಹಸಕ್ಕೆ ಕೈ ಹಾಕಿದೆವು. ನಮ್ಮ ವಯಸ್ಸಿನವರೇ ಆದ ಒಂದಿಬ್ಬರು ತರುಣಿಯರೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಆದರೆ ಶಿಬಿರದ 2ನೇ ದಿನವೇ, ನಮ್ಮಂತೆ ಆ ದುಸ್ಸಾಹಸಕ್ಕೆ ಕೈಹಾಕುವ ಗೋಜಿಗೆ ಹೋಗದ ಆ ಲಲನಾಮಣಿಯರು ಎಸ್ಕೇಪ್ ಆಗಿದ್ರು. ಅವರೇ ಅದೃಷ್ಟವಂತರು. ಯಾಕೆ ಅಂತನಾ ? ಮುಂದೆ ಓದಿ ನಿಮ್ಗೇ ಗೊತ್ತಾಗುತ್ತೇ !

ಸಹೋ. ಅನಿಲ್‌ಕುಮಾರ್
ಮರಿಯಾನಗರ

ನಂತರ ಶಿಬಿರಾರ್ಥಿಗಳೆಲ್ಲರನ್ನು ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳನ್ನರಿಯುವ ಸಾಮರ್ಥ್ಯಕ್ಕೆ ಅನುಗುಣವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ನಮ್ಮ ಇಂಗ್ಲೀಷ್ ಗುಂಪಿನಲ್ಲಿಯೇ 70 ಕ್ಕೂ ಹೆಚ್ಚಿನ ಮಂದಿ ಇದ್ದರು. ಸಾರಿ ! ಒಂದು ವಿಷ್ಯ ಹೇಳೋಕೆ ಮರೆತುಬಿಟ್ಟಿದೆ. ಅಲ್ಲಿ ಬೋಳುತಲೆಯ ಗಂಡಸರೊಂದಿಗೆ, ನೆರೆಗೂದಲಿನ ಮಹಿಳೆಯರೂ ಇದ್ದರು. ಆ ಸಂಸ್ಥೆಯಲ್ಲಿದ್ದ ಟೆಂಪರರಿ ಸ್ವಯಂ ಸೇವಕರು ಅಲ್ಲಿನ ದಿನಚರಿ ಮತ್ತು ಶಿಸ್ತಿನ ಬಗ್ಗೆ ಸವಿವರಾವಿಗ ತಿಳಇಹೇಳಿದರು. ಅಲ್ಲಿ ಮೌನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾದ್ದರಿಂದ 10 ದಿನಗಳ ಮೌನವ್ರತವನ್ನು ಆಚರಿಸೋಕೆ ಅಣಿಯಾದೆವು. 'ಮಾತು ಮನೆ ಕೆಡಿಸ್ತು.... ಇನ್ನೇನೋ ಕೆಡಿಸ್ತು' ಅಂತಾ ಹೇಳ್ತಾರಲ್ಲ ಹಾಗೆ,



ನಿಮಗೆ ಸಂಬಂಧಿಸಿದನ್ನು ಮಾತ್ರ ಯೋಚಿಸಿರಿ. ಅನ್ಯರ ವ್ಯವಹಾರದಲ್ಲಿ ನಿಮ್ಮ ಪ್ರವೇಶ ಬೇಡ.

ಮಾತು ಅವಶ್ಯಕವಾಗಿದ್ದರೂ, ಅನಾವಶ್ಯಕವಾಗಿದ್ದರೂ ಅದು ನಿಮ್ಮ ಸಾಧನೆಗೆ ಭಂಗ ತರುವುದೆಂದು ಅಲ್ಲಿನ ಸ್ವಯಂ ಸೇವಕರ ಜೊತೆ ಅಲ್ಲಲ್ಲಿ ನೇತಾಡುತ್ತಿದ್ದ ಫಲಕಗಳು ಬುದ್ದಿ ಹೇಳ್ತಾ ಇದ್ವು!

ಸ್ವಯಂ ಸೇವಕರು ಕೊಟ್ಟ ಇನ್‌ಸ್ಟ್ರಕ್ಷನ್ ಪ್ರಕಾರ ಬೆಳಗ್ಗೆ 4 ಗಂಟೆಗೆ ಎದ್ದು ಶೌಚಕಾರ್ಯಗಳನ್ನು ಮುಗಿಸಿಕೊಂಡು 4.30 ರಿಂದ 7 ಗಂಟೆಯ ತನಕ ಪಗೋಡ ಎಂದು ಕರೆಯಲ್ಪಡುತ್ತಿದ್ದ ತುಂಬಾ ಕಿರಿದಾದ ರೂಮುಗಳಲ್ಲಿ ಒಬ್ಬೊಬ್ಬರೇ ಕುಳಿತು ಧ್ಯಾನ ಮಾಡಬೇಕಿತ್ತು. ಯಾರಿಗೂ ಗೊತ್ತಾಗದಂತೆ ಇನ್ನೂ ಸ್ವಲ್ಪ ಮಲಗೋಣ ಅನಿಸ್ತಾ ಇದು, ಬೆನ್ನಿಗೆ ಬಿದ್ದ ಬೇತಾಳನಂತೆ ಇದ್ದ ಸ್ವಯಂ ಸೇವಕರು ಬಂದು ನಮ್ಮನ್ನು ಎಬ್ಬಿಸಿ, ಗದರಿಸಿ, ಪಗೋಡಗಳ ಕಡೆಗೆ ದಾರಿ ತೋರಿಸ್ತಿದು. ಪಗೋಡದಲ್ಲಿ ಧ್ಯಾನ ಮಾಡೋದು ವೈಯಕ್ತಿಕ ಜವಬ್ದಾರಿಯಾಗಿತ್ತು.

ಆ ಹೊರೆಯನ್ನು ಹೊರಲಾಗದ ಕೆಲವರು ಅಲ್ಲೇ ತೂಕಡಿಸುತ್ತ, ಮಲಗಿಬಿಡ್ತಿದ್ದು, ಅರೆಬರೆ ಧ್ಯಾನ ಮಾಡ್ತಾ ಇದ್ದನಾವೆಲ್ಲ ಎಷ್ಟು ಹೊತ್ತಿಗಪ್ಪ 7 ಗಂಟೆ ಆಗುತ್ತೆ ಅಂಥ ಕಾಯ್ತಿದ್ವಿ. 7 ಗಂಟೆಗೆ ಸರಿಯಾಗಿ ಬೆಳಗಿನ ತಿಂಡಿಗೆ ನಮ್ಮನ್ನು ಆಮಂತ್ರಿಸುತ್ತಿದ್ದ ಬೆಲ್ ಮೊಳಗುತ್ತಿತ್ತು. ನಮಗೆ ಅಲ್ಲಿ ಸಿಗ್ತಾ ಇದ್ದದ್ದು ಪ್ಯೂರ್ ವೆಜಿಟೇರಿಯನ್ ಆಹಾರ ಮಾತ್ರ. ದುರದೃಷ್ಟವಶಾತ್ ನಮ್ಮಂಥ ಪ್ಯೂರ್ ನಾನ್‌ವೆಜಟೇರಿಯನ್ಸ್‌ಗೆ ಯಾವುದೇ ಎಕ್ಸೆಪ್ಷೇನ್ ಇರಲ್ಲಿ. ಎಲ್ಲಾ ನಮ ಕರ್ಮ ಅನ್ಕೊಂಡು ಕೊಟ್ಟಿದ್ದನ್ನೇ ಚೆನ್ನಾಗಿ ತಿನ್ನುತ್ತಾ ಇದ್ವಿ. ಸಸ್ಯಾಹಾರಿ ಊಟ ಆದ್ರೂ ಬಹಳ ರುಚಿಕರ ಹಾಗು ಸ್ವಾದಭರಿತವಾಗಿರ್ತಿತ್ತು. ಹೊಟ್ಟೆ ತುಂಬಾ ತಿಂದ್ರೆ ಧ್ಯಾನ ಮಾಡುವಾಗ ನಿದ್ರೆ ಬರುತ್ತೆ ಅಂಥ ನಾವು ಅದಷ್ಟು ಕಡಿಮೆ ತಿನ್ನುತ್ತಿದ್ದೆವು. ಕೆಲವರಂತೂ ಧ್ಯಾನ ಮಾಡುವಾಗ ನಿದ್ರೆ ಮಾಡ್ಲೇಬೇಕು ಅಂಥ ಪೂರ್ವ ನಿಧಾ: ಮಾಡಿಕೊಂಡವಂತೆ, ದೋಸೆ ಮೇಲೆ ದೋಸೆ, ಇಡ್ಲಿ ಮೇಲೆ ಇಡ್ಲಿ ಹಾಕೊಂಡು ಸಕ್ಕತ್ತಾಗೇ ಬಾರಿಸ್ತಿದ್ರು! ಅರ್ಧಗಂಟೆಯ ವಿರಾಮದ ನಂತರ ಸಾಮೂಹಿಕ ಮೆಡಿಟೇಶನ್‌ಗಾಗಿ ಬಿಗ್‌ಹಾಲ್‌ಗೆ ಹೋಗ್ಬೇಕಿತ್ತು. ಅಲ್ಲಿ ನಮಗೆಲ್ಲರಿಗೆ ವಿಪಸನ ಧ್ಯಾನದ ಕೌಶಲ್ಯಗಳನ್ನು ಕಲಿಸೋದಕ್ಕೆ ಬುದ್ದನಂತೆ ಕುಳಿತುಕೊಂಡಿದ್ದ ಶ್ವೇತವರ್ಣದಾರಿ ಶಿಕ್ಷಕರಿದ್ದರು.

"ನಿಮಗೆ ಕಂಫರ್‌ಟೆಬಲ್ ಅನ್ನಿಸುವಂತಹ ಭಂಗಿಯಲ್ಲಿ ಕುಳಿತುಕೊಳ್ಳಿ, ದೀರ್ಘವಾಗಿ, ಆಳವಾಗಿ ಉಸಿರಾಡುತ್ತ ನಿಮ್ಮ ಏಕಾಗ್ರತೆಯನ್ನು ಮೂಗಿನ ತುದಿಯ ಮೇಲೆ ಕೇಂದ್ರಿಕರಿಸಿ, ನಿಮ್ಮಲ್ಲಿ ಉಂಟಾಗುವ ಸಂವೇದನೆ (ಸೆನ್ಸೇಷನ್) ಗಳನ್ನು ಗಮನಿಸಿ, ಕಾಲುಗಳಲ್ಲಿ ಬೇನೆ ಕಾಣಿಸಿಕೊಂಡರೂ ಭಂಗಿಯನ್ನು ಬದಲಿಸಬೇಡಿ". ಅಲ್ಲಿದ ಶಿಕ್ಷಕರು ದಿನಾ ಹೇಳುತ್ತಿದ್ದ ಪಾಠದ ಸಾರಾಂಶ ಇಷ್ಟೇ. ತದ ನಂತರ ಕಣ್ಮುಚ್ಚಿಕೊಂಡು ಕಳೆದುಹೋಗ್ಬಿಡ್ತಿದ್ದು, ಧ್ಯಾನಲೋಕದಲ್ಲಿ! ಅವರು ಕಣ್ತೆರೆಯುತ್ತಿದ್ದದ್ದು ಒಂದು ಗಂಟೆ ಕಾಲ ಆದ ಮೇಲೇನೆ. ಆಮೇಲೆ ಒಬ್ಬೊಬ್ಬರನ್ನೇ ಕರೆಸಿ ನಮ್ಮ ಪ್ರೋಗ್ರೆಸ್ ಹೇಗಿದೆ ಎಂದು ಆತ್ಮೀಯವಾಗಿಯೇ ಕೇಳುತ್ತಿದ್ದರು. ಸಲಹೆ ಸೂಚನೆಗಳನ್ನು ಕೊಡುತ್ತಾ ಇದ್ದರು. ನಾವೂ ಅವರಂತೆಯೇ ಧ್ಯಾನಮಗ್ನರಾಗಬೇಕೆಂಬ ಆಸೆಯಿಂದ ಸಿಕ್ಕಾಪಟ್ಟೆ ಪ್ರಯತ್ನ ಮಾಡ್ತಿದ್ವಿ, ಆದ್ರೆ ಏನ್ ಮಾಡೋದು ನಮ್‌ಕರ್ಮ ! ಗುಡಾಣದಂತಹ ದೊಡ್ಡ ದೊಡ್ಡ ಹೊಟ್ಕೊಂಡು ಬಂದಿದ್ದ ನಾಲ್ಕೈದು ಜನ ಗಂಡಸರಂತೂ ನಿದ್ರಾದೇವಿಯ ಪರವಶರಾಗಿ 'ಗುರ್' ಅಂಥ ಗೊರಕೆ ಹೊಡಿತಾ ಇದ್ರು. ಇನ್ನೂ ಕೆಲವರು ಅದ್ಯಾವ ದೇವಿಯ ವಶವಾಗ್ತಾ ಇದ್ರೋ! ಅಬ್ಬಾ, ಅವರ ಗುಡಾಣದಂತಹ ಹೊಟ್ಟೆಗಳೊಳಗಿದ್ದ ಗ್ಯಾಸ್‌ನೆಲ್ಲಾ, ಸ್ವಲ್ಪನೂ ಸಂಕೋಚವಿಲ್ಲದೆ ವಿಚಿತ್ರ ಸೌಂಡ್‌ಗಳೊಂದಿಗೆ ಹೊರಹಾಕಿ ಗಬ್ಬೆಬ್ಬಿಸಿಬಿಡ್ತಿದ್ರು. ಸಾಕಲ್ಲಾ ಇಷ್ಟು ನಮ್ಮನ್ನ ಡಿಸ್ಟರ್ಬ್ ಮಾಡಿ, ಧ್ಯಾನಕ್ಕೆ ಭಂಗ ತರೋದಕ್ಕೆ! ಕೆಲವೊಮ್ಮೆ ಅಮ್ಮಂತೆ ನಕ್ಕು ಸುಮ್ಮನಾಗ್ತಿದ್ವಿ. ಇನ್ನೂ ಕೆಲವೊಮ್ಮೆ ಮೂಗು, ಬಾಯಿ ಮುಚ್ಕೊಂಡು ವಾಯು ಮಾಲಿನ್ಯ ಮಾಡೋರ ಹೊಟ್ಟೆಗೆ... ಅಗ್ನಿ ಅಂಥ ಶಾಪ ಹಾಕ್ತಾ ಹೇಗೋ ಟೈಮ್ ಪಾಸ್ ಮಾಡ್ತಿದ್ವಿ!.

ನಾ ಮೊದಲೇ ಹೇಳಿದಂತೆ ಶಿಬಿರಾರ್ಥಿಗಳಿಗೆ ಅಲ್ಲಿ ರಾತ್ರಿಯ ಊಟವನ್ನು ಕೊಡ್ತಾ ಇರಲಿಲ್ಲ. ಯಾಕೆ ಅಂತ ಕೇಳ್ತಿದ್ದೀರಾ ? ಅಲ್ಲ ಕಣ್ರೀ, ಮೂರು ಹೊತ್ತು ಗಡತ್ತಾಗಿ ತಿಂದ್ರೆ ನಮ್ ದೇಹ ನಮ್ಮ ಮಾತನ್ನು ಕೇಳುತ್ತಾ ? ದಿನಪೂರ್ತಿ ಧ್ಯಾನಮ ಗಿಡೋಕೆ ಆಗುತ್ತಾ ? ಅದಕ್ಕೇನೇ ಕೊಡ್ತಾ ಇರಲಿಲ್ಲ. ನಾವಂತೂ, ಸಂಜೆ ಕೊಡ್ತಾ ಇದ್ದಂತಹ ಪಾಪ್‌ಕಾರ್ನ್, ಅವಲಕ್ಕಿ ಮತ್ತು ಹಾಲನ್ನೇ ಮೂರ್ನಾಲ್ಕು ಸಲ ತಗೊಂಡು ರಾತ್ರಿಯ ಊಟವನ್ನು ಗಿಟ್ಟಿಸಿಕೊಳ್ತಿದ್ವಿ. ಸಂಜೆ 7 ರಿಂದ 8 ಗಂಟೆ ತನಕ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಗೆ, ವ್ಯಕ್ತಿತ್ವ ವಿಕಸನದ ಬಗ್ಗೆ ವೀಡಿಯೋ ಪ್ರವಚವಿತ್ತು. 8 ಗಂಟೆ ಆದಮೇಲೆ ಮಾಡೋಕ್ಕೇನು ಇರ್ತಾ ಇರಲಿಲ್ಲ. ಸುಮ್ನೆ ಮಲ್ಕೋಬೇಕಿತ್ತು. ಅದು ಕಂಪಲ್ಸರಿ ನಿದ್ರೆಯ ಸಮಯ. ಮೊದಲ ನಾಲ್ಕೈದು ದಿನಗಳಲ್ಲಂತೂ ನನಗೆ ಏನೆಲ್ಲಾ ಸರ್ಕಸ್ ಮಾಡುದ್ರು ನಿದ್ರೆನೆ ಬರ್ತಾ ಇರಲಿಲ್ಲ.

ಅಂತೂ ಇಂತು ಆ ಹತ್ತು ದಿನಗಳು ಎಷ್ಟು ಬೇಗ ಕಳೆದವೋ ಗೊತ್ತಾಗ್ಲಿಲ್ಲ. ನವೆಂಬರ್ 26ಕ್ಕೆ ವಿಪಸನ ಶಿಬಿರ ಮುಕ್ತಾಯವಾಯ್ತು. ಮಧ್ಯಾಹ್ನದ ಭೋಜನದ ನಂತರ, ಇತರ ಶಿಬಿರಾರ್ಥಿಗಳೊಂದಿಗೆ ಮಾತಾಡಿ, ತಮಾಸೆ ಮಾಡಿ, ಸಂಸ್ಥೆಯವರನ್ನು ವಂದಿಸಿ, ಧ್ಯಾನ ಕೌಶಲ್ಯಗಳನ್ನು ಅಲ್ಪಸ್ವಲ್ಪ ಕಲಿತ ನಾವು ಅವರು ಕೊಟ್ಟ ಸರ್ಟಿಫಿಕೇಟ್ ತಗೊಂಡು, ಏನೋ ಸಾಧನೆ ಮಾಡ್ದೋರ್ ತರಹ ಸೆಮಿನರಿಗೆ ವಾಪಸ್ ಬಂದ್ವಿ. ಅದ್ಯಾಕೋ ಮನಸ್ಸು ಮಾತ್ರ ಹೈದ್ರಾಬಾದ್ ಅನುಭವಗಳನ್ನು ಪದೇ ಪದೇ ನೆನಪಿಸುತ್ತಲೇ ಇತ್ತು.

ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ. ಶುಭಹಾರೈಕೆಗಳೊಂದಿಗೆ ನಿಮ್ಮವ.

❖


Kiran D'souza

ತೃಪ್ತಿ ಕೇಟರಿಂಗ್ ಸರ್ವಿಸಸ್

Ph. : 08262-228122
Cell : 94485-54697
92428-09915

THRUPTHI CATERING SERVICES



*Gate way of Healthy food*



UPPALLI, CHIKMAGALUR.

# ಕಣ್ಣೀರಿಟ್ಟು ಕನಲುತ್ತಿರುವ ಮಹಿಳೆ

"ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾ'' ಎಂಬ ಸಂಸ್ಕೃತ ಭಾಷೆಯ ಮಾತುಗಳು ಹೆಣ್ಣನ್ನು ದೇವರ ಇನ್ನೊಂದು ಮುಖವೆಂದು ಬಣ್ಣಿಸಿದೆ. ಈ ವಾಕ್ಯದಂತೆ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ಗೌರವಿಸಲು ಪೂಜಿಸಲು ಸಾರಿ ಸಾರಿ ಹೇಳುತ್ತದೆ. ಪುರಾತನ ಕಾಲದಿಂದಲೂ ಮಹಿಳೆಗೆ ವಿಶೇಷವಾದ ಸ್ಥಾನಮಾನ ಕಲ್ಪಿಸಲಾಗಿದೆ. ಹಿಂದಿನ ಕಾಲದಲ್ಲಿ ಇದ್ದ ಗೌರವ ಸ್ಥಾನಮಾನಗಳು ಈ ಆಧುನಿಕ ಸಮಾಜದಲ್ಲಿ ಸಿಗುತ್ತಿಲ್ಲ. ವಾಸ್ತವಿಕವಾಗಿ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಶೋಷಣೆಗಳಿಗೆ ಕೊನೆಯಿಲ್ಲವೆ ? ಈ ದೌರ್ಜನ್ಯ, ಲೈಂಗಿಕ ಕಿರುಕುಳಗಳು, ಅತ್ಯಾಚಾರ ಇವೆಲ್ಲಕ್ಕೂ ಸ್ಪಂದಿಸದೆ ಮೌನ ತಳೆದಿರುವ ಸರ್ಕಾರಗಳು, ತಮ್ಮ ಜೀವನದ ಬಗ್ಗೆಯೇ ಚಿಂತಿಸುವ ಅಸ್ತಿತ್ವ ರಹಿತ ಜನರ ನಡುವೆ ಮಹಿಳೆಯರ ಹಕ್ಕುಗಳನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲವೇ ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದರೂ ಸಹ ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ, ದೌರ್ಜನ್ಯಗಳು ಮುಂದುವರೆಯುತ್ತಾ ಇದೆ. ಬಾಪೂಜಿಯವರ ರಾಮರಾಜ್ಯದ ಕನಸು ನನಸಾಗಬೇಕಾದರೆ ಮಹಿಳೆಯರನ್ನು ಕೀಳುದೃಷ್ಟಿಯಿಂದ, ಕಪಟತನದಿಂದ ನೋಡುವುದನ್ನು ಬಿಟ್ಟು ತನ್ನ ಅಮ್ಮ ಸಂಗಾತಿ, ಅಕ್ಕ, ತಂಗಿಯರ ಭಾವನೆಯಿಂದ ಈ ಪುರುಷ ಸಮಾಜ ನೋಡಬೇಕಾಗಿದೆ. ಆಗ ಮಾತ್ರವೇ ಗಾಂಧಿಜೀಯವರ ಕನಸು ನನಸಾಗಲೂ ಸಾಧ್ಯ. ಯಾರಿಂದ ರಕ್ಷಣೆ ಸಿಗಬೇಕೀತ್ತೋ ಅವರಿಂದಲೇ ಈ ದೌರ್ಜನ್ಯ ನಡೆಯುತ್ತಿದೆ. ಮಹಿಳೆಯರು ದೇಶದ ಪ್ರದಾನಿ, ರಾಷ್ಟ್ರಪತಿ ಹುದ್ದೆ ಏರಿದ್ದರೂ, ಮಹಿಳಾ ಸಮಾಜಕ್ಕೆ ನಿಜವಾದ ಸ್ವಾತಂತ್ರ್ಯ ಇನ್ನೂ ಸಿಗದಿರುವುದು ವಿಷದನೀಯವೇ ಸರಿ. ಮಹಿಳೆಯರ ಮೇಲಿನ ಈ ಶೋಷಣೆಗಳು ಬರೀ ಈ ಕಲಿಯುಗದಲ್ಲಿ ಮಾತ್ರವಲ್ಲ, ತ್ರೇತಾಯುಗದಲ್ಲಿ ಮತ್ತು ದ್ವಾಪರಯುಗದಲ್ಲಿಯೂ ಸಹ ಚಿತ್ರಿತವಾಗಿದೆ. ತ್ರೇತಾಯುಗದಲ್ಲಿ ಸೀತೆ, ದ್ವಾಪರಯುಗದಲ್ಲಿ ದ್ರೌಪದಿ, ಹಾಗೆಯೇ ಇತಿಹಾಸದ ರಾಣಿ ಮಹಾರಾಣಿಯರ ಮೇಲೂ ನಡೆದಿದೆ. ಆದರೆ ಇದಕ್ಕೆಲ್ಲ ಕೊನೆ ಎಂಬುದು ಇದ್ದೇ ಇರುತ್ತದೆ. ಸರ್ವಾಧಿಕಾರಿ ಹಿಟ್ಲರ್ ಯೆಹೂದಿ ಮಹಿಳೆಯರನ್ನು ಹಿಂಸಿಸಿದಕ್ಕೆ ತಾನೇ ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು. ಸಿತೆಯನ್ನು ಕೆಣಕಿದ ರಾವಣನು ರಾಮನಿಂದ ಹತನಾದ. ದ್ರೌಪದಿಯಯನ್ನು ಹಿಂಸಿಸಿದ ಕೌರವರು ಪಾಂಡವರಿಂದ ನಾಶವಾಗಿ ಹೋದರು. ಈ ರೀತಿಯ ಹತ್ತು ಹಲವು ಘಟನೆಗಳು ಇತಿಹಾಸದ ಪುಟದಲ್ಲಿ ದಾಖಲಾಗಿವೆ. ಇಷ್ಟೆಲ್ಲ ಇತಿಹಾಸದ ಘಟನೆಗಳು ಈ ಮಾನವನ ಜಗತ್ತಿಗೆ ತಿಳಿದಿದ್ದರೂ ಈಗ ಮಹಿಳೆಯರ ಮೇಲಿನ ಶೋಷಣೆ ಸಿರಿಯೇ? ಪ್ರಾಣಿಗಳಿಗೂ, ಮನುಷ್ಯನಿಗೂ ವ್ಯತ್ಯಾಸ ಇಲ್ಲವೇ ?

ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು ಎಂಬ ನುಡಿಯಂತೆ ಮಕ್ಕಳು ಶಾಲೆಯಲ್ಲಿ ಕಲಿಯುವುದಕ್ಕಿಂತ ತನ್ನ ತಾಯಿಯಿಂದ ಕಲಿಯುವುದೇ ಹೆಚ್ಚು. ಆಕೆ ಕಲಿಸಿದ ಪಾಠ ತತ್ವಗಳು ಸಂಯಮ ಕಳೆದುಕೊಳ್ಳುತ್ತದೆ. ತಾಯಿ ತನ್ನ ಪ್ರೀತಿಯನ್ನು ಕೊಟ್ಟು ಪ್ರೀತಿಯ ಬೀಜ ಬಿತ್ತಿ, ನೆರೆಯವರ ಜೊತೆ ಪ್ರೀತಿಯಿಂದ ಬಾಳಲು ಕಲಿಸಿ, ತನ್ನ ಮಕ್ಕಳಿಗಾಗಿ ಪ್ರೀತಿಯನ್ನು ಮುಡಿಪಾಗಿಡುತ್ತಾಳೆ. ತಾನು ಹೆತ್ತ ಹೆಣ್ಣುಗೂಸನ್ನು ನೋಡಿ ತಾಯಿಯು ಈ ಸಮಾಜದಲ್ಲಿ ನಿನ್ನ ಮೇಲೆ ದೌರ್ಜನ್ಯ ನಡೆಯದಂತೆ ಹೇಗೆ ತಡೆಯಲಿ ಎಂದು ಕಣ್ಣೀರಿಡುವ ಸನ್ನಿವೇಶವನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಮಗುವನ್ನು ಒಂಭತ್ತು ತಿಂಗಳು ಹೊತ್ತು ಹೆತ್ತು, ಸಾಕಿ ಸಲಹುವಳು ಈ ಮಹಿಳೆ, ಕುಟುಂಬದಲ್ಲಿ ಸರ್ವ ಕಷ್ಟಗಳನ್ನು ಎದುರಿಸಿ ಬಾಳುವುದು ಈ ಮಹಿಳೆ. ಈ ಎಲ್ಲಾ ಕಷ್ಟಗಳು, ನೋವುಗಳು ಆ ಮಹಿಳೆಗೆ ಮಾತ್ರ ಗೊತ್ತು. ಇಷ್ಟೆಲ್ಲಾ ಇದ್ದರೂ ಮಹಿಳೆಯರಿಗಿಲ್ಲ ಸ್ವಾತಂತ್ರ್ಯ. ಆದರೆ ಒಂದು ಮಾತ್ರ ನೆನಪಿನಲ್ಲಿಡಬೇಕು; ಒಂದು ಮಗು ಯಾವುದೇ ಸಾಧನೆಗೂ ಪ್ರಖ್ಯಾತಿಗೂ ಅಥವಾ ಕುಖ್ಯಾತಿ ಆಗುವುದಕ್ಕೂ ಅವನ / ಳ ತಾಯಿಯ ನೀತಿಪಾಠವೇ ಕಾರಣ. ಗಂಡು-ಹೆಣ್ಣು ಬೇರೊಂದು ಹೊಸ ಬೆಳಕಿಗೆ ಎಚ್ಚರಗೊಳ್ಳುವ ಕಾಲಕ್ಕೆ ನಾವಿನ್ನೂ ಕಾಯಬೇಕಾಗಿದೆ. ನಿಜವಾಗಲೂ ಮಹಿಳೆಯರಿಗೆ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಈ ಸಮಾಜ ಸ್ವಷ್ಟವಾಗಲೂ ಸಾಧ.. ❖

ಸಹೋ. ರೋಷನ್ ಎಸ್.
ಮೈಸೂರು.

**ಜೀವನ ಸಂಗಾತಿಯ ಹುಡುಕಾಟದಲ್ಲಿರುವಿರಾ ?**
**ಯೋಗ್ಯ ವಧು-ವರರ ಅನ್ವೇಷಣೆಯಲ್ಲಿದ್ದಿರಾ ?**
**ಆಂತಕ - ಚಿಂತೆಗೊಳಗಾಗುವ ಅಗತ್ಯವಿಲ್ಲ.**
**ಇಗೋ ನಿಮ್ಮ ಸಹಾಯಕ್ಕೆ ನಿಮ್ಮ ಒತ್ತಡವನ್ನು ಹಗುರಗೊಳಿಸಲು**
**ನಿಮಗಿದೋ ಸುವರ್ಣವಕಾಶ**
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ.
**COUPLE FOR CHRIST**
"Peace House", Gowri Caluve, Near Water Tank,
Vijayapura Extension, Chikmagalur - 577 101.
Contact :

**Mr. Sylvester Mascharenhas**
Mob. : +91 98804 05966, +91 94810 70028,
+91 90366 89356.
E-mail : coupleforchrist2@gmail.com



ಕೊಡಿಡುವ ಅಭ್ಯಾಸವಿರುವವನು ಬೇಗ ಸಿರಿವಂತನಾಗುತ್ತಾನೆ.

# ಬದಲಾವಣೆ ಬಿರುಗಾಳಿ ಬೆನೆಡಿಕ್ಟ್!

ಬೆನೆಡಿಕ್ಟ್ XVI ಅವರು ತಮ್ಮ ಪೋಪ್ ಪದವಿಗೆ ರಾಜೀನಾಮೆ ನೀಡಲು ನಿರ್ಧರಿಸಿದ ಘಟನೆ ಕ್ರಿಶ್ಚಿಯನ್ ಸಮುದಾಯಕ್ಕೆ ಮಾತ್ರವಲ್ಲ ವಿಶ್ವದ ಪ್ರಮುಖ ಧರ್ಮಗಳ ಮುಖಂಡರಿಗೂ ಶಾಕಿಂಗ್ ಸುದ್ದಿ. ವಿಶ್ವದಾದ್ಯಂತ ಇರುವ 150 ಕೋಟಿ ರೋಮನ್ ಕ್ಯಾಥೋಲಿಕರಿಗೆ ಪೋಪ್ ರಾಜೀನಾಮೆಯ ವಿಚಾರ ಅರಗಿಸಿಕೊಳ್ಳಲಾಗದ ವಿಚಾರ. ಕ್ರೈಸ್ತ ಧರ್ಮ ಹಾಗೂ ಚರ್ಚ್‌ಗಳಲ್ಲಿ ಎಲ್ಲ ವಿಚಾರಗಳಿಗೂ ಪೋಪ್ ಅಂತಿಮ. ಅಂತಹವರು ಯಾರಿಗೆ ರಾಜೀನಾಮೆ ಕೊಡಬೇಕು ಹಾಗೂ ಅದನ್ನು ಸ್ವೀಕರಿಸುವವರು ಯಾರು ಎಂಬ ಪ್ರಶ್ನೆಗಳು ಯಾರಿಗಾದರೂ ಏಳಬಹುದು. ಆದರೆ ರೋಮನ್ ಕ್ಯಾಥೋಲಿಕ್ (ಆರ್‌ಸಿ) ನಲ್ಲಿರುವ 'ಕೋಡ್ ಆಫ್ ಕ್ಯಾನೋನ್‌ಲಾ'ದಲ್ಲಿ ತಿಳಿಸಿರುವಂತೆ ಪೋಪ್ ಅವರು ಯಾವುದೇ ಅಡೆತಡೆಗಳಿಗೆ ಬಲಿಯಾಗದೇ ನಿರ್ಭಯವಾಗಿ ಸಮುದಾಯದ ಮುಂದೆ ಬಂದು ತಾನು ಪೋಪ್ ಪದವಿಗೆ ರಾಜೀನಾಮೆ ನೀಡುತ್ತೇನೆ ಎಂದು ಘೋಷಿಸುವುದೇ ರಾಜೀನಾಮೆಗೆ ಇರುವ ಸೂತ್ರ.

ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಸುಮಾರು 10 ಮಂದಿ ಪೋಪ್‌ಗಳು ಈಗಾಗಲೇ ರಾಜೀನಾಮೆ ನೀಡಿದ್ದಾರೆ. 600ವರ್ಷಗಳ ಹಿಂದೆ ಪೋಪ್ ಗ್ರೆಗೋರಿ XII ಅವರ ರಾಜೀನಾಮೆಯ ನಂತರ ಇಂತಹ ಬೆಳವಣಿಗೆ, ಪೋಪ್ ಬೆನೆಡಿಕ್ಟ್ ಅವರ ರಾಜೀನಾಮೆಯ ಮೂಲಕ ಮತ್ತೆ ನಡೆಯುತ್ತಿದೆ. ಕ್ರೈಸ್ತ ಧರ್ಮದ ಇತಿಹಾಸದಲ್ಲಿಯೇ ಪೋಪ್ ಬೆನೆಡಿಕ್ಟ್ ಅವರು ಭಿನ್ನ. ಅತಿ ಹಿರಿಯ ವಯಸ್ಸಿನವರು ಪೋಪ್ ಸ್ಥಾನಕ್ಕೆ ಬಂದದ್ದು, ಸಲಿಂಗ ಕಾಮ, ಕೃತಕ ಗರ್ಭಧಾರಣೆ, ಲೈಂಗಿಕತೆ ಹಾಗೂ ಕ್ರೈಸ್ತ ಧರ್ಮಗುರುಗಳ ಮಕ್ಕಳ ಮೇಲಿನ ಲೈಂಗಿಕ ಕಿರುಕುಳದ ಕುರಿತು ಮುಕ್ತವಾಗಿ ಮಾತನಾಡಿದ್ದು, ಆಧುನಿಕ ತಂತ್ರಜ್ಞಾನದ ಕುರಿತು ನೀಡಿದ ಒತ್ತು ಎಲ್ಲವೂ ಪೋಪ್ ಬೆನೆಡಿಕ್ಟ್ ಅವರನ್ನು ಭಿನ್ನತೆ ಸಾಲಿಗೆ ಸೇರಿಸುತ್ತವೆ. ಕ್ರೈಸ್ತಧರ್ಮದಲ್ಲಿ ಪೋಪ್ ಹುದ್ದೆಗೆ ಬಹಳ ಮಹತ್ವವಿದೆ. ಮುಖ್ಯವಾಗಿ ಪೋಪ್ ಹುದ್ದೆಯಲ್ಲಿರುವವರು ವ್ಯಾಟಿಕನ್ ಸಿಟಿಯ ಮುಖ್ಯಸ್ಥನಾಗುವ ಜತೆಯಲ್ಲಿ ವಿಸ್ವದ ಕ್ರೈಸ್ತ ಚರ್ಚ್‌ಗಳ ಅಧಿಪತಿಯಾಗುತ್ತಾರೆ.

ಬೆನೆಡಿಕ್ಟ್ ಅವರ ಮೂಲ ಹೆಸರು ಜೋಸಫ್ ಅಲೋಶಿಯಸ್ ರೆಟ್‌ಜಿಂಗರ್, ಜರ್ಮನಿಯ ಬವೇರಿಯಾದಲ್ಲಿ ರೆಟ್‌ಜಿಂಗರ್ 1927ರ ಏ. 16ರಂದು ಜನಿಸಿದರು. ಕ್ರೈಸ್ತರ ಪಾಲಿಗೆ ಈ ತಿಂಗಳು ಪವಿತ್ರ ಎನ್ನಲಾಗುತ್ತದೆ. ಜರ್ಮನಿಯ ಪೋಲೀಸ್ ಅಧಿಕಾರಿಯಗಿದ್ದ ಜೋಸಫ್ ರೆಟ್ ಜಿಂಗರ್ ಹಾಗೂ ಮರಿಯಾ ರೆಟ್‌ಜಿಂಗರ್ ಅವರ ಮೂವರು ಮಕ್ಕಳಲ್ಲಿ ಜೋಸೆಫ್ ಅಲೋಶಿಯಸ್ ರೆಟ್‌ಜಿಂಗರ್ (ಪೋಪ್) ಹಿರಿಯ ಪುತ್ರ. ಉಳಿದಂತೆ ಸಹೋದರ ಜಾರ್ಜ್ ರೆಟ್‌ಜಿಂಗರ್ ಕ್ರೈಸ್ತ ಧರ್ಮಗುರುವಾಗಿದ್ದಾರೆ. ಅವಿವಾಹಿತೆಯಾಗಿದ್ದ ಸಹೋದರಿ ಮರಿಯಾ ರೆಟ್‌ಜಿಂಗರ್, ತನ್ನ ಹಿರಿಯ ಸಹೋದರನ (ಪೋಪ್) ಆಶ್ರಯದಲ್ಲಿದ್ದಾಗಲೇ ತೀರಿಕೊಂಡಿದ್ದಾರೆ. 1951ರ ಜೂ. 29. ರಂದು ಕ್ರೈಸ್ತ ಧರ್ಮ ಗುರವಾಗಿ ದೀಕ್ಷೆ ಪಡೆದ ಅಲೋಶಿಯಸ್ ರೆಟ್‌ಜಿಂಗರ್ ನಂತರ ನಿಧಾನವಾಗಿ ಕ್ರೈಸ್ತ ಚರ್ಚ್‌ಗಳಲ್ಲಿ ನಾನಾ ಹುದ್ದೆ ಆಲಂಕರಿಸಿದರು. 1958ರಲ್ಲಿ ಮತಧರ್ಮ ಶಾಸ್ತ್ರಗಳಲ್ಲಿ ವಿಶೇಷ ಪರಿಣತಿ ಪಡೆದು, ಜರ್ಮನಿಯ ಪ್ರತಿಷ್ಠಿತ ವಿವಿಗಳಲ್ಲಿ ಬೋಧಿಸಿದರು. ವಿಶ್ವದ ಖ್ಯಾತ ರೆಗೆನ್ಸ್ ಬರ್ಗ್ ವಿವಿಯಲ್ಲಿ ಮತಧರ್ಮಶಾಸ್ತ್ರದ ಕುರಿತು ಕೊನೆಯದಾಗಿ ಉಪನ್ಯಾಸ ನೀಡಿದರು. ಇದೇ ವಿವಿಯಲ್ಲಿ ಉಪಾಧ್ಯಕ್ಷನ ಸ್ಥಾನದಲ್ಲಿ ನಿಂತು ದುಡಿದ (1976-77) ಬಳಿಕ ಮ್ಯೂನಿಕ್‌ಗೆ ಅರ್ಚ್ ಬಿಷಪ್‌ರಾದರು. 1977ರಲ್ಲಿ ಪೋಪ್‌ಜಾನ್‌ಪಾಲ್II ಅವರಿಗೆ ಆಪ್ತರಾಗಿದ್ದ ಅಲೋಶಿಯಸ್ ರೆಟಜಿಂಗರ್ ಕಾರ್ಡಿನಲ್ ಆಗಿ ನೇಮಕಗೊಂಡರು. ಕ್ರೈಸ್ತ ಧರ್ಮದಲ್ಲಿ ಅತೀ ಹೆಚ್ಚು ಕಾಲ ಕಾರ್ಡಿನಲ್ ಆಗಿದ್ದವರಲ್ಲಿ ಅಲೋಶಿಯಸ್ ರೆಟ್‌ಜಿಂಗರ್ ಮೊದಲಿಗರು. ಜರ್ಮನಿ ಮೂಲದವರಾಗಿದ್ದ ಅವರು ಫ್ರೆಂಚ್ ಮತ್ತು ಇಟಲಿ ಭಾಷೆಯಲ್ಲಿ ಪ್ರಾವೀಣ್ಯತೆ ಸಾಧಿಸಿದ್ದವರು. ಲ್ಯಾಟಿನ್ ಸೇರಿದಂತೆ ಇಂಗ್ಲಿಷ್ ಹಾಗೂ ಸ್ಪಾನಿಷ್, ಪೋರ್ಚುಗೀಸ್ ಭಾಷೆಗಳೂ ಕೂಡ ಗೊತ್ತು. ಹಳೆಯ ಗ್ರೀಕ್ ಹಾಗೂ ಹಿಬ್ರೂ ಭಾಷೆಯನ್ನು ಬರೆಯಲು ಹಾಗೂ ಓದಲು ಬಲ್ಲರು. ಅನೇಕ ವೈಜ್ಞಾನಿಕ ಅಕಾಡೆಮಿಗಳಲ್ಲಿ ಸದಸ್ಯರಾಗಿದ್ದ ಅವರಿಗೆ ಪಿಯಾನೋ ನುಡಿಸುವುದು, ನಾನಾ ರೀತಿಯ ಪಿಯಾನೋಗಳನ್ನು ಸಂಗ್ರಹಿಸುವುದು ಪ್ರೀತಿಯ ಹವ್ಯಾಸ. ದ್ವಿತೀಯ ವ್ಯಾಟಿಕನ್



ಮಹಾಸಭೆಯಲ್ಲಿ ಅಲೋಶಿಯಸ್ ರೆಟ್‌ಜಿಂಗರ್ ಸಕ್ರಿಯ ಸದಸ್ಯರಾಗಿದ್ದರು. ಇದೇ ಮಹಾಸಭೆಯಲ್ಲಿ ಕ್ರೈಸ್ತ ಧರ್ಮದ ಪ್ರಮುಖ ಕಾನೂನುಗಳ ಗ್ರಂಥ 'ದೀ ಕೋಡ್ ಆಫ್ ಕ್ಯಾನೋನ್ ಲಾ' ಗೂ ತಿದ್ದುಪಡಿ ತಂದು ಅದನ್ನು ಮತ್ತಷ್ಟು ಬಲಿಷ್ಟಗೊಳಿಸಿದರು. ಚರ್ಚ್‌ಗಳ ಅಧಿಕಾರ, ಸಮಸ್ಯೆ, ಸವಾಲುಗಳಿಗೆ ಉತ್ತರ ನೀಡುವ ಕೈ ಗನ್ನಡಿಯಂತೆ ಈ ಕಾನೂನು ಸಫಲವಾಗಲು ಅಲೋಶಿಯಸ್ ರೆಟ್‌ಜಿಂಗರ್ ದುಡಿದಿದ್ದರು. ಸಾಹಿತ್ಯ ಹಾಗೂ ಆಧ್ಯಾತ್ಮಿಕ ವಿಚಾರಗಳಲ್ಲಿ ಹಿಡಿತ ಹೊಂದಿದ್ದ ಅವರು 1969ರಲ್ಲಿ 'ಕೋಮಿನೋ' ಎನ್ನುವ ಆಧ್ಯಾತ್ಮಿಕ ಪತ್ರಿಕೆ ಹುಟ್ಟುಹಾಕಿದರು. ಈ ಪತ್ರಿಕೆ ಇಂದಿಗೂ ವಿಶ್ವದ 17 ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿದೆ. ವಿಶ್ವದ ಖ್ಯಾತ ಆಧ್ಯಾತ್ಮಿ ಚಿಂತಕರಾದ ಚೀನಾದ ಹನ್ಸ್‌ಕೂಂಗ್, ಎಡ್ವರ್ಡ್ ಸಿ, ಹೆನ್ರಿ ಡೀ ಲ್ಯೂಬ್ಯಕ್, ವಾಟ್ಟರ್ ಕೆಸ್ಟರ್ ಮೊದಲಾದವರು ತಮ್ಮ ಬರವಣಿಗೆಯನ್ನು 'ಕೋಮಿನೋ' ಗೆ ನೀಡುತ್ತಿದ್ದರು 2005ರ ಜನವರಿ 2 ರಂದು 'ಟೈಮ್ ಮ್ಯಾಜೀನ್' ಮತು 'ಫೈನಾನ್ಷಿಯಲ್ ಟೈಮ್ಸ್' ಪತ್ರಿಕೆಗಳು ಪೋಪ್ ಜಾನ್ ಪೌಲ್II ರ ಉತ್ತರಾಧಿಕಾರಿಯಾಗಿ ಜೋಸಫ್ ಅಲೋಶಿಯಸ್ ರೆಟ್‌ಜಿಂಗರ್ ನೇಮಕವಾಗುತ್ತಾರೆ ಎಂದು ಭವಿಷ್ಯ ನುಡಿದಿದ್ದವು.

19 ಏಪ್ರಿಲ್ 2005ರಲ್ಲಿ ಜೋಸೆಫ್ ಅಲೋಶಿಯಸ್ ರೆಟ್‌ಜಿಂಗರ್ 265ನೇ ಪೋಪ್ ಆಗಿ ಅಧಿಕಾರ ಸ್ವೀಕರಿಸಿದರು. ನಂತರ ಜೋಸಫ್ ಅಲೋಶಿಯಸ್ ರೆಟ್ ಜಿಂಗರ್ 'ಬೆನೆಡಿಕ್ಟ್' ಎಂದು ತಮ್ಮ ಹೆಸರನ್ನು ಬದಲಿಸಿಕೊಂಡರು. ಲ್ಯಾಟಿನ್ ಭಾಷೆಯಲ್ಲಿ ಬೆನೆಡಿಕ್ಟ್ ಎಂದರೆ 'ದೇವರ ಅನುಗ್ರಹ' ಪಡೆದವರು ಎಂದರ್ಥ. ಇವರ 8 ವರ್ಷದ ಅಧಿಕಾರದ ಅವಧಿಯಲ್ಲಿ ವಿಶ್ವದ ಅನೇಕರಿಗೆ ಸಂತ ಪದವಿ ನೀಡಿದ್ದಾರೆ. 'ಗಾಢ್ ಈಸ್‌ಲವ್' ಸೇವ್‌ಡ್‌ಬೈಹೋಪ್' ಹಾಗೂ 'ಲವ್ ಇನ್ ಟ್ರೂತ್' ಎನ್ನುವ ಕೃತಿಗಳನ್ನು ಹೊರತಂದಿದ್ದಾರೆ. ಪೋಪ್ ಬೆನೆಡಿಕ್ಟ್ ಕ್ರೈಸ್ತ ಧರ್ಮವೂ ಸೇರಿದಂತೆ ಇತರ ಧರ್ಮಗಳ ಮುಖಂಡರ ಜೊತೆಗೆ ಒಡನಾಟದ ಆಸಕ್ತಿ ಹೊಂದಿದ್ದರು. ಯಹೂದಿ

ಧರ್ಮದ ಮುಖಂಡರ ಜೊತೆ ತೀರಾ ಹತ್ತಿರ ಒಡನಾಟ ಅವರಿಗಿತ್ತು. ಬೆನೆಡಿಕ್ಟ್ ಅವರಿಗೆ ಶುಭ ಹಾರೈಸಲು ದಲೈ ಲಾಮಾ ರೋಮ್‌ಗೆ ಬರುವುದನ್ನು ಗ್ರಹಿಸಿದ ಚೀನಾ, ರಾಜಕೀಯ ಶಕ್ತಿ ಬಳಸಿ ಲಾಮಾ ಅವರ ಪ್ರವಾಸ ರದ್ದಾಗುವಂತೆ ನೋಡಿಕೊಂಡಿತ್ತು. ಅಮೆರಿಕಾದಲ್ಲಿ ರುವ ಇಸ್ಕಾನ್ (ಅಂತಾ ರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂತ ಸಂಸ್ಥೆ) ಪ್ರತಿನಿಧಿ ರಾಧಿಕಾ ರಮಣ್ ದಾಸ್ ಅವರ ಜತೆಯಲ್ಲಿ ಮಾತುಕತೆ ನಡೆಸಿದ ಪೋಪ್ ಬೆನೆಡಿಕ್ಟ್ ಅವರಿಗೆ ದಾಸ್, ಓಂ ಸಂಕೇತವನ್ನು ಉಡುಗೊರೆಯಾಗಿ ನೀಡಿದ್ದರು.

ಪೋಪ್ ಬೆನೆಡಿಕ್ಟ್ ಅವರು ಒಂದೆಡೆ ತಮ್ಮ ವಿಚಾರಗಳಿಂದ ಅನೇಕ ಮಂದಿಯನ್ನು ಆಕರ್ಷಿಸಿದರೆ, ಮತ್ತೊಂದೆಡೆ ಸಾಕಷ್ಟು ವಿವಾದಗಳಿಗೂ ಗುರಿಯಾಗಿದ್ದಾರೆ. 2008ರಲ್ಲಿ ಅಮೆರಿಕ ಪ್ರವಾಸಕ್ಕೆ ಹೋದ ಪೋಪ್, ಅಲ್ಲಿ ಕ್ರೈಸ್ತೇತ ಧರ್ಮಗುರುಗಳಿಂದ ಲೈಂಗಿಕ ಕಿರುಕುಳಕ್ಕೆ ಒಳಗಾದ ಮಕ್ಕಳನ್ನು ಖುದ್ದು ಭೇಟಿ ಮಾಡಿದ್ದು, ಕ್ರೈಸ್ತ ಧರ್ಮಗುರುಗಳ ಕರಾಳ ಮುಖವನ್ನು ಅನಾವರಣ ಮಾಡಿತ್ತು. ಇಸ್ಲಾಂ ವಿದ್ವಾಂಸರು ಹಾಗೂ ಕ್ರೈಸ್ತ ಮುಖಂಡರಿಗಾಗಿ 2009ರಲ್ಲಿ ಮಾರ್ಚ್ 9ರಂದು ತಾವೇ ಹಮ್ಮಿಕೊಂಡಿದ ಸಮಾವೇಶದಲ್ಲಿ ಪೋಪ್ ಅವರು ನೀಡಿದ ಮತ್ತೊಂದು ಉಪನ್ಯಾಸ ಇಸ್ಲಾಂ ಧಾರ್ಮಿಕ ಮುಖಂಡರನ್ನು ಮತ್ತೊಮ್ಮೆ ಕೆರಳಿಸಿತ್ತು. ವಿಶ್ವದ ನಾನಾ ಭಾಗಗಳಲ್ಲಿ ಬೆನೆಡಿಕ್ಟ್ ವಿರುದ್ಧ ಪ್ರತಿಭಟನೆಗಳಾದವು. ಕೊನೆಗೆ ಬೆನೆಡಿಕ್ಟ್ ಕ್ಷಮೆ ಯಾಚಿಸುವ ಮೂಲಕ ಈ ವಿವಾದಕ್ಕೆ ತೆರೆ ಎಳೆದರು. ಏಡ್ಸ್ ರೋಗ ನಿಯಂತ್ರಣ ಹಾಗೂ ಕುಟುಂಬ ಯೋಜನೆಗಾಗಿ ಕಾಂಡೋಮ್ ಬಳಸುವುದರಿಂದ, ಇಂತಹ ಪ್ರಕರಣಗಳು ಇನ್ನಷ್ಟು ಹೆಚ್ಚುವುದರ ಜತೆಗೆ ಮುಕ್ತ ಲೈಂಗಿಕತೆಗೆ ಬೆಂಬಲ ಸೂಚಿಸಿದಂತಾಗುತ್ತದೆ ಎಂದರು. ಈ ಮೂಲಕ ಕಾಂಡೋಮ್ ಕಂಪನಿಗಳ ವಿರೋಧದ ಜತೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ತೀವ್ರ ಟೀಕೆಗೆ ಗುರಿಯಾಗಿದ್ದರು. ಚರ್ಚ್‌ಗಳಲ್ಲಿರುವ ಸಲಿಂಗಕಾಮದ ಕುರಿತು, ಪೋಪ್ ಅವರು ಅದೊಂದು ಮಾನಸಿಕ ಅಸಮತೋಲನ ಕ್ರಿಯೆ. ಆದರೆ ಇಂತಹ ಕ್ರಿಯೆಯಲ್ಲಿ ತೊಡಗಿರುವ ವ್ಯಕ್ತಿಯನ್ನು ಮಾತ್ರ ಪಾಪಿ ಎನ್ನುವಂತಿಲ್ಲ ಎಂದಿದ್ದರು. ಇದು ಮತ್ತೊಂದು ವಿವಾದಕ್ಕೆ ಕಾರಣವಾಗಿತ್ತು. ವಿಶ್ವ ಆರ್ಥಿಕತೆಯ ಕುರಿತು ನಡೆದ ಸಮಾವೇಶದಲ್ಲಿ ಪರಿಸರ, ವಲಸೆ, ಭಯೋತ್ಪಾದನೆ, ಸೆಕ್ಸ್ ಪ್ರವಾಸೋದ್ಯಮ, ಅಣುಶಕ್ತಿ, ಮುಂತಾದವುಗಳ ಕುರಿತು ಪೋಪ್ ಬೆನೆಡಿಕ್ಟ್ ಸಂವಾದದಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಪೋಪ್ ಹುದ್ದೆಗೆ ಇದ್ದ ಉಡುಗೆ ತೊಡುಗೆಗಳಲ್ಲೂ ಮಹತ್ತರ ಬದಲಾವಣೆಗಳನ್ನು ಬೆನೆಡಿಕ್ಟ್ ತಂದರು. ಈ ಹಿಂದೆ ಪೋಪ್‌ಗಳು ಬಳಸುತ್ತಿದ್ದ ಕೆಂಪು ಬಣ್ಣದ ಶೂಗಳನ್ನು ಬೆನೆಡಿಕ್ಟ್ ತೊಡಲು ನಿರಾಕರಿಸಿದರು. ಪೋಪ್‌ಗಳು ಚಳಿಗಾಲದಲ್ಲಿ ಮಾತ್ರ ಬಳಸುತ್ತಿದ್ದ ಕೆಂಪು ಬಣ್ಣದ ಹ್ಯಾಟ್‌ಗಳನ್ನು ಬೆನೆಡಿಕ್ಟ್ ಮತ್ತೆ ಚಾಲ್ತಿಗೆ ತಂದರು. ಸ್ಟ್ರೋಕ್‌ನಿಂದ ಕಣ್ಣಿನ ದೃಷ್ಟಿಯನ್ನು ಕೊಂಚ ಕಳೆದುಕೊಂಡಿದ್ದ ಅವರು, 2005 ರಲ್ಲಿಯೇ ಪೋಪ್ ಹುದ್ದೆಗೆ ರಾಜೀನಾಮೆ ನೀಡಲು ಒಲವು ತೋರಿಸಿದ್ದರು. ಬೆನೆಡಿಕ್ಟ್ ಅವರು ರೋಮನ್ ಕ್ಯಾಥೋಲಿಕ್‌ರಿಂದ ಬಿಟ್ಟುಹೋದ 'ಲೆಫೆಬ್ರೆ' ಎನ್ನುವ ಸಮುದಾಯವನ್ನು 2009 ರಲ್ಲಿ ಮತ್ತೆ ಕ್ರೈಸ್ತ ಸಮುದಾಯಕ್ಕೆ ಮರಳಿ ಕರೆತಂದರು. ನಾಲ್ವರು 'ಲೆಫೆಬ್ರೆ' ಬಿಷಪ್‌ರನ್ನು ಮತ್ತೆ ಆರ್‌ಸಿಗೆ ತಂದು ಕೂರಿಸಿದರು. ವ್ಯಾಟಿಕನ್ ಸಿಟಿಯಲ್ಲಿ ಪೋಪ್‌ಗೆ ಅಡುಗೆ ಮಾಡಿಕೊಡುತ್ತಿದ್ದ ಗೇಬ್ರಿಯೇಲ್ ಎಂಬುವವನು ಇಟಲಿ ಮೂಲದ ಪತ್ರಕರ್ತನಿಗೆ, ವ್ಯಾಟಿಕನ್‌ನಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬಂತೆ ಮಾಹಿತಿ ನೀಡಿದ್ದ. ಈ ಪ್ರಕರಣವನ್ನು 'ವ್ಯಾಟಿಲೀಕ್ಸ್' ಎನ್ನಲಾಗುತ್ತದೆ. ಈ ವಿಚಾರದಿಂದ ಪೋಪ್ ಬೆನೆಡಿಕ್ಟ್ ಬಹಳ ಘಾಸಿಗೊಂಡಿದ್ದರು. ಆದರೆ ಪೋಪ್ ಗೇಬ್ರಿಯೆಲ್‌ನನ್ನು ಕ್ಷಮಿಸಿದ್ದರು.

ಶಾಸ್ತ್ರೀಯ ಸಂಗೀತದ ಒಲವಿದ್ದ ಅವರು, 2009 ರ ನವೆಂಬರ್ 30 ರಂದು ಹೊರ ತಂದ 'ಬ್ಲೆಸ್‌ವರ್ಜಿನ್ ಮೇರಿ' ಎನ್ನುವ ಸಂಗೀತದ ಆಲ್ಬಂ ಸಾಕಷ್ಟು ಪ್ರಚಾರ ಪಡೆದಿತ್ತು 2007ರಲ್ಲಿ ಬೆಕ್ಕುಗಳ ಕುರಿತಾಗಿ 'ಜೋಸೆಫ್ ಆ್ಯಂಡ್ ಚಿಕೋ' ಕೃತಿ ಪೋಪ್ ಅವರಿಗೆ ಬೆಕ್ಕುಗಳ ಕುರಿತು ಇರುವ ಆಸಕ್ತಿಯನ್ನು ಬಿಂಬಿಸುವಂತಿತ್ತು. 2012ರಲ್ಲಿ ಪೋಪ್ ಬೆನೆಡಿಕ್ಟ್ ಆಧುನಿಕ ಸಾಮಾಜಿಕ ತಾಣ 'ಟ್ವಿಟರ್'ನಲ್ಲಿ ಅಕೌಂಟ್ ತೆಗೆದರು. ಅದರಲ್ಲೂ ವ್ಯಾಟಿಕನ್ ಸಿಟಿಯ ಕುರಿತು 'ಯೂಟ್ಯೂಬ್'ನಲ್ಲಿ ಚಾನೆಲ್ ಅನ್ನು ಆರಂಭಿಸಿದ್ದರು. ಸದಾ ಬದಲಾವಣೆಗೆ ಮೈಯೊಡ್ಡುತ್ತಿರುವ ಕ್ರೈಸ್ತ ಧರ್ಮದ ಚರ್ಚ್‌ಗಳಲ್ಲಿ ಅತಿ ಸಣ್ಣ ಅಧಿಕಾರದ ಅವಧಿಯಲ್ಲಿ ಬೆನೆಡಿಕ್ಟ್ ಬದಲಾವಣೆಯನ್ನಂತೂ ತಂದಿದ್ದರು. ಅತಿ ದೀರ್ಘ ಅವಧಿಯ ಪೋಪ್‌ಗಳ ನಡುವೆ ಒಂದು ಸಣ್ಣ ಅವಧಿಯ ಪೋಪ್‌ಗಳಿರುತ್ತಾರೆ ಎನ್ನೋದು ಒಂದು ಮಾತಿದೆ. ಇದು ಪೋಪ್ ಬೆನೆಡಿಕ್ಟ್ ಅವರಿಗೆ ಸರಿಯಾಗಿ ಅನ್ವಯವಾಗುತ್ತದೆ. ಅವರ ರಾಜೀನಮೆ ಫೆ. 28ರಂದು ಅಂಗೀಕೃತವಾಗುತ್ತದೆ. ಮಾರ್ಚ್ ಕೊನೆಯ ವಾರದಲ್ಲಿ ನೂತನ ಪೋಪ್‌ರ ಆಯ್ಕೆ ನಡೆಯುತ್ತದೆ. ಆದರೆ ಪೋಪ್ ಬೆನೆಡಿಕ್ಟ್ ಮಾತ್ರ ತಮ್ಮ ಹೆಸರಿನ ಜತೆಯಲ್ಲಿ ಅಧಿಕಾರ ಕಳೆದುಕೊಂಡು ಬರೀ ಜೋಸೆಫ್ ಅಲೋಶಿಯಸ್ ರಾಜಿಂಗರ್ ಆಗಿ ಉಳಿದು ಬಿಡುತ್ತಾರೆ. ಮುಕ್ತ ಮಾತುಕತೆಗೆ ಪೋಪ್ ಬೆನೆಡಿಕ್ಟ್ ಮಾತ್ರ ಎಂದಿಗೂ ಸಲ್ಲುವ ಹೆಸರು. ❖

## 9ನೇ ವರ್ಷದ ಚಿರಸ್ಮರಣೆ



## ಸ್ವಾಮಿ ಕೆ. ವಿ. ಜೇಮ್ಸ್

ಜನನ : 12.9.1959 ಗುರುದೀಕ್ಷೆ : 29.4.1986
ಮರಣ : 3.3.2004

**ಕರುಣಿಸು ದೇವಾ ಅಮರ ಸಂಭಾವನೆ**
**ನಿನ್ನೊಲುಮೆಯ ಸೇವಕಗೆ**
**ಇದುವೇ ನಮ್ಮ ದೀನ ಪ್ರಾರ್ಥನೆ**
**ನಿಮ್ಮ ಕರುಣಾಮಯ ಸನ್ನಿಧಿಗೆ**
**ವಾಲ್ಟರ್ ವಾಸ್ ಮತ್ತು ಕುಟುಂಬವರ್ಗ**
**ಚಿಕ್ಕಮಗಳೂರು**



ಇಂದೇ ಮಾಡಬಹುದಾದ ನಿನ್ನ ಕೆಲಸವನ್ನು ನಾಳೆಗೆ ಮುಂದೂಡಬೇಡ

# ಮೃತ್ಯೋರ್ಮಾ ಅಮೃತಂಗಮಯಾ

"ಅಸತೋಮಾ ಸದ್ಗಮಯಾ
ತಮಸೋಮಾ ಜ್ಯೋತಿರ್ಗಮಯಾ
ಮೃತ್ಯೋರ್ಮಾ ಅಮೃತಂಗಮಯಾ"
(ಬೃಹದಾರಣ್ಯಕ ಉಪನಿಷತ್ 1:3:28)

ಇದು ಸನಾತನ ಧರ್ಮೀಯ "ಶ್ರೀ ಗುರು ಸ್ತೋತ್ರಮ್" ನಾಮಾಂಕಿತ ಪ್ರಾರ್ಥನಾ ಶ್ಲೋಕ, ಇದು ಹಲವು ಶುಭ ಕಾರ್ಯಗಳಲ್ಲಿ ಪ್ರಪ್ರಥಮ ಮುಂಚೂಣಿಯಲ್ಲಿ ಪಠಿಸಲ್ಪಡುತ್ತಿರುವ ಪಾರಾಯಣ ಶ್ಲೋಕ ಇದರ ಅರ್ಥ, "ಅಸತ್ಯದಿಂದ ಸತ್ಯದೆಡೆಗೆ" ಅಂಧಕಾರದಿಂದ ಪ್ರಕಾಶದೆಡೆಗೆ "ಮೃತ್ಯುವಿನಿಂದ ಅಮರತ್ವದೆಡೆಗೆ" ನನ್ನನ್ನು ಕೊಂಡೊಯ್ಯು ದೇವಾ ಎಂದು ಪ್ರಾರ್ಥಿಸುವುದೇ ಆಗಿದೆ, ಈ ಶ್ಲೋಕದ ಪರಿಪೂರ್ಣತೆ ಪ್ರಭು ಯೇಸುವಿನ ಪವಿತ್ರ ವಾಕ್ಯಗಳಲ್ಲಿ ತಾಳೆಯಾಗಿ ಸಾಮ್ಯತೆ ಹೊಂದಿರುವುದು ಕಾಕತಾಳಿಯವಲ್ಲದೆ ದೈವಯೋಜನೆಯೇ ಆಗಿದೆ ಎಂದರೇ ಅತಿಶಯೋಕ್ತಿ ಏನಿಲ್ಲಾ! ಏಕೆಂದರೇ "ಮಾರ್ಗವೂ, ಸತ್ಯವೂ ಜೀವವೂ ನಾನೇ" (ಯೊವಾನ್ನ 14:6) "ನಾನೇ ಜಗಜ್ಯೋತಿ" (ಯೊವಾನ್ನ 8:12) ಎಂಬೀ ವಾಕ್ಯಗಳಲ್ಲಿ ಪ್ರಭುವು ನನ್ನಲ್ಲಿ ಮಾರ್ಗ ಸತ್ಯ, ಜೀವ, ಜ್ಯೋತಿ ಇದೆ ಎಂದು ನುಡಿದಿದ್ದರೆ. ಅದು ಬೇರೆಯದೆ ಅರ್ಥವಾಗುತ್ತಿತ್ತು. ಆದರೆ ಪ್ರಭುವು "ನಾನೇ" ಎಂದು ಘಂಟಾಘೋಷವಾಗಿ ನುಡಿದಿದ್ದು ಸಮಸ್ತ ಕ್ರೈಸ್ತಕುಲದ ವಿಶ್ವಾಸದ ಜೀವಾಳವಾಗಿದೆ. ಸಮಸ್ತ ಕ್ರೈಸ್ತರ ಈ ಜೀವಾಳವಾದ ಮೃತ್ಯುವಿನಿಂದ ಅಮೃತಕ್ಕೆ ಸಾಗಿದ ಪ್ರಭು ಯೇಸುಕ್ರಿಸ್ತರ ಮಹೋನ್ನತ ಮಹಿಮಾಭರಿತ ಹಬ್ಬವೇ "ಪಾಸ್ಖಹಬ್ಬ" ಅಥವಾ ಪ್ರಭುವಿನ ಪುನರುತ್ಥಾನದ ಹಬ್ಬ"

ಸಂತ ಪೌಲರು ನುಡಿಯುತ್ತಾರೆ. "ಕ್ರಿಸ್ತಯೇಸು ಪುನರುತ್ಥಾನ ಹೊಂದಿದ್ದೇನೋ ಸತ್ಯಸ್ಯ ಸತ್ಯ. ಅವರ ಪುನರುತ್ಥಾನವು ಸತ್ತವರು ಪುನರುತ್ಥಾನ ಹೊಂದುತ್ತಾರೆ ಎನ್ನುವುದಕ್ಕೆ ಪ್ರಮಾಣ" (ಕೊರಿ 15:20) ಆದುದರಿಂದಲೇ ಪುನರುತ್ಥಾನದ ಹಬ್ಬವು ಸಮಸ್ತ ಕ್ರೈಸ್ತ ಕುಲದ ವಿಶ್ವಾಸದ ಬುನಾದಿಯೂ ಉತ್ತುಂಗ ಶ್ರೇಣಿಯ ಹಬ್ಬವೂ ಹೌದು ಏಕೆಂದರೆ ಮರಣದ ವಿಷದ ಕೊಂಡಿಯನ್ನು ಬುಡಸಮೇತವಾಗಿ ತಲೆಕೆಳಗೆ ಮಾಡಿದ ಮೃತ್ಯುಂಜಯು ಪ್ರಭುವಿನ ಮಹಿಮಾಭರಿತ ಹಬ್ಬ "ಸಾವಿಗೆ ಸೋಲಾಯಿತು,
ಜಯವು ಸಂಪೂರ್ಣವಾಯಿತು
ಎಲ್ಲೈ ಸಾವೇ, ನಿನ್ನ ಜಯವೆಲ್ಲಿ?
ಎಲ್ಲೈ ಸಾವೇ, ನಿನ್ನ ವಿಷಕೊಂಡಿಯೆಲ್ಲಿ?

ಪಾಪವೇ ಸಾವಿನ ವಿಷಕೊಂಡಿ, ಪಾಪಕ್ಕೆ ಶಕ್ತಾಯಧಾರ ಶಾಸ್ತ್ರ ವಿಧಿಗಳೇ ಆದರೆ ನಮ್ಮ ಪ್ರಭುವಾದ ಯೇಸುಕ್ರಿಸ್ತರ ಮುಖಾಂತರ ನಮಗೆ ಜಯವನ್ನು ದೊರಕಿಸಿಕೊಟ್ಟಿರುವ ದೇವರಿಗೆ ಸ್ತೋತ್ರ ಸಲ್ಲಲಿ!" (1 ಕೊರಿಂಥ 15: 55:56)

ಪಿತಾಮಹ ದಾವೀದರಸನು ಕೀರ್ತನಾ ಗ್ರಂಥದಲ್ಲಿ ನುಡಿದಂತೆ "ಆತನನ್ನು ಪಾತಾಳಕ್ಕೆ ದೂಡಲಿಲ್ಲ' ದೇಹ ಕೊಳೆತು ಹೋಗಲು ಬಿಡಲಿಲ್ಲ, (ಕೀ 16:10) ಈ ಯೇಸುವನ್ನೇ ದೇವರು ಪುನರುತ್ಥಾನ ಗೊಳಿಸಿದ್ದಾರೆ, ಈ ಘಟನೆಗೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ" (ಪ್ರೇಕಾ 2:31-32) ಎನ್ನುತ್ತಾರೆ ಸಂತ ಪೇತ್ರರು, ಹಾಗೆಯೇ ಸಂತ ಪೌಲರು ನುಡಿಯುತ್ತಾರೆ." ಪವಿತ್ರ ಗ್ರಂಥದಲ್ಲಿ ಹೇಳಿರುವ ಪ್ರಕಾರ ಕ್ರಿಸ್ತಯೇಸು ನಮ್ಮ ಪಾಪಗಳ ಪರಿಹಾರಕ್ಕಾಗಿ ಪ್ರಾಣತ್ಯಾಗ ಮಾಡಿದರು. ಅವರನ್ನು ಭೂ ಸ್ಥಾಪನೆ ಮಾಡಲಾಯಿತು. ಅದೇ ಗ್ರಂಥದ ಪ್ರಕಾರ ಮೂರನೇದಿನ ಅವರು ಪುನರುತ್ಥಾನ ಹೊಂದಿದರು..........(1ಕೊರಿ 15:4-3-8)

"ಕ್ರಿಸ್ತ ಯೇಸು ಪುನರುತ್ಥಾನರಾಗಲಿಲ್ಲವೆಂದರೆ ನಮ್ಮ ಬೋಧನೆ ಬರಿದು, ನಿಮ್ಮ ವಿಶ್ವಾಸವೂ ಬರಿದು, "ಕ್ರಿಸ್ತಯೇಸುವೇ ಪುನರುತ್ಥಾನ ಹೊಂದಿಲ್ಲ ಎಂದ ಮೇಲೆ ನಿಮ ವಿಶ್ವಾಸವೇ ನಿರರ್ಥಕ, ಮತ್ತು ನೀವಿನ್ನೂ ನಿಮ್ಮ ಪಾಪಗಳಲ್ಲಿಯೇ ಮುಳುಗಿದ್ದೀರಿ (1 ಕೊರಿ 15:14,17)

ಈ ಸಾಕ್ಷ್ಯಾದಾರಿತ ವಾಕ್ಯಗಳೇ ಕ್ರೈಸ್ತ ಧರ್ಮದ ಸರ್ವ ಸಂಪೂರ್ಣ ವಿಶ್ವಾಸ ಹಾಗೂ ಭರವಸೆಯ ಬುನಾದಿಗಳು ಏಕೆಂದರೆ ಪ್ರಭು ಕ್ರಿಸ್ತ ಪುನರುತ್ಥಾನ ನಡೆಯದೇ ಇದ್ದ ಪಕ್ಷದಲ್ಲಿ ಕ್ರೈಸ್ತಧರ್ಮ ಒಂದು ಶೂನ್ಯ ಕನಸ್ಸಾಗುತ್ತಿತ್ತು. "ದೈವ ಯೋಜನೆಯಂತೆಯೇ ಸಕಲವೂ ಸಂಭವಿಸುತ್ತದೆ. (ಎಫೆಸಿ 1:11) ಎನ್ನುವುದಕ್ಕೆ ಈ ಎರಡು ಘಟನೆಗಳನ್ನು ಉಲ್ಲೇಖಿಸಿ ಉದಾಹರಿಸಬಹುದು.

1. ಪಿಲಾತನು ಒಂದು ಫಲಕದ ಮೇಲೆ, ನಜರೇತಿನ ಯೇಸು ಯೆಹೂದ್ಯರ ಅರಸ ಎಂದು ಬರೆಸಿ ಶಿಲುಬೆಯ ಮೇಲ್ಗಡೆ ಇರಿಸಿದರು (ಯೊವಾನ್ನ 19:19)

2. ಮುಖ್ಯ ಯಾಜಕರು ಮತ್ತು ಪರಿಸಾಯರು ಕೂಡಿ ಪಿಲಾತನ ಬಳಿಗೆ ಬಂದು "ಸ್ವಾಮಿ ಆ ಮೋಸಗಾರ ಬದುಕಿದ್ದಾಗ ಮೂರು ದಿನಗಳಾದ ಮೇಲೆ ನಾನು ಪುನರ್ಜೀವಂತನಾಗಿ ಏಳುವೆನು ಎಂದು ಹೇಳಿದ್ದು ನಮಗೆ ಜ್ಞಾಪಕದಲ್ಲಿದೆ ಆದ್ದರಿಂದ ಮೂರನೆಯ ದಿನದ ತನಕ ಅವನ ಸಮಾದಿಗೆ ಭದ್ರವಾದ ಕಾವಲಿರಿಸಲು ಅಪ್ಪಣೆ ಯಾಗಬೇಕು, ಇಲ್ಲದಿದ್ದರೆ ಅವನ ಶಿಷ್ಯರು ಅವನನ್ನು ಕದ್ದುಕೊಂಡು ಹೋಗಿ, ಸತ್ತವನು ಬದುಕಿ ಬಂದಿದ್ದಾನೆ ಎಂದು ಜನರಿಗೆ ಹೇಳಬಹುದು. ಆಗ ಮೊದಲನೆಯ ಮೋಸಕ್ಕಿಂತ ಕಡೆಯದೇ ಕಡು ಮೋಸವಾದೀತು. ಎಂದು ಕೇಳಿ ಕೊಂಡರು. ಇಾತನು ಅವರಿಗೆ ಕಾವಲುಗಾರರು ಇದ್ದಾರಲ್ಲವೇ ಹೋಗಿ ನಿಮಗೆ ಬೇಕಾದಂತೆ ಭದ್ರ ಪಡಿಸಿಕೊಳ್ಳಿ ಎಂದನು. ಅವರು ಹೋಗಿ ಸಮಾಧಿಯ ಕಲ್ಲಿಗೆ ಮುದ್ರೆ ಹಾಕಿ ಕಾವಲಿರಿಸಿ, ಸಮಾಧಿಯನ್ನು ಸುಭದ್ರ ಪಡಿಸಿದರು. (ಮತ್ತಾಯ 27:62-66)

ಪಿಲಾತನು ಶಿಲುಬೆಯ ಮೇಲೆ ನಜರೇತಿನ ಯೇಸು, ಯೊಹೊದ್ಯರ ಅರಸ ಎಂಬ ಫಲಕ ಹಾಕಿ ಯೇಸುವಿನ ನಿಜ ಸ್ವರೂಪ ತಿಳಿಸಿದ್ದು ಒಂದಾದರೆ, ಸಮಾಧಿಗೆ ಸೈನ್ಯದ ಕಾವಲು ಹಾಕಿಸಿದ್ದು ಎರಡನೆಯ ಸೂಚನೆ ಶಿಲುಬೆಯ ಮೇಲೆ ಹಾಕಿದ ಫಲಕವನ್ನು ಬದಲಾಯಿಸಬೇಕೆಂದು ಮುಖ್ಯಯಾಜಕರು ವಾದಿಸಿಕೊಂಡರೂ ಅದನ್ನು ತಿರಸ್ಕರಿಸಿದ ಪಿಲಾತ



(ಯೊವಾನ್ನ (19:22) ವಿಚಿತ್ರ ವೆಂಬಂತೆ ಸಮಾಧಿಗೆ ಕಾವಲು ಹಾಕಬೇಕೆಂದಾಗ ಒಪ್ಪಿಕೊಂಡಿದ್ದ. ಯೇಸುವಿನ ಪಾರ್ಥಿವ ಶರೀರವನ್ನು ಕದ್ದುಕೊಂಡು ಹೋಗಲು ಬಿಡದ ಪಿಲಾತ ಈ ಮೂಲಕ ಪುನರುತ್ಥಾನಕ್ಕೆ ಪ್ರಥಮ ಸಾಕ್ಷಿಯಂತಿದ್ದಾನೆ. ಒಂದು ವೇಳೆ ಕಾವಲಿಲ್ಲದ ಸಮಾಧಿ ಖಾಲಿಯಾಗಿದ್ದರೆ ನೂರಾರು ಕಟ್ಟುಕತೆಗಳು ನಿಜವೆಂಬಂತೆ ಹೆಣೆಯಲ್ಪಡುತ್ತಿದ್ದವು. ಪುನರುತ್ಥಾನಕ್ಕೂ ಬಲವಾದ ಸಾಕ್ಷಿಯಿರುತ್ತಿರಲಿಲ್ಲ. ಈ ಘಟನೆ ಕೂಡ ಪ್ರೇಷಿತರ ಬೋಧನೆಗೆ ವಿಶೇಷ ಸಾಕ್ಷಿ ನೀಡಿ ದೃಡತೆಯನ್ನು ತಂದುಕೊಡುತ್ತದೆ. ಪ್ರೇಷಿತರಿಗೆ ಯೇಸುವಿನ ಪುನರುತ್ಥಾನ ಪಂಚೇಂದ್ರಿಯಗಳ ಅನುಭವಕ್ಕಿಂತ ಭಿನ್ನವಾಗಿತ್ತು. (ಆಂತರ್ಯ ಭಾಗ1)

ಸಮಾಧಿಗೆ ಭದ್ರತೆಯ ಕಾವಲಿರಿಸಿಯೂ ಕೆಲವು ಯೆಹೂದ್ಯರ ಅಪಪ್ರಚಾರ ಕಾರ್ಯ ನಡೆಯಿತು (ಮತ್ತಾಯ 28:11-15) ಆದರೆ ಸತ್ಯ ಎಂದಿಗೂ ಸತ್ಯವೇ, ಸತ್ಯಕ್ಕೆ ಜಯವಾಯಿತು. ಆ ಸತ್ಯಮೇವ ಜಯತೇಃಯ ಸ್ಮರಣೆಯೇ ನಮ್ಮ ಪುನರುತ್ಥಾನದ ಪಾಸ್ಖ ಮಹೋತ್ಸವದ ನೈಜ ಸಡಗರ.

ಪುನರುತ್ಥಾನಕ್ಕೆ ಇಂಗ್ಲೀಷ್‌ನ ಈಸ್ಟರ್ ಪದವು ಜರ್ಮನ್‌ನ ಪದದಿಂದ ಬಂದಿದೆ. ಸೂರ್ಯ ಮೂಡುವ ದಿಕ್ಕನ್ನು ಈ ಪದ ಸೂಚಿಸುತ್ತದೆ. ಅಂದರೆ ವಸಂತದ ಸೂರ್ಯನನ್ನು ಪ್ರಭುವಿನ ಪುನರುತ್ಥಾನಕ್ಕೆ ಹೋಲಿಸಲಾಗಿದೆ ಕ್ರಿಸ್ತನಲ್ಲಿ ವಿಶ್ವಾಸ ವಿಟ್ಟವರೆಲ್ಲರ ಬದುಕು ವಸಂತ ಕಾಲದಂತೆ ಕಂಗೊಳಿಸುತ್ತದೆ ಎಂಬುದು ಇದರ ಸೂಚಕ.

ಪುನರುತ್ಥಾನದ ಹಬ್ಬದ ದಿನಾಂಕವನ್ನು ನಿಖರವಾಗಿ ನಿರ್ಧರಿಸಿದ್ದು ಕ್ರಿ.ಶ. 325ರ ನೈಸಿಯಾ ಪರಿಷತ್ತಿನಲ್ಲಿ ಈ ನಿರ್ಧಾರದ ಪ್ರಕಾರ ಪ್ರತಿವರ್ಷ ವಸಂತಕಾಲದ ನಂತರದ ಪೂರ್ಣಿಮಿಯ ನಂತರ ಬರುವ ಭಾನುವಾರದಲ್ಲಿ ಪುನರುತ್ಥಾನದ ಹಬ್ಬವನ್ನು ಆಚರಿಸಲಾಗುತ್ತದೆ. ಇದು ಸಾಮಾನ್ಯವಾಗಿ ಮಾರ್ಚ್ 22ರಿಂದ ಏಪ್ರಿಲ್ 25ರ ಒಳಗೆ ಬರುತ್ತದೆ.

ಈ ಪ್ರಸ್ತುತ ಈ ವರ್ಷ ಮಾರ್ಚ್ 31ರಂದು ಪ್ರಭುವಿನ ಪುನರುತ್ಥಾನದ ಹಬ್ಬ. ಪ್ರಸ್ತುತ ಪುನರುತ್ಥಾನದ ಸಂದೇಶ ಹೀಗೆದೆ.

ಕ್ರಿಸ್ತ ಪುನರುತ್ಥಾನಗೊಂಡಿದ್ದಾರೆ.

ಸುಖ ಬೇಕೆ ? ಕಾಯುತ್ತಿರುವ ಕರ್ತವ್ಯಗಳನ್ನು ಆಗಿಂದಾಗ್ಗೆ ಮಾಡಿ ಮುಗಿಸಿಬಿಡಿ.

ಆದ್ದರಿಂದ ಅವರು ನಿಜವಾಗಲೂ ದೇವರು, ಪ್ರಭು ಕ್ರಿಸ್ತ ಪುನರುತ್ಥಾನ ಗೊಂಡಿದ್ದಾರೆ. ಆದ್ದರಿಂದ ನಮ್ಮ ಪಾಪಗಳು ಪರಿಹಾರವಾಗಿದೆ.

ಪ್ರಭು ಕ್ರಿಸ್ತ ಪುನರುತ್ಥಾನ ಗೊಂಡಿದ್ದಾರೆ. ನಾವೆಲ್ಲಾ ದೇವರ ಮಕ್ಕಳಾಗಿದ್ದೇವೆ. ಪ್ರಭುಕ್ರಿಸ್ತ ಪುನರುತ್ಥಾನಗೊಂಡಿದ್ದಾರೆ.

ಇಡೀ ಮಾನವಕುಲ ಸಹೋದರರಂತೆ ಬಾಳಲು ಕರೆಯಲ್ಪಟ್ಟಿವೆ. ಪ್ರಭುಕ್ರಿಸ್ತ ಪುನರುತ್ಥಾನಗೊಂಡಿದ್ದಾರೆ.

ನಾವು ಯಾವುದೇ ದುಷ್ಟ. ಆರೋಪಿ ಶಕ್ತಿಗಳಿಗೆ ಭಯಪಡುವ ಅಗತ್ಯವಿಲ್ಲ. ಏಕೆಂದರೆ ಎಲ್ಲಾ ದುಷ್ಟ ಶಕ್ತಿಗಳನ್ನು ಅವರು ಜಯಿಸಿದ್ದಾರೆ.

ಪ್ರಭುಕ್ರಿಸ್ತ ಪುನರುತ್ಥಾನ ಗೊಂಡಿದ್ದಾರೆ. ಆದ್ದರಿಂದ ನಾವೂ ಅವರೊಂದಿಗೆ ಪುನರುತ್ಥಾನ ಗೊಳ್ಳುತ್ತೇವೆ ನಮ್ಮ ಸಾವು ಅಂತಿಮವಲ್ಲ

(ಪವಿತ್ರವಾರ ಆಧಾರಿತ)

"ನೀವು ಯೇಸುಕ್ರಿಸ್ತರೊಂದಿಗೆ ಪುನರುತ್ಥಾನ ಹೊಂದಿರುವುದಾದರೆ ಸ್ವರ್ಗೀಯ ವಿಷಯಗಳ ಕಡೆಗೆ ಗಮನ ಕೊಡಿ.........."

ನಿಮ್ಮ ಮನಸ್ಸು ಪ್ರಾಪಂಚಿಕ ವಿಷಯಗಳ ಮೇಲೆ ಅಲ್ಲ. ಸ್ವರ್ಗೀಯ ವಿಷಯಗಳ ಮೇಲೆ ಕೇಂದ್ರೀಕೃತವಾಗಿರಲಿ... (ಕೊಲೊಸ್ಸೆ 3:1-4) ಸಮಸ್ತ ಪರಮತ ಸಹಿಷ್ಣುತೆಯ, ವಿಶ್ವ ವ್ಯಾಪಕತ್ವದ ವಿಶಾಲ ಹೃದಯದ, ಉದಾರಬುದ್ಧಿಯ, ಸಾರ್ವತ್ರಿಕ ಪವಿತ್ರ ಕ್ರೈಸ್ತ ಜನಾಂಗಕ್ಕೆ ಪ್ರಭುಕ್ರಿಸ್ತರ ಪುನರುತ್ಥಾನದ ಹಬ್ಬದ ಹೃತ್ಪೂರ್ವಕ ಶುಭ ಶುಭಾಶಯಗಳು. ❖

**ಸುವಾರ್ತಾ ಪ್ರಸಾರ ಭಾನುವಾರ -2012**

**ವಿವಿಧ ಧರ್ಮಕೇಂದ್ರ ಹಾಗೂ ಸಂಸ್ಥೆಗಳಿಂದ ಸಂಗ್ರಹವಾದ ಹಣದ ವಿವರ :**

| ಕ್ರ.ಸಂ. | ಧರ್ಮಕೇಂದ್ರ | ದೇಣಿಗೆ | ಕ್ರ.ಸಂ. | ಧರ್ಮಕೇಂದ್ರ | ದೇಣಿಗೆ |
|---|---|---|---|---|---|
| 1. | ಅಲ್ಫೋನ್ಸ್ ನಗರ | 25,000-00 | 21. | ಕಡಬಗೆರೆ | 7,140-00 |
| 2. | ಅರೇಹಳ್ಳಿ | 30,820-00 | 22. | ಕಡೂರು | 22,270-00 |
| 3. | ಅರಸೀಕೆರೆ | 22,000-00 | 23. | ಕಳಸ | 20,000-00 |
| 4. | ಬಾಳೆಹೊನ್ನೂರು | 40,000-00 | 24. | ಕಲ್ಲತ್ತಿಪುರ | 7,000-00 |
| 5. | ಬಣಕಲ್ | 11,000-00 | 25. | ಕೊಪ್ಪ | 55,000-00 |
| 6. | ಬಸರೀಕಟ್ಟೆ | 30,000-00 | 26. | ಲಕ್ಕವಳ್ಳಿ | 6,100-00 |
| 7. | ಬೇಲೂರು | 10,250-00 | 27. | ಮಗ್ಗೆ | 40,000-00 |
| 8. | ಬಸ್ಕಲ್ | 16,800-00 | 28. | ಮಾಗುಂಡಿ | 28,000-00 |
| 9. | ಪ್ರಧಾನಾಲಯ, ಚಿಕ್ಕಮಗಳೂರು | 2,20,000-00 | 29. | ಮಲ್ಲಂದೂರು | 15,500-00 |
| 10. | ಜ್ಯೋತಿನಗರ | 1,20,825-00 | 30. | ಮರಿಯಾನಗರ | 19,000-00 |
| 11. | ಕೂವೆ | 26,000-00 | 31. | ಮೂಡಿಗೆರೆ | 40,000-00 |
| 12. | ದಾಸಾಪುರ | 8,000-00 | 32. | ಮತಸಾಗರ | 15,000-00 |
| 13. | ಫಾತಿಮಾಪುರ | 20,000-00 | 33. | ಎನ್.ಆರ್. ಪುರ | 19,000-00 |
| 14. | ಗಾಡೇನಹಳ್ಳಿ | 25,000-00 | 34. | ಸಕಲೇಶಪುರ | 27,000-00 |
| 15. | ಗೋಣಿಬೀಡು | 12,000-00 | 35. | ಸಂತವೇರಿ | 6,500-00 |
| 16. | ಹಾಸನ | 24,135-00 | 36. | ಶೆಟ್ಟಿಹಳ್ಳಿ | 16,000-00 |
| 17. | ಹಿರೇಬೈಲು | 24,000-00 | 37. | ಸುಂಡೇಕೆರೆ | 12,175-00 |
| 18. | ಹೆಚ್. ಎನ್. ಪುರ | 4,430-00 | 38. | ತರೀಕೆರೆ | 10,000-00 |
| 19. | ಜಯಪುರ | 37,000-00 | 39. | ವಿಜಯಪುರ | 44,000-00 |
| 20. | ಜೋಸೆಫ್‌ನಗರ | 9,050-00 | 40. | ಕೂದುವಳ್ಳಿ | 7,312-00 |
| | | | | ಒಟ್ಟು | **11,33,127-00** |

| ಕ್ರ.ಸಂ. | ಸಂಸ್ಥೆ | ದೇಣಿಗೆ | ಕ್ರ.ಸಂ. | ಸಂಸ್ಥೆ | ದೇಣಿಗೆ |
|---|---|---|---|---|---|
| 1. | ಬಿಜ್ರಿತ್ ಕಾನ್ವೆಂಟ್, ಜ್ಯೋತಿನಗರ | 2,000-00 | 12. | ಪ್ರೇಮ ಜ್ಯೋತಿ ಕಾನ್ವೆಂಟ್, ಕಡೂರು | 1,000-00 |
| 2. | ಹೋಲಿಕ್ರಾಸ್ ಕಾನ್ವೆಂಟ್, ಬಣಕಲ್ | 500-00 | 13. | ಸೆಕ್ರೇಡ್ ಹಾರ್ಟ್ ಕಾನ್ವೆಂಟ್, ಹಿರೇಬೈಲು | 500-00 |
| 3. | ಸಲೇಷಿಯನ್ ಸಿಸ್ಟರ್, ಜೋಸೆಫನಗರ | 3,000-00 | 14. | ಜಯಪುರ ಕಾನ್ವೆಂಟ್ | 1,000-00 |
| 4. | ಮಾರ್ಥಸ್ ಕಾನ್ವೆಂಟ್, ಮೂಡಿಗೆರೆ | 1,000-00 | 15. | ದಾಸಾಪುರ ಕಾನ್ವೆಂಟ್ | 1,000-00 |
| 5. | ಹೋಲಿಕ್ರಾಸ್ ಕಾನ್ವೆಂಟ್, ಅರಸೀಕೆರೆ | 500-00 | 16. | ಸಕಲೇಶಪುರ ಕಾನ್ವೆಂಟ್ | 1,000-00 |
| 6. | ಮೇರಿಸ್ ಕಾನ್ವೆಂಟ್, ಅರಸೀಕೆರೆ | 500-00 | 17. | ಕೊಪ್ಪ ಕಾನ್ವೆಂಟ್ | 800-00 |
| 7. | ಶಾಂತಿ ನಿವಾಸ್ ಕಾನ್ವೆಂಟ್, ಬೆಟ್ಟದಮನೆ | 500-00 | 18. | ಅರೇಹಳ್ಳಿ ಕಾನ್ವೆಂಟ್ | 1,000-00 |
| 8. | ಜೀವನ್‌ಧಾರ ಕಾನ್ವೆಂಟ್, ಹಾಸನ | 2,000-00 | 19. | ಯೇಸು ಸಭೆ, ಹಾಸನ | 2,000-00 |
| 9. | ಫಿಲೋಮಿನಾ ಕಾನ್ವೆಂಟ್, ಹಾಸನ | 3,000-00 | 20. | ಮೌಂಟ್‌ಫೋರ್ಟ್, ಕಣತಿ | 1,000-00 |
| 10. | ಸೆಂ. ಆ್ಯನ್ಸ್ ಕಾನ್ವೆಂಟ್, ಪಾತಿಮಾಪುರ | 500-00 | 21. | ಇನ್‌ಫೆಂಟ್ ಜೀಸಸ್, ಕದ್ರಿಮಿದ್ರಿ | 1,000-00 |
| 11. | ಹೋಲಿ ಕ್ರಾಸ್ ಕಾನ್ವೆಂಟ್, ಬೇಲೂರು. | 1,500-00 | | | **25,300-00** |

ನಿರ್ದೇಶಕರು, ಜಗದ್ಗುರುಗಳ ಸುವಾರ್ತಾ ಸಭೆ, ಚಿಕ್ಕಮಗಳೂರು ಧರ್ಮಕ್ಷೇತ್ರ



ಕರ್ತವ್ಯಗಳನ್ನು ಮಾಡು, ಕೀರ್ತಿ ನಿನ್ನ ಕಾಲಡಿಯಲ್ಲಿ ಬೀಳುತ್ತದೆ ಗೌರವ ತಾನೇ ಹುಡುಕಿಕೊಂಡು ಬರುತ್ತದೆ.

# ಅಲ್ಪಾವಧಿಯ ಪೋಪ್, ದೀರ್ಘಾವಧಿಯ ವರ್ಚಸ್ಸು : ಪೋಪ್ ಬೆನೆಡಿಕ್ಟ್ XVI

ಫೆಬ್ರವರಿ 11 ರಂದು ಎಲ್ಲಾ ಜನಪ್ರಿಯ ದಿನಪತ್ರಿಕೆಗಳು ಒಂದು ಸುದ್ದಿಯನ್ನು ಬಿತ್ತರಿಸಿದ್ದವು. ಅದೊಂದು ಅಸಾಧಾರಣ ಸುದ್ದಿ. ಇಡೀ ವಿಶ್ವವೇ ಅದನ್ನು ಅಶ್ಚರ್ಯದಿಂದ ಕಂಡಿತು. ಮಾತ್ರವಲ್ಲ ವಿಶ್ವದಾದ್ಯಂತ ಕಥೋಲಿಕ ಸಮುದಾಯಕ್ಕೆ ಸಮ್ಮತಿಸಲು ಅಸಾಧ್ಯವಾಯಿತು. ಜಗತ್ತಿನಲ್ಲಿರುವ 150 ಕೋಟಿ ಕಥೋಲಿಕರಿಗೆ ಈ ಸುದ್ದಿಯು ಅರಗಿಸಿಕೊಳ್ಳಲಾಗದ ವಿಚಾರವಾಗಿತ್ತು. ಕಥೋಲಿಕ ಧರ್ಮಸಭೆಯ ವಿಶ್ವಗುರು ಹದಿನಾರನೇ ಬೆನೆಡಿಕ್ಟ್‌ರವರು ಅನಾರೋಗ್ಯ ದಿಂದಾಗಿ 'ರಾಜಿನಾಮೆ ನೀಡುತ್ತಿದ್ದೇನೆ', ಎಂದು ವಿನಮ್ರತೆಯಿಂದ ತಮ್ಮ ಪದತ್ಯಾಗ ವನ್ನು ಘೋಷಿಸಿದರು.

**ಪದವಿ ತ್ಯಜಿಸಿ ಆದರು ಮಾದರಿ :**

ಕಥೋಲಿಕ ಧರ್ಮಸಭೆಯ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಐದು ಮಂದಿ ಜಗದ್ಗುರುಗಳು ರಾಜೀನಾಮೆ ನೀಡಿರುತ್ತಾರೆ. ಪೋಪ್ ಗ್ರೆಗರಿ XII, ರವರು 600 ವರ್ಷಗ ಹಿಂದೆ, ಕ್ರಿ. ಶ. 1415 ರಲ್ಲಿ ರಾಜೀನಾಮೆ ಕೊಟ್ಟಿರುವುದು ಹೊರತುಪಡಿಸಿ ಪೋಪ್ ಬೆನೆಡಿಕ್ಟ್ XVIರ ರಾಜೀನಾಮೆಯೇ ನಮ್ಮ ಮುಂದೆ ನಿಲ್ಲುತ್ತದೆ. ಧರ್ಮಸಭೆಯ ಶಾಸನ ಸಂಹಿತೆ (ಕ್ಯಾನನ್ ಲಾ, ಸಂಖ್ಯೆ 332, 2) ತಿಳಿಸುವಂತೆ 'ಜಗದ್ಗುರುಗಳು ತಮ್ಮ ಪದವಿಗೆ ರಾಜಿನಾಮೆಯನ್ನು ಸಲ್ಲಿಸಿದರೆ, ಅದು ಸಿಂಧುವಾಗಲು ಒತ್ತಡವಿಲ್ಲದೆ ಮಾಡುವುದು ಮತ್ತು ಸೂಕ್ತವಾಗಿ ಬಹಿರಂಗ ಪಡಿಸುವುದು ಅಗತ್ಯ...'' ಇಂತಹ ನಿಯಮವಿದ್ದರು ಪೇತ್ರನ ಉತ್ತಾರಾಧಿಕಾರಿಯಾದ ಸರ್ವೋಚ್ಛ ಪದವಿಯನ್ನು ತ್ಯಜಿಸುವುದು ಸಾಮಾನ್ಯ ಸಂಗತಿಯಲ್ಲ. ಕೊನೆಯುಸಿರು ಇರುವವರೆಗೂ ಅಧಿಕಾರದಲ್ಲಿ ಇರಬಹುದಾದ ಸ್ಥಾನವಿದು. ಇಂತಹ ಗೌರವವನ್ನು ಬಿಡುವುದು ಮಹಾತ್ಯಾಗವೇ ಹೌದು. ಪೋಪ್ ಬೆನೆಡಿಕ್ಟ್‌ರಿಗೆ ವಿಶ್ವಗುರುಗಳ ಪದವಿಯಲ್ಲಿ ಇನ್ನೂ ಮುಂದುವರಿಯಲು ಯಾವ ಅಡೆತಡೆಯೂ ಇರಲಿಲ್ಲ. ಆದರೂ ಅವರು ರಾಜೀನಾಮೆಯನ್ನು ಕೊಟ್ಟು, ಪೋಪ್ ಎಂಬ ಅಂಕಿತವನ್ನು ಕಳಚಿ, ಫೆಬ್ರವರಿ 28 ರಿಂದ ಕೇವಲ ಜೋಸೆಫ್ ಆಲೋಷಿಯಸ್ ರಾಚ್‌ಜಿಂಗರ್ ಆಗಿ ಉಳಿಯಲಿದ್ದಾರೆ.

ಏಪ್ರಿಲ್ 16, 1927ರಲ್ಲಿ ಜನಿಸಿದ ಜೋಸೆಫ್ ರಾಚ್‌ಜಿಂಗರ್‌ರವರ ತಂದೆ ಜೋಸೆಫ್ ರಾಚ್‌ಜಿಂಗರ್ ಸೀನಿಯರ್ ಮತ್ತು ತಾಯಿ ಮರಿಯ ರಾಚ್‌ಜಿಂಗರ್ ಮೂವರು ಮಕ್ಕಳಲ್ಲಿ ಹಿರಿಯ ಮಗನಾಗಿದ್ದ ಇವರು 1951, ಜೂನ್ 29 ರಂದು ಯಾಜಕ ದೀಕ್ಷೆಯನ್ನು ಪಡೆದು, ಧರ್ಮಸಭೆಯ ನಾನಾ ಹುದ್ದೆಗಳನ್ನು ಅಲಂಕರಿಸಿದರು. ಏಪ್ರಿಲ್ 19, 2005 ರಲ್ಲಿ ಕಥೋಲಿಕ ಧರ್ಮಸಭೆಯ 265ನೇ ಜಗದ್ಗುರುಗಳಾಗಿ ಆಯ್ಕೆಯಾಗುವವರೆಗೆ, ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದರು. ದೈವಿಕ ಶಾಸ್ತ್ರದಲ್ಲಿ ಉನ್ನ ಶಿಕ್ಷಣ ಮುಗಿಸಿ, ಹಲವು ವಿಶ್ವವಿದ್ಯಾಲಯಗಳಲ್ಲಿ ಬೋಧಿಸಿದರು. ಜರ್ಮನಿಯ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಿದ ನಂತರ 1976-77ರಲ್ಲಿ ರೆಜೆನ್ಸ್‌ಲ ಬರ್ಗ್ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ನಂತರ ಮ್ಯೂನಿಕ್ ಮತ್ತು ಫ್ರೀಸಿಂಗ್‌ನ ಮಹಾಧರ್ಮಾಧ್ಯಕ್ಷರಾಗಿ ನೇಮಕಗೊಂಡು 1977 ಕಾರ್ಡಿನಲ್ ಸ್ಥಾನಕ್ಕೆ, ಅಂದಿನ ವಿಶ್ವಗುರು ಆರನೇ ಪೌಲ್‌ರಿಂದ ಪಾತ್ರರಾದರು. 1981ರಿಂದ ವ್ಯಾಟಿಕನಿನ ವಿವಿಧ ಇಲಾಖೆಗಳಲ್ಲಿ ಸೇವೆ ಹಾಗೂ ಕಾರ್ಡಿನಲ್‌ಗಳ ಸಭೆಯ ಪ್ರಮುಖರಾಗಿಯೂ ಕಾರ್ಯನಿರ್ವ ಹಿಸಿದರು. ಪೋಪ್ ದ್ವಿತೀಯ ಜಾನ್‌ಪೌಲರ ಕಾಲದಲ್ಲಿ ಅವರ ಆಪ್ತವಲಯದಲ್ಲಿ ಕಂಡು ಬಂದಿರುವುದು ಮಾತ್ರವಲ್ಲ ಧರ್ಮ ಮತ್ತು ವಿಶ್ವಾಸದ ವಿಚಾರಗಳಲ್ಲಿ ತಮ್ಮ ಪ್ರಭಾವವನ್ನು ಮೂಡಿಸಿದ್ದರು.

**ಕ್ರೈಸ್ತ ಮೌಲ್ಯಗಳ ಪ್ರಭಾವಿ ಪ್ರತಿಪಾದಕರು:**

ಪೋಪ್ ಬೆನೆಡಿಕ್ಟರು, ಅವರ ನಿಕಟ ಪೂರ್ವ ಪೋಪ್, ದ್ವಿತೀಯ ಜಾನ್‌ಪೌಲ್ ರಂತೆ ಪಾರಂಪರ್ಯವಾಗಿರುವ ಕ್ರೈಸ್ತ ಸಿದ್ಧಾಂತ ಮತ್ತು ಮೌಲ್ಯಗಳನ್ನು ಪ್ರತಿಪಾದಿಸುವುದರಲ್ಲಿ ಮತ್ತು ಪ್ರತಿರೋಧಿಸುವುದರಲ್ಲಿ ಕಟ್ಟಾಳು. ತಮ್ಮ ಸೇವಾಡಳಿತ ಕಾಲದಲ್ಲಿ, ಪಾಶ್ಚಾತ್ಯ ದೇಶಗಳ ಅತಿಯಾದ ಜಾತ್ಯಾತೀತ ತತ್ವಗಳ ಅಳವಡಿಕೆಯನ್ನು ವಿರೋಧಿಸಿದರು. ಪಾಶ್ಚಾತ್ಯ ದೇಶಗಳು ತಮ್ಮ ಕ್ರೈಸ್ತ ಮೂಲಕ್ಕೆ ಮರಳಿ ಬರುವಂತೆ ಕರೆಯನ್ನು ನೀಡಿದರು; ಕ್ರೈಸ್ತ ಮೌಲ್ಯಗಳಲ್ಲಿ ನಾಗರೀಕ ಸಮಾಜವನ್ನು ಪುನರ್ ನಿರ್ಮಿಸಲು ತಿಳಿಸಿದರು. ವಸ್ತುನಿಷ್ಠ ಸತ್ಯದ ನಿರಾಕರಣೆ ಮತ್ತು ವಿಶೇಷವಾಗಿ ನೈತಿಕ ಸತ್ಯಗಳ ನಿರಾಕರಣೆಯು ಆಧುನಿಕ ಯುಗದ ಕೇಂದ್ರ ಸಮಸ್ಯೆಯೆಂಬುದನ್ನು ಜಗತ್ತಿಗೆ ಸಾರಿದರು. 21ನೇ ಶತಮಾನದಲ್ಲಿ ಸತ್ಯವನ್ನು ಪರಿಸ್ಥಿತಿ, ವ್ಯಕ್ತಿ, ಕಾಲಕ್ಕೆ ಅನುಗುಣವಾಗಿ ಪರಿಗಣಿಸಿ ವಸ್ತುನಿಷ್ಠತೆಯನ್ನು ನಿರಾಕರಿಸಲಾಗುತ್ತಿದೆ. ಈ ಮನೋಧರ್ಮಕ್ಕೆ ಪ್ರತಿಯಾಗಿ ಕಥೋಲಿಕ ಧರ್ಮಸಭೆಯ ಅಗತ್ಯತೆ ಮತ್ತು ದೈವಿಕ ರಕ್ಷಣಾ ಪ್ರೀತಿಯ ಅರ್ಥವನ್ನು ತಮ್ಮ ಬರವಣಿಗೆಗಳಲ್ಲಿ ಬೋಧಿಸಿದ್ದಾರೆ.



ಎಂ. ರಿಚರ್ಡ್ ಪಾಯ್ಸ್,
ಚಿತ್ರದುರ್ಗ

ತಮ್ಮ ಪರಿಪತ್ರಗಳಾದ 'ದೆಯುಸ್ ಕಾರಿಥಾಸ್ ಎಸ್ತ್' (ದೇವರು ಪ್ರೀತಿಯಾಗಿದ್ದಾರೆ) 'ಸ್ಪೆಸ್ ಸಾಲ್ವಿ' (ಭರವಸೆಯಲ್ಲಿ ರಕ್ಷಣೆ) ಮತ್ತು 'ಕಾರಿಥಾಸ್ ಇನ್ ವೆರಿತಾತಿಸ್'ಗಳಲ್ಲಿ (ಸತ್ಯದಲ್ಲಿ ಪ್ರೀತಿ) ಕ್ರೈಸ್ತ ರಕ್ಷಣೇ ತತ್ವಗಳನ್ನು ವಿಶ್ವ ಜನತೆಗೆ ನೀಡಿದ್ದಾರೆ. ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವವರ ಜಾತ್ಯಾತೀಯ ಒಲವಿನ ಬಗ್ಗೆ ತಿಳಸುತ್ತಾ, ಪ್ರಾರ್ಥನೆಯ ಅಗತ್ಯವನ್ನು ಪುನರುಚ್ಚರಿಸಿದ್ದಾರೆ.

ಅತೀ ಹಿರಿಯ ವಯಸ್ಸಿನಲ್ಲಿ ಉನ್ನತ ಸ್ಥಾನಕ್ಕೆ ಬಂದು ಜ್ಞಾನದಲ್ಲಿ ಹಿರಿತನವನ್ನು ಮೆರೆದು ಸಲಿಂಗಕಾಮ, ಕೃತಕ ಗರ್ಭಧಾರಣೆ, ಕ್ರೈಸ್ತಗುರುಗಳ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಕುರಿತು ಮುಕ್ತವಾಗಿ ಮಾತಾಡಿದ್ದು ಅವರನ್ನು ಭಿನ್ನತೆಯ ಸಾಲಿಗೆ ಸೇರಿಸುತ್ತದೆ. ದ್ವಿತೀಯ ವ್ಯಾಟಿಕನ್ ಮಹಾಸಭೆಯಲ್ಲಿ ಸಕ್ರಿಯರಾಗಿದ್ದರು ಎನ್ನುವುದನ್ನು ಅವರ ಕೃತಿಗಳೇ ಹೇಳುತ್ತವೆ. ದ್ವಿತೀಯ ವ್ಯಾಟಿಕನ್ ಸಮ್ಮೇಳನದ ನಂತರ ರೂಪುಗೊಂಡು 1983ರಲ್ಲಿ ಅನುಷ್ಠಾನಗೊಂಡ ಧರ್ಮಸಭೆಯ ಶಾಸನ ಸಂಹಿತೆ (ಕ್ಯಾನನ್‌ಲಾ) ಯಲ್ಲಿ ತಿದ್ದುಪಡಿ ತರುವುದರಲ್ಲಿ ದುಡಿದಿದ್ದಾರೆ. ಇಂಗ್ಲೀಷ್, ಸ್ಪಾನಿಷ್, ಲ್ಯಾಟಿನ್ ಫ್ರೆಂಚ್, ಇಟಲಿಯನ್ ಮತ್ತು ಹಳೆಯ ಗ್ರೀಕ್, ಹಿಬ್ರೂ ಭಾಷೆಯನ್ನು ಬಲ್ಲವರಾಗಿದ್ದು ತಮ್ಮ ಮಾತೃಭಾಷೆ ಜರ್ಮನ್ ಜೊತೆ ಆಡಬಲ್ಲವರಾಗಿದ್ದಾರೆ. ವಿಶ್ವದ ಆರ್ಥಿಕತೆಯ ಕುರಿತು ನಡೆದ ಸಮಾವೇಶದಲ್ಲಿ ಪರಿಸರ, ವಲಸೆ, ಭಯೋತ್ಪಾದನೆ, ಲೈಂಗಿಕತೆ, ಪ್ರವಾಸೋದ್ಯಮ, ಅಣುಶಕ್ತಿ ಮುಂತಾದವುಗಳ ಕುರಿತು ಕ್ರೈಸ್ತ ನಿಲುವುಗಳನ್ನು ಸಮರ್ಥವಾಗಿ ಮಂಡಿಸಿದ್ದಾರೆ.

**ವಿಭಿನ್ನ ವ್ಯಕ್ತಿತ್ವದಿಂದ ಹೊಸತನ ತಂದರು:**

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಹಿಟ್ಲರ್‌ನ ಕ್ರೌರ್ಯವನ್ನು ಕಂಡು ನಲುಗಿದ್ದರು. ಹಾಗೆಯೇ ನಾಜ಼ಿ ಸೈನಿಕರ ಯಹೂದಿಗಳ ನರಹತ್ಯೆಯನ್ನು ಕಂಡು ಅವರಲ್ಲಿ ಜೀವಪರ ತೇಜಸ್ಸು ಬೆಳೆದಿತ್ತು. ಈ ಪ್ರೇರಣೆ 1945ರಲ್ಲಿ ಗುರುಗಳಾಗಲು ಕಾರಣವಾಗಿ 1951 ರಲ್ಲಿ ದೀಕ್ಷೆಯನ್ನು ಪಡೆದುಕೊಳ್ಳಲು ಕಾರಣವಾಯಿತು. ಆದ್ದರಿಂದ ಧರ್ಮಸಭೆಯಲ್ಲಿ ನಡೆದಿರುವ ಎಲ್ಲಾ ದೌರ್ಜನ್ಯಗಳಿಗೆ ಕ್ಷಮೆಯಾಚಿಸಿದರು. ಹಿಂದಿನ ಜಗದ್ಗುರುಗಳು ಬಳಸುತ್ತಿದ್ದ ಕೆಂಪು ಶೂಗಳನ್ನು ಬಳಸಲು ನಿರಾಕರಿಸಿದರು. ಸ್ವಲ್ಪ ಕಣ್ಣಿನ ದೃಷ್ಟಿಯನ್ನು 2005 ರಲ್ಲಿಯೇ ಕಳೆದುಕೊಂಡಾಗ, ರಾಜೀನಾಮೆ ಕೊಡಲು ಸಿದ್ದರಿದ್ದರು.

ರೋಮನ್ ಕಥೋಲಿಕ ಪಂಗಡದಿಂದ ದೂರವಾಗಿದ್ದ 'ಲೆಫೆಬ್ರೆ' ಎನ್ನುವ ಪಂಗಡವನ್ನು ಪುನಹಃ ಒಗ್ಗೂಡಿಸಿದರು. ವ್ಯಾಟಿಕನ್ ಆಡಳಿತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆಪಾದಿಸಿ, ಮಾಹಿತಿಯನ್ನು ಪತ್ರಕರ್ತರಿಗೆ ನೀಡಿದ, ತಮ್ಮ ಅಡುಗೆಯವವನಾದ ಗೇಬ್ರಿಯಲ್‌ನನ್ನು ಕ್ಷಮಿಸಿದರು. ಬಹಳವಾಗಿ ನೊಂದುಕೊಂಡಿದ್ದರೂ ಕ್ಷಮೆಯ ಮೂಲಕ ಕ್ರೈಸ್ತ ಮೌಲ್ಯಗಳನ್ನು ಮೆರೆಸಿದರು. ಇಂಗ್ಲೆಂಡಿನ ಮತ್ತು ಆಸ್ಟ್ರೇಲಿಯಾದ ಆಂಗ್ಲಿಕನ್ ಚರ್ಚ್‌ಗಾಗಿ ಪ್ರತ್ಯೇಕವಾದ ಪ್ರಾಂತ್ಯವನ್ನು ರಚಿಸಿ, ಅವರ ಆರಾಧನಾ ವಿಧಿಯನ್ನು ಮುಂದುವರೆಸಲು ಅನುವು ಮಾಡಿದ್ದು ಗಮನಾರ್ಹ ವಿಷಯ.

ವಿಶ್ವಗುರು ಬೆನೆಡಿಕ್ಟ್ XVI ರವರು ಕ್ರೈಸ್ತ ವಿವಿಧ ಪಂಗಡಗಳ ಜೊತೆ ಬೆಳೆಸಿದ್ದ ಆತ್ಮೀಯತೆ, ಕ್ರೈಸ್ತ ಐಕ್ಯತೆಯ ಪ್ರಯತ್ನವಾಗಿತ್ತು. ಇತರ ಧರ್ಮದ ಮುಂದಾಳುಗಳ ಜೊತೆಗೆ ಬೆಳೆಸಿದ ಒಡನಾಟ ವಿಶಿಷ್ಠವೆನಿಸಿದ ಯೆಹೂದಿಗಳು ರಬ್ಬಿಗಳ ಜೊತೆ ಹತ್ತಿರದ ಗೆಳೆತನ ಹೊಂದಿದ್ದರು. ದಲೈಲಾಮಾರು ಜಗದ್ಗುರುಗಳಿಗೆ ಶುಭಹಾರೈಸಲು ಇಟಲಿಗೆ ತೆರಳುತ್ತಿರುವುದನ್ನು ಚೀನಾ ದೇಶವು ರದ್ದಾಗುವಂತೆ ಮಾಡಿತ್ತು. ಅಮೇರಿಕಾದ ಇಸ್ಕಾನ್ (ಅಂತರಾಷ್ಟ್ರೀಯ ಕೃಷ್ಣ ಪ್ರಜ್ಞಾಸಂಸ್ಥೆ) ಮುಖ್ಯಸ್ಥರು ರಾಧಿಕಾ ರರ್ಮನ್ ದಾಸ್‌ರ ಜೊತೆ ಮಾತುಕತೆ ನಡೆಸಿದ್ದು, ಅವರಿಗೆ ಓಂ ಸಂಕೇತವನ್ನು ಉಡುಗೊರೆಯಾಗಿ ಕೊಟ್ಟಿದ್ದರು. 2005 ಏಪ್ರಿಲ್ ತಿಂಗಳು 19 ರಂದು ಐದನೇ ಬಾರಿಗೆ ಕಾರ್ಡಿನಲ್‌ರು ಸಭೆ ಸೇರಿ ಸಂಜೆ 6.04ಕ್ಕೆ ಪೋಪ್ ಆಯ್ಕೆಯ ಸಂಕೇತವನ್ನು ಸೂಚಿಸಿದಾಗ, ಜನರು ಕುಪ್ಪಳಿಸಿದ್ದರು. ಅಂದೇ ರಾತ್ರಿ 10.15 ಗಂಟೆಗೆ ಹಿರಿಯ ಕಾರ್ಡಿನಲ್‌ರವರು ಜನರಿಗೆ 'ಹಬೇಮಂಸ್ ಪಾಪ್ಪಾಂ'' (ನಮಗೆ ಪೋಪ್ ಲಭಿಸಿದ್ದಾರೆ) ಎಂದು ಘೋಷಿಸುತ್ತಿದ್ದಂತೆಯೇ 75 ರ ವಯಸ್ಸಿನ ನೂತನ ಪೋಪ್ ಬೆನೆಡಿಕ್ಟ್ ರವರು ಬಾಲ್ಕನಿಯಲ್ಲಿ ಕಾಣಿಸಿಕೊಂಡು ಭಕ್ತರನ್ನು ಆಶೀರ್ವದಿಸಿದ್ದರು. "ನಿಮ್ಮ ಪ್ರಾರ್ಥನೆಗಳೇ ನನಗೆ ಅಭಯ'' ಎಂದು ಅವರು ಹೇಳಿರುವ ಅಂದಿನ ಮಾತುಗಳು, ವಿನಮ್ರತೆಯ ಪ್ರತೀಕ; ಅವು ಇಂದಿಗೂ ಸಾಬೀತಾದಂತಿದೆ.

**ಮೊದಲಿಗರಾಗಿ ಅನುಕರಣೀಯರು :**

ಕಥೋಲಿಕ ಧರ್ಮಸಭೆಯಲ್ಲಿ ಬಿನ್ನವಾಗಿರುವಷ್ಟೇ ಪವಿತ್ರವಾಗಿರುವ ಸ್ಥಾನವನ್ನು ಆಲಂಕರಿಸಿದ್ದಂದಿನಿಂದ, ರಾಜೀನಾಮ ಘೋಷಿಸುವವರೆಗೆ ತಮ್ಮ ನಿಷ್ಠೆಯನ್ನು ಪ್ರಭುವಿಗೆ ತೋರಿಸಿದರು. ದೀರ್ಘ ಅವಧಿಯ ಪೋಪ್‌ಗಳ ನಡುವೆ ಸಣ್ಣ ಅವದಿಯ ಪೋಪ್‌ಗಳಿರುತ್ತಾರೆಂದು ಮಾತು ಆದರೆ ಇವರ ಪ್ರಭಾವ ಮಾತ್ರ ಅಲ್ಪವಾಗಿಲ್ಲವೆಂಬುದು ವೇದ್ಯವಾಗುತ್ತದೆ. 2012ರಲ್ಲಿ ಅಂತರ್‌ಜಾಲದ ಸಾಮಾಜಿಕ ತಾಣ ಟ್ವಿಟರ್‌ನಲ್ಲಿ ಖಾತೆಯನ್ನು ಪ್ರಾರಂಭಿಸಿದರು. ಪೋಪ್ ಬೆನೆಡಿಕ್ಟ್‌ರಿಗೆ ಶಾಸ್ತ್ರಿಯ ಸಂಗೀತದಲ್ಲಿ ಹೆಚ್ಚು ಒಲವಿದ್ದು, ಮೋಜಾರ್ಚ್, 'ಬ್ಲೆಸ್ಡ್ ವರ್ಜಿನ್ ಮೇರಿ' ಎನ್ನುವ ಸಂಗೀತ ಧ್ವನಿ ಸುರುಳಿಯನ್ನು ಸಿದ್ದಪಡಿಸಿ, ಜನಪ್ರಿಯರಾದರು. ವ್ಯಾಟಿಕನ್ ಸಿಡಿಯ ಕುರಿತು ''ಯೂ ಟ್ಯೂಬ್'ನಲ್ಲಿ ಚಾನಲ್‌ನ್ನು ಪ್ರಾರಂಭಿಸಿದರು. ವಿಶ್ವಗುರುವಿಗೆ ವಿಶ್ವದಾದ್ಯಂತ ಅಂತರ್‌ಜಾಲಾದಲ್ಲಿ 1.5 ಮಿಲಿಯ ಅಭಿಮಾನಿಗಳಿದ್ದಾರೆ. ನಿಮಗೂ ಅಭಿಪ್ರಾಯ ಮಂಡಿಸಲು @pontifex. ನೋಡಿರಿ (www.popebenedict fanclub.com) ತಮ್ಮದೇ ಆದ ಮೊಬೈಲ್ ಫೋನ್‌ನನ್ನು ಹೊಂದಿದ್ದ ಪೋಪ್‌ಗಳಲ್ಲೇ ಮೊದಲನೆಯವರು.

ಪೆಬ್ರುವರಿ 28ರ ನಂತರ ಸಾಮಾನ್ಯವಾಗಿ 'ಪೋಪ್' ವೆಂಬ ನಾಮಾಂಕಿತವಿಲ್ಲದೆ ಇರಬೇಕಾಗಿದ್ದರೂ, ಜಗದ್ಗುರು ಹದಿನಾರನೇ ಬೆನೆಡಿಕ್ಟ್‌ರು ಮೇಲ್ಪಂಕ್ತಿ ಹಾಕಿ ಕೊಟ್ಟಿದ್ದಾರೆ. ಧಾರ್ಮಿಕ ವಲಯದಲ್ಲೂ ಅಧಿಕಾರಕ್ಕಾಗಿ ಕಿತ್ತಾಟಗಳು ನಡೆಯುತ್ತಿರುವ ಈ ಕಾಲದಲ್ಲಿ, ಸೇವೆಯೇ ಪರಮ ಧ್ಯೇಯವೆಂದು ಕಲಿಸಿದ ಯೇಸು ಸ್ವಾಮಿಯ ನಿಜ ಹಿಂಬಾಲಕರಾಗಲು ಇದೊಂದು ಪ್ರೇರಣೆಯಲ್ಲವೇ ?

❖



**ಕೆಲಸ ಯಾರ ಗೌರವವನ್ನು ತಗ್ಗಿಸುವುದಿಲ್ಲ. ದುರದೃಷ್ಟ ಸಂಗತಿಯೆಂದರೆ ಹಲವರು ಕೆಲಸದ ಗೌರವವನ್ನು ತಗ್ಗಿಸುತ್ತಾರೆ.**

## ಚಿಕ್ಕಮಗಳೂರು ವಿವಿದೋದ್ದೇಶ ಸಮಾಜ ಸೇವಾ ಸಂಸ್ಥೆ (ಸಿ.ಎಂ.ಎಂ.ಎಸ್.ಎಸ್.), ಮರಿಯಾನಗರ, ಅರಕಲಗೂಡು ತಾಲ್ಲೂಕು ಮಟ್ಟದ ವಿಕಲಚೇತನರ ಸಾರ್ವಜನಿಕ ಆಹವಾಲು (ಆಧಾಲತ್) ಕಾರ್ಯಕ್ರಮ





ಸರ್ಕಾರದ ಸಮಿಕ್ಷೆಯಂತೆ ಅರಕಲಗೂಡು ತಾಲ್ಲೂಕಿನಲ್ಲಿ 4361 ಜನ ಅಂಗವಿಕಲರಿದ್ದಾರೆ . ಇವರ ಜೀವನಕ್ರಮವನ್ನು ಅವಲೋಕಿಸಿದಾಗ ಸಮಾಜದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಬದುಕುತ್ತಿರುವುದು ಘನಘೋರ ಹಾಗೂ ವಿಷಾದನೀಯವಾದ ಸಂಗತಿಯಾಗಿದೆ. ಮುಖ್ಯವಾಗಿ ಅವರಲ್ಲಿ ಕಾಡುತ್ತಿರುವ ಕೀಳರಿಮೆ, ಇತರರ ತಾರತಮ್ಯ, ಪ್ರೋತ್ಸಾಹದ ಕೊರತೆ, ಸರ್ಕಾರಿ / ಅರೇ ಸರ್ಕಾರಿ ಕಚೇರಿಗಳಲ್ಲಿ ಎದುರಿಸುತ್ತಿರುವ ಅವಮಾನ, ಅಧಿಕಾರಿಗಳಿಂದ ಕಿರುಕುಳ, ಲಂಚ, ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿರುವುದು, ಮಕ್ಕಳಿಗೆ ಶಾಲೆಯ ಶಿಕ್ಷಣದಲ್ಲಿ ಅಗುವ ತಾರತಮ್ಯ, ಮಾಹಿತಿಯ ಕೊರತೆ ಇವರ ಸಮಸ್ಯೆಗಳ ಬಗ್ಗೆ ಅಲಿಸುವವರು ಮತ್ತು ಸ್ಪಂದಿಸುವವರು ಅತೀ ವಿರಳ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಈ ನಿಟ್ಟಿನಲ್ಲಿ ಸಿ.ಎಂ.ಎಸ್.ಎಸ್.ಎಸ್. ಸಂಸ್ಥೆಯೂ ಅಂಗವಿಕಲರೂ ಕೂಡ ಸಮಾಜದ ಒಂದು ಭಾಗ, ಅವರಿಗೂ ಕೂಡ ಇತರರಂತೆ ಸಮಾಜದಲ್ಲಿ ಸಿಗುವ ಸ್ಥಾನಮಾನಗಳು ದೊರಕಬೇಕು ಅವರು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬ ಉದ್ದೇಶದಿಂದ ಅಂಗವಿಕಲರನ್ನೂ ಗುರುತಿಸಿ, ಅವರಿಗೆ ಹಕ್ಕು ಅಧಾರಿತ ಮಾಹಿತಿಯನ್ನು ನೀಡುವುದರೊಂದಿಗೆ ಪ್ರೋತ್ಸಾಹ ಮತ್ತು ಸಹಕಾರದ ಫಲವಾಗಿ ಕೊಣನೂರು ವಿಭಾಗದಲ್ಲಿ 16 ವಿಕಲಚೇತನರ ಸ್ವಸಹಾಯ ಸಂಘಗಳು ಹಾಗೂ ತಾಲ್ಲೂಕು ಮಟ್ಟದ ಒಕ್ಕೂಟದ ರಚನೆಯನ್ನು ಮಾಡಿರುವುದು ಹೆಮ್ಮೆಯ ಸಂಗತಿ. ಇದರ ಮೂಲಕ ವಿಕಲಚೇತನರು ಅವರಿಗೆ ಸಿಗುವ ಸರ್ಕಾರಿ ಸೌಲಭ್ಯಗಳಾದ ವೈದ್ಯಕೀಯ ಪ್ರಮಾಣ ಪತ್ರ, ಗುರುತಿನ ಕಾರ್ಡ್, ಮಾಸಿಕ ವೇತನ, ಸಾಧನ ಸಲಕರಣೆಗಳು ಮತ್ತು ಸರ್ಕಾರದಿಂದ ದೊರೆಯುವ 3% ಮೀಸಾಲಾತಿಯಡಿಯಲ್ಲಿ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ. ಸಂಘದ ಸದಸ್ಯರು ಅವರ ಪರಿಸರದಲ್ಲಿರುವ ಮತ್ತು ಇತರ ವಿಕಲಚೇತನರನ್ನು ಪ್ರೋತ್ಸಾಹಿಸುವ ಸಲುವಾಗಿ 15.12.2012ರಂದು ಸಾರ್ವಜನಿಕ ಆಹವಾಲು (ಆಧಾಲತ್), ರ್‍ಯಾಲಿ, ಹಾಗೂ ವಿಕಲ ಚೇತನರ ಜಾಗೃತಿ ಕಾರ್ಯಕ್ರಮವನ್ನು ಸಿ.ಎಂ.ಎಸ್.ಎಸ್. ಸಂಸ್ಥೆ, ತಾಲ್ಲೂಕು ವಿಕಲ ಚೇತನರ ಅಭಿವೃದ್ಧಿ ಸಂಘ, ಹಾಸನ ಜಿಲ್ಲಾ ವಿಕಲ ಚೇತನರ ಅಭಿವೃದ್ಧಿ ಸಂಘ ಮತ್ತು **MRW** ಹಾಗೂ **VRW** ತಾಲ್ಲೂಕು ಒಕ್ಕೂಟ ಇವರುಗಳ ಸಂಯುಕ್ತ ಅಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ರಾಮನಾಥಪುರದ ಮುಖ್ಯ ಬೀದಿಯಲ್ಲಿ ಮೆರವಣಿಗೆಯಲ್ಲಿ ವಿಕಲಚೇತನರಿಗೆ ಸರಿಯಾದ ಸ್ಥಾನ ಮಾನಗಳನ್ನು ಕೊಡಿ, ನ್ಯಾಯವನ್ನು ಕೊಡಿ, ಬದುಕಲು ಬಿಡಿ, ನಮ್ಮನ್ನು ಇತರರಂತೆ ಕಾಣಿರಿ, ನಾವು ಕೂಡ ಸಮಾಜದ ಅಂಗಗಳು ಎಂಬ ಘೋಷಣೆಗಳನ್ನು ರ್‍ಯಾಲಿಯುದ್ದಕ್ಕೂ ಘೋಷಿಸಲಾಯಿತು. ನಂತರ ವೇದಿಕೆಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕ್ಷೇತ್ರದ ಶಾಸಕರಾದ ಶ್ರೀಯುತ. ಎ. ಮಂಜು, ಸಂಸ್ಥೆಯ ನಿರ್ದೇಶಕರಾದ ವಂ. ಸ್ವಾ. ಪೆಲಿಕ್ಸ್ ತೋಮಸ್ ರುಝಾರಿಯೋರವರು, ಮರಿಯಾನಗರ ಧರ್ಮಕೇಂದ್ರದ ವಂ. ಸ್ವಾ. ಡೇವಿಡ್ ಅಂತೋಣಪ್ಪ, ತಾಲ್ಲೂಕಿನ ಎಲ್ಲಾ ಸರ್ಕಾರಿ ಆಧಿಕಾರಿಗಳಾದ ತಹಸೀಲ್ದಾರರು, ಅರೋಗ್ಯಾಧಿಕಾರಿಗಳು, ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು, ಸಾರಿಗೆ ಇಲಾಖೆಯ ಮುಖ್ಯಾಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ಮತ್ತು ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಿದ್ದರು. ಈ ಸಂವಾದದಲ್ಲಿ ಸುಮಾರು 50 ವಿಕಲಚೇತನರ ಕುಂದುಕೊರತೆಗಳನ್ನು ಅಧಿಕಾರಿಗಳ ಮುಂದೆ ತೋಡಿಕೊಂಡರು ಅವರಿಗೆ ಸೂಕ್ತ ಪರಿಹಾರಗಳನ್ನು ಸ್ಥಳದಲ್ಲಿ ನೀಡಲಾಯಿತು ಮಾತ್ರವಲ್ಲದೆ ಈ ಸಂದರ್ಭದಲ್ಲಿ ಅಂಗವಿಕಲರಿಗೆ ದೊರೆಯುವ ಮೀಸಲಾತಿ, 3% ಅನುದಾನ, ಶಿಕ್ಷಣ ಕ್ಷೇತ್ರದಲ್ಲಿ ದೊರಕುವ ಗೃಹ ಆಧಾರಿತ ಶಿಕ್ಷಣಕ್ಕೆ ಅರ್ಹತೆ, ಗುರುತಿನ ಕಾರ್ಡ್ ಸಾರಿಗೆ ಸೌಲಭ್ಯಗಳ ಪಾಸ್, ಅಡೆತಡೆ ನಿರ್ಮಾಣ, ಶೌಚಾಲಯದ ನಿರ್ಮಾಣ, ಸಾಧನ ಸಲಕರಣೆಗಳ ವಿತರಣೆ, ಸ್ವ ಉದ್ಯೋಗಕ್ಕೆ ಸಹಾಯ, ಮುಂತಾದುವುರ ಬಗ್ಗೆ ಚರ್ಚಿಸಿ ಅವರಿಗೆ ಹಕ್ಕೊತ್ತಾಯ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಸಕರು ವಿಕಲಚೇತನರ ಸಮಸ್ಯೆ ಅಲಿಸಲು ಸಮಿತಿ ರಚನೆ ಮಾಡಬೇಕೆಂದು ತಹಸೀಲ್ದಾರ್‌ರವರಿಗೆ ತಿಳಿಸಿದರು. ಸಂಸ್ಥೆಯ ನಿರ್ದೇಶಕರಾದ ವಂ. ಸ್ವಾಮಿ ಪೆಲಿಕ್ಸ್ ತೋಮಸ್ ರುಝಾರಿಯೋರವರು ಪ್ರಾಸ್ತಾವಿಕವಾಗಿ ಮಾತಾನಾಡುತ್ತಾ ವಿಕಲಚೇತನರನ್ನು ಗುರುತಿಸಿ ಅವರನ್ನು ಮುಖ್ಯಾವಾಹಿನಿಗೆ ತರುವುದು ಚಿಕ್ಕಮಗಳೂರು ಧರ್ಮಕ್ಷೇತ್ರದ ಮುಖ್ಯ ಗುರಿ. ಈ ನಿಟ್ಟಿನಲ್ಲಿ ವಿಕಲಚೇತನರು ಅಭಿವೃದ್ಧಿ ಹಾಗೂ ಎಲ್ಲಾ ರೀತಿಯ ಸೌಕರ್ಯ ಹೊಂದುವಂತೆ ಪ್ರಗತಿ ಪಥದತ್ತ ಹಾಗೂ ಸಮಾನತೆಯ ದೃಷ್ಟಿಯಿಂದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅವುಗಳಲ್ಲಿ ಮುಖ್ಯವಾಗಿ ವಿಕಲಚೇತನರ ಸ್ವ ಸಹಾಯ ಸಂಘಗಳನ್ನು ರಚನೆ ಮಾಡುವುದರ ಮೂಲಕ ವಿಕಲಚೇತನರು ಸರ್ವಾಂಗೀಣ ಅಭಿವೃದ್ಧಿ ಹೊಂದಿ ಮುಖ್ಯಾವಾಹಿನಿಗೆ ಬರಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕರಾದ ಶ್ರೀ. ಎ. ಮಂಜು ಅವರು ಮಾತಾನಾಡುತ್ತಾ ಸಮಾಜದಲ್ಲಿರುವ ವಿಕಲಚೇತನರನ್ನು ಗುರುತಿಸಿ, ಅವರಿಗೆ ಸರಿಯಾದ ಮಾಹಿತಿಯನ್ನು ನೀಡಿ ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿಕೊಡಲು ಸಾರ್ವಜನಿಕರು ಮುಂದೆ ಬರಬೇಕೆಂದು ಮನವಿ ಮಾಡಿಕೊಂಡರು. ಅವರು ಸಮಾಜದಲ್ಲಿ ಇತರರಂತೆ ಬದುಕಲು ಅವಕಾಶ, ಸ್ಥಾನಮಾನಗಳನ್ನು, ರಾಜಕೀಯವಾಗಿ ಬೆಳೆಯಲು ಪ್ರೋತ್ಸಾಹಗಳನ್ನು ನೀಡಬೇಕು ಮತ್ತು ವಿಕಲಚೇತನರು ಸರ್ಕಾರ ಸವಲತ್ತುಗಳನ್ನು ಪಡೆದು ಮುಖ್ಯಾವಾಹಿನಿಗೆ ಬರಲು ಸಂಘಟಿತ ಪ್ರಯತ್ನ ಅತ್ಯಗತ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅಗಮಿಸಿದಂತಹ ತಹಸೀಲ್ದಾರ್ ಶ್ರೀ ಜಗದೀಶ್ ಅವರು ಮಾತಾನಾಡುತ್ತಾ ಈ ಕಾರ್ಯಕ್ರಮವನ್ನೂ ಉತ್ತಮವಾಗಿ ಅಯೋಜಿಸಿ, ಸಮಾಜದಲ್ಲಿರುವ ವಿಕಲಚೇತನರಿಗೆ, ಇಲಾಖೆಯಿಂದ ಸಿಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ದೊರಕಿಸಿ ಕೊಡಲು ಸಹಕಾರದ ಅಶ್ವಾಸನೆ ನೀಡಿದರು. ಕಾರ್ಯಕ್ರಮವನ್ನು ಅಯೋಜಿಸಿದ ಸಿ. ಎಂ. ಎಸ್. ಎಸ್. ಎಸ್. ಸಂಸ್ಥೆಗೆ ತಮ್ಮ ಹೃದಯ ತುಂಬಿದ ಮೆಚ್ಚುಗೆಯನ್ನು ತಿಳಿಸಿದರು.

ವಿಶ್ವ ವಿಕಲಚೇತನರ ದಿನದ ಅಂಗವಾಗಿ ದಾನಿಗಳಾದ ರೋಟರಿ ಸಂಸ್ಥೆ, ಲೀಡ್ (ಕೆನರಾ) ಬ್ಯಾಂಕ್, ಹಾಸನ, ನೀಡಿದ 5 ವೀಲ್ ಛೇರ್‌ಗಳನ್ನು, 3 ವಿಶೇಷವಾಗಿ ತಯಾರಿಸಿದ ಶೌಚಾಲಯದ ಕುರ್ಚಿಗಳನ್ನು ಅರ್ಹ ವಿಕಲಚೇತನರಿಗೆ ವಿತರಿಸಲಾಯಿತು. ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಭಾಗ್ಯ ಮೇರಿ ಸ್ವಾಗತಿಸಿದರು, ಶ್ರೀಮತಿ ಶಾಂತ ವಂದಿಸಿದರು, ಶೀ. ಕೃಷ್ಣಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

❖

ಕೈಗೊಂಡ ಕೆಲಸವನ್ನು ಅರ್ಧಕ್ಕೆ ಬಿಡುವವನನ್ನು ಜಗತ್ತು ಕೈಬಿಡುತ್ತದೆ.

## ಏರುತ್ತಿರುವ ಜಾಗತಿಕ ತಾಪಮಾನ ಉಪನ್ಯಾಸ ಕಾರ್ಯಕ್ರಮ




ಸಾಂಪ್ರದಾಯಿಕ ಕೃಷಿ ಪದ್ದತಿ ಬಿಟ್ಟು ಅಧುನಿಕ ಕೃಷಿಯ ಮೂಲಕ ಅತೀಯಾಗಿ ರಸಾಯನಿಕ ಬಳಸುವುದರಿಂದ ಪರಿಸರದ ತಾಪಮಾನ ಹೆಚ್ಚಾಗಲು ಮತ್ತು ವಿವಿದ ಆರೋಗ್ಯ ಸಮಸ್ಯೆಗಳಿಗೆ ಕಾರಣ ಎಂದು ಪ್ರಗತಿಪರ ರೈತರು ಹಾಗೂ ನಿವೃತ ಶಿಕ್ಷರಾದ ಶ್ರೀಯುತ ಗಿಡ್ಡೇಗೌಡರು ಅಬಿಪ್ರಾಯ ಪಟ್ಟರು.

ಅವರು ಇಂದು ಹಾಸನ ತಾಲ್ಲೂಕಿನ ಹರಿಹರಪುರ ಗ್ರಾಮದಲ್ಲಿ ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ "ಸೇವಾ ಸಂಗಮ" ವತಿಯಿಂದ ಆಯೋಜಿಸಿದ "ಏರುತ್ತಿರುವ ಜಾಗತಿಕ ತಾಪಮಾನ ಮತ್ತು ಸಾವಯವ ಕೃಷಿ ಮಾಹಿತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತಾನಾಡುತ್ತಿದ್ದರು.

ರೈತರು ತಮ್ಮ ಜಮೀನಿನಲ್ಲಿ ಕಸ ಕಡ್ಡಿ ತಾಜ್ಯಗಳನ್ನು ಸುಡದೆ ತನ್ನಷ್ಟಕ್ಕೆ ಮಣ್ಣಲ್ಲಿ ಬೆರೆಯಲು ಬಿಡಬೇಕು ಇದರಿಂದ ಭೂಮಿಯಲ್ಲಿ ತೇವಾಂಶ ಉಳಿಯುವ ಜೊತೆಗೆ ಫಲವತ್ತತೆಯೂ ಜಾಸ್ತಿಯಾಗುತ್ತದೆ. ಅಲ್ಲದೆ ತ್ಯಾಜ್ಯಗಳನ್ನು ಸುಡುವುದರಿಂದ ಭೂಮಿಯ ತಾಪಮಾನವು ಹೆಚ್ಚಾಗುತ್ತದೆ ಎಂಬುವುದನ್ನು ನೆನಪಿಡಬೇಕು. ಅತೀಯಾದ ರಾಸಾಯನಿಕಗಳ್ನು ಬಳಸಿದಲ್ಲಿ ಪರಿಸರ ಪ್ರೇಮಿಯಾದ ಸೂಕ್ಷ್ಮ ಜೀವಿಗಳು ಮತ್ತು ಕ್ರಿಮಿ ಕೀಟಗಳು ನಾಶವಾಗುವುದು ಮಾತ್ರವಲ್ಲದೆ ಬೆಳೆದ ಉತ್ಪನ್ನಗಳು ವಿಷಕಾರಿಯಾಗಿ ಅದನ್ನು ಬಳಸಿದ ಮಾನವನಲ್ಲಿ ವಿವಿದ ಕಾಯಿಲೆಗಳು ಉಂಟಾಗುತ್ತದೆ ಆದುದರಿಂದ ಪ್ರತಿಯೊಬ್ಬರೂ ಪರಿಸರಕ್ಕೆ ಪೂರಕವಾದ ಸಾವಯವ ಕೃಷಿಯನ್ನು ಮಾಡಲು ಮುಂದಾಗಬೇಕು ಎಂದರು.

"ಕಾಡು ಬೆಳೆಸಿ ನಾಡು ಉಳಿಸಿ" ಎಂಬ ನಾಣ್ನುಡಿಗೆ ವಿರುದ್ಧವಾಗಿ ಮಾನವನು ತನ್ನ ಅತಿಯಾದ ಹೊಟ್ಟೆ ಬಾಕತನ, ದುರಾಶೆ ಮತ್ತು ನಿರ್ಲಕ್ಷತನದಿಂದ ಪರಿಸರ ಮಾಲಿನ್ಯಗೊಳಿಸಿ ಪ್ರಕೃತಿ ವಿಕೋಪ ಮತ್ತು ಆರೋಗ್ಯ ಸಮಸ್ಯೆಗಳಿಗೆ ಕಾರಣನಾಗಿದ್ದಾನೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಮರಗಿಡಳನ್ನು ಬೆಳೆಸಿ ಅನ್ನ ನೀಡುವ ಭೂತಾಯಿಯನ್ನು ಹಿಂಸಿಸದೆ ರಕ್ಷಿಸಿದಲ್ಲಿ ನೆಲ ಜಲ ಸಂಮೃದ್ಧಿಯಾಗಿ ಜನರ ಬದುಕು ನೆಮ್ಮದಿಯಿಂದ ಕೂಡಿರುತ್ತದೆ ಎಂದು ಶಾಲ ಶಿಕ್ಷಕರಾದ ಶ್ರೀಯುತ ರಮೇಶ್ ರವರು ತಿಳಿಸಿದರು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಒಕ್ಕೂಟದ ಕಾರ್ಯದರ್ಶಿಯಾದ ಶ್ರೀ ಪೌಲೋಸ್, ಉಪಾಧ್ಯಕ್ಷರಾದ ಸಿಸ್ಟರ್ ಬೆನ್ನಿ ಶಿಕ್ಷಕರಾದ ಶ್ರೀಯುತ. ಅಂತೋಣಿ, ಪಂಚಾಯತ್ ಸದಸ್ಯರಾದ ಶಿವೇಗೌಡ ಮತ್ತು ಲಿಂಗರಾಜು, ಒಕ್ಕೂಟದ ಪದಾಧಿಕಾರಿಗಳಾದ ಶ್ರೀಯುತ. ವಿನ್ಸೆಂಟ್, ಶ್ರೀಮತಿ ಶೈಲಜಾ, ಹಾಗೂ 65 ರೈತರು ಭಾಗವಹಿಸಿದ್ದರು.

ಶ್ರೀಯುತ ವಿಜಯ ಕುಮಾರ್ ಸ್ವಾಗತಿಸಿ, ಶ್ರೀಮತಿ ರಂಗಲಕ್ಷ್ಮಿ ವಂದಿಸಿದರು ಮತ್ತು ಶ್ರೀಮತಿ ಮಂಜುಳ ಕಾರ್ಯಕ್ರಮ ನಿರೂಪಿಸಿದರು.

ವರದಿ: ವಿನ್ನಿ ಸಿಕ್ವೇರಾ, ಸಿ.ಎಮ್.ಎಸ್.ಎಸ್.ಎಸ್. ಹಾಸನ.

ನಲ್ಮೆಯ ಸಹೋದರರೇ,

ನಾನು ಕಾರ್ಡಿನಲ್‌ಗಳ ಸಭೆಯನ್ನು ಕರೆದದ್ದು, ಮೂವರು ವ್ಯಕ್ತಿಗಳನ್ನು ಸಂತಪದವಿಗೇರಿಸುವುದಕ್ಕೆ ಮಾತ್ರವಲ್ಲದೆ ಧರ್ಮಸಭೆಯ ಜೀವನದಲ್ಲಿ ಮಹತ್ವವಾದ ನಿರ್ಣಯವನ್ನು ನಿಮಗೆ ತಿಳಿಸುವುದಕ್ಕೂ ಆಗಿದೆ. ದೇವರ ಸಮ್ಮುಖದಲ್ಲಿ ಅನೇಕ ಬಾರಿ ನನ್ನ ಆತ್ಮಶೋಧನೆ ಮಾಡಿಕೊಂಡ ಮೇಲೆ, ವಯಸ್ಸಾದ ಕಾರಣ ನನ್ನ ಬಲವು ಕ್ಷೀಣಿಸುತ್ತಿದ್ದು ನಾನು ಸಂತ ಪೇತ್ರರ ಉತ್ತರಾಧಿಕಾರಿಯ ಸೇವೆಯನ್ನು ಸಲ್ಲಿಸಲು ಇನ್ನು ನನ್ನಿಂದ ಸಾಧ್ಯವಿಲ್ಲ ಎಂಬುದರ ತೀರ್ಮಾನಕ್ಕೆ ಬಂದಿದ್ದೇನೆ. ಈ ಸೇವೆಯು ಒಂದು ಆಧ್ಯಾತ್ಮಿಕ ಸೇವೆಯಾಗಿದ್ದು ಇದನ್ನು ಕೇವಲ ನಡೆ ನುಡಿಗಳಿಂದ ಮಾತ್ರವಲ್ಲದೆ ಪ್ರಾರ್ಥನೆ ಮತ್ತು ಯಾತನೆಯಿಂದಲೂ ನಡೆಸಬೇಕೆಂಬುದನ್ನು ನಾನು ಸಂಪೂರ್ಣವಾಗಿ ಅರಿತಿದ್ದೇನೆ. ಆದರೂ, ಇಂದಿನ ಪ್ರಪಂಚವು ಅನೇಕ ತ್ವರಿತ ಬದಲಾವಣೆಗಳಿಗೆ ಒಳಗಾಗಿ, ವಿಶ್ವಾಸದ ಜೀವನಕ್ಕೆ ಸಂಬಂಧಪಟ್ಟ ಅಸಂಬದ್ಧ ಪ್ರಶ್ನೆಗಳಿಂದ ಅಲುಗಾಡಿದೆ. ಸಂತ ಪೇತ್ರರ ಅಧಿಕಾರ ಪೀಠದಲ್ಲಿ ಮುಂದುವರಿಯಲು ಹಾಗೂ ಶುಭಸಂದೇಶವನ್ನು ಸಾರಲು ಮಾನಸಿಕ ಹಾಗೂ ದೈಹಿಕ ಶಕ್ತಿ ಅತ್ಯಗತ್ಯ. ಕೆಲವು ತಿಂಗಳುಗಳಿಂದ ನನ್ನ ಶಕ್ತಿಯು ನನ್ನಲ್ಲಿ ಕ್ಷೀಣಿಸುತ್ತಿದ್ದು, ನನಗೆ ವಹಿಸಿರುವ ಸೇವಾ ಕಾರ್ಯವನ್ನು ತಕ್ಕ ರೀತಿಯಲ್ಲಿ ನೆರವೇರಿಸಲು ನನ್ನ ಅಸಾಧ್ಯತೆಯನ್ನು ನಾನು ಅರಿತುಕೊಳ್ಳಬೇಕಾಯಿತು. ಈ ಕಾರಣಕ್ಕಾಗಿ ಈ ನಡೆಯ ಗಂಭೀರತೆಯನ್ನು ಸಂಪೂರ್ಣವಾಗಿ ಅರಿತು, ನನ್ನ ಸಂಪೂರ್ಣ ಸ್ವಾತಂತ್ರ್ಯದಿಂದ, ದಿನಾಂಕ ಏಪ್ರಿಲ್ 19, 2005 ರಂದು ಕಾರ್ಡಿನಲ್‌ಗಳು ನನಗೆ ವಹಿಸಿದ ಸಂತ ಪೇತ್ರರ ಉತ್ತರದಾಯಿತ್ವವಾದ ರೋಮ್ ನಗರದ ಧರ್ಮಾಧ್ಯಕ್ಷ ಸೇವೆಯನ್ನು ತ್ಯಜಿಸುತ್ತೇನೆ ಎಂದು ನಾನು ಪ್ರಕಟಿಸುತ್ತೇನೆ. ಫೆಬ್ರವರಿ 28, 2013 ರಾತ್ರಿ 8.00 ಗಂಟೆಗೆ ರೋಮಿನ ಪೀಠವೂ, ಸಂತ ಪೇತ್ರರ ಪೀಠವೂ ಖಾಲಿಯಾಗಿರುತ್ತದೆ ಹಾಗೂ ನೂತನ ಪರಮೋಚ್ಛಾಧಿಕಾರಿ ವಿಶ್ವಗುರುವನ್ನು ಚುನಾಯಿಸಲು ಅದಕ್ಕೆ ಸಂಬಂಧಪಟ್ಟವರಿಂದ ಕಾರ್ಡಿನಲ್‌ಗಳ ಸಭೆಯನ್ನು ಕರೆಯಬೇಕಾಗುತ್ತದೆ.

ನಲ್ಮೆಯ ಸಹೋದರರೇ,

ನನ್ನ ಸೇವಾಕಾರ್ಯದಲ್ಲಿ ನನಗೆ ಸಹಾಯಕರಾಗಿ ನೀವು ತೋರಿದ ನಿಮ್ಮ ಪ್ರೀತಿ ಮತ್ತು ಕಾರ್ಯಗಳಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಹಾಗೂ ನನ್ನ ಎಲ್ಲಾ ನ್ಯೂನ್ಯತೆಗಳಿಗೆ ನಾನು ಕ್ಷಮೆ ಯಾಚಿಸುತ್ತೇನೆ. ಈಗ, ನಾವು ಪವಿತ್ರ ಧರ್ಮಸಭೆಯನ್ನು ನಮ್ಮ ಸರ್ವೋತ್ಕೃಷ್ಟ ಪಾಲಕರಾದ ನಮ್ಮ ಪ್ರಭು ಯೇಸು ಕ್ರಿಸ್ತರ ಅಮೂಲ್ಯ ಹಸ್ತಗಳಲ್ಲಿಡೋಣ, ಹಾಗೂ ಅವರ ಪೂಜ್ಯ ಮಾತೆ ಮರಿಯಮ್ಮನವರು ತಾಯಿಯ ಕಾಳಜಿಯಿಂದ ನೂತನ ಪರಮೋಚ್ಛಾಧಿಕಾರಿ ವಿಶ್ವಗುರುವನ್ನು ಚುನಾಯಿಸಲು ಕಾರ್ಡಿನಲ್ ಗುರುಗಳಿಗೆ ಸಹಾಯ ಮಾಡಲೆಂದು ಆಕೆಯಲ್ಲಿ ಬೇಡಿಕೊಳ್ಳೋಣ. ಮುಂಬರುವ ದಿನಗಳಲ್ಲಿ ನಾನು ಪ್ರಾರ್ಥನೆಗೆ ಮುಡಿಪಿಡುವ ಜೀವನದ ಮೂಲಕ ದೇವರ ಪವಿತ್ರ ಧರ್ಮಸಭೆಗೆ ಭಕ್ತಿಯುತವಾಗಿ ಸೇವೆ ಸಲ್ಲಿಸಲು ಆಶಿಸುತ್ತೇನೆ.

ವ್ಯಾಟಿಕನ್‌ನಿಂದ, ಫೆಬ್ರವರಿ 10, 2013

ವಿಶ್ವಗುರು ಹದಿನಾರನೇ ಬೆನಡಿಕ್ಟ್



ಸರಿಯಾದ ಮಾರ್ಗದಲ್ಲಿ ಆರಂಭಿಸಿದ ಎಲ್ಲಾ ಕಾರ್ಯಗಳು ಫಲಿಸುತ್ತವೆ.

## ಧಾರ್ಮಿಕ ಕಟ್ಟಡಗಳು ತೆರಿಗೆ ವ್ಯಾಪ್ತಿಗೆ : ಕೇರಳ ಹೈಕೋರ್ಟ್ ತೀರ್ಪು

ಧಾರ್ಮಿಕ ಸಮುದಾಯದವರು ತಾವು ಕಟ್ಟಿಸಿದ ಕಟ್ಟಡಗಳನ್ನು ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಮಾತ್ರ ಉಪಯೋಗಿಸದೇ ವ್ಯಾವಹಾರಿಕ ಉದ್ದೇಶಗಳಿಗಾಗಿ ಬಳಸಿದ್ದಲ್ಲಿ ಅದು ತೆರಿಗೆ ವ್ಯಾಪ್ತಿಗೆ ಒಳಪಡುತ್ತದೆ ಎಂದು ಕೇರಳ ಹೈಕೋರ್ಟ್ ತೀರ್ಪಿತ್ತಿದೆ. ಅಪರೂಪಕ್ಕೊಮ್ಮೆ ಇಂತಹ ಕಟ್ಟಡಗಳನ್ನು ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಬಳಸುವುದರಿಂದ ಅದು ತೆರಿಗೆ ವಿನಾಯಿತಿಗೆ ಒಳಪಡುವುದಿಲ್ಲ. ಭಕ್ತಾದಿಗಳಿಂದ ಧನ ಸಹಾಯದಿಂದ ಕಟ್ಟಲ್ಪಟ್ಟ ಶತಮಾನೋತ್ಸವ ಹಾಲ್‌ನ್ನು ಧರ್ಮಕೇಂದ್ರದ ಭಕ್ತಾದಿಗಳು ಮದುವೆಯಂತಹ ಶುಭಕಾರ್ಯಗಳಿಗೆ ಉಚಿತವಾಗಿ ಬಳಸಿದರೂ, ಉಳಿದ ದಿನಗಳಲ್ಲಿ ಧರ್ಮೋಪದೇಶ ತರಗತಿಗಳನ್ನು ನಡೆಸಲು, ಪ್ರಾರ್ಥನಾ ಕೂಟಗಳನ್ನು ನೆರವೇರಿಸಲು ಉಪಯೋಗಿಸಿದರೂ ಅದು ತೆರಿಗೆ ವ್ಯಾಪ್ತಿಗೆ ಬರುತ್ತದೆ ಎಂದಿರುವ ಕೋರ್ಟ್ ಮದುವೆಯ ಧಾರ್ಮಿಕ ಕಾರ್ಯಗಳು ನಡೆಯುವುದು ಚರ್ಚ್‌ನಲ್ಲಿ ಎಂದು ಅಭಿಪ್ರಾಯಪಟ್ಟಿದೆ.

## ಪೋಪ್ ರಾಜೀನಾಮೆ

ಹದಿನಾರನೇ ಪೋಪ್ ಬೆನೆಡಿಕ್ಟ್ (85) ಅವರು ವೃದ್ಧಾಪ್ಯದ ಕಾರಣದಿಂದ ಫೆ. 28 ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ವಿಶ್ವದ ಕ್ರೈಸ್ತರ ಪರಮೋಚ್ಛ ಧರ್ಮಗುರುವಾದ ಪೋಪ್ ಅ‍ರು ಕಾರ್ಡಿನಲ್‌ಗಳ ಸಭೆಯಲ್ಲಿ ಸ್ವತಃ ತಮ್ಮ ರಾಜೀನಾಮೆ ವಿಷಯವನ್ನು ಪ್ರಕಟಿಸಿದರು. ಇದರಿಂದಾಗಿ ಬರುವ ಮಾರ್ಚ್ ಅಂತ್ಯದೊಳಗೆ ಹೊಸ ಪೋಪ್ ಅವರನ್ನು ಆಯ್ಕೆ ಮಾಡಬೇಕಾಗುತ್ತದೆ.

'ರಾಜೀನಾಮೆ ನೀಡುವ ನನ್ನ ಮನಸ್ಸಾಕ್ಷಿಯ ನಿರ್ಧಾರವನ್ನು ದೇವರ ಎದುರು ಪದೇ ಪದೇ ಪರೀಕ್ಷೆಗೆ ಒಡ್ಡಿದ್ದೇನೆ. ನನಗೂ ವಯಸ್ಸಾಗಿದೆ. ನಿಶ್ಯಕ್ತಿ ಕಾಡುತ್ತಿದೆ. ಈ ಹಂತದಲ್ಲಿ ಅಂಥದ್ದೊಂದು ದೊಡ್ಡ ಹುದ್ದೆಯನ್ನು ನಿಭಾಯಿಸುವುದು ಅಸಾಧ್ಯ' ಎಂದು ಅವರು ಸಭೆಯಲ್ಲಿ ವಿವರಿಸಿದ್ದಾರೆ. ಬೆನೆಡಿಕ್ಟ್ ಅವರು 2005 ರಲ್ಲಿ ಪೋಪ್ ಹುದ್ದೆಗಿರಿದ್ದರು.

**ಪೋಪ್ ಇತಿಹಾಸ :** ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಐವರು ಪೋಪ್‌ಗಳು ಮಾತ್ರ ಪದತ್ಯಾಗ ಮಾಡಿದ್ದಾರೆ. ಸಾಮಾನ್ಯವಾಗಿ ಇಹಲೋಕ ತ್ಯಜಿಸಿದ ನಂತರವೇ ಹೊಸ ಪೋಪ್ ಆಯ್ಕೆ ನಡೆಯುತ್ತದೆ.

ಲಭ್ಯ ದಾಖಲೆಗಳ ಪ್ರಕಾರ ನಾಲ್ವರು ಪೋಪ್‌ಗಳು ವಿರೋಧಿಗಳ ಕೈಯಲ್ಲಿ ಸಿಕ್ಕು ಜೈಲಿನಲ್ಲಿ ಅಸು ನೀಗಿದ್ದರು. ಆರು ಮಂದಿಯನ್ನು ಕೊಲ್ಲಲಾಗಿತ್ತು. ಇಬ್ಬರು ಪೋಪ್‌ಗಳು ಪ್ರತಿಭಟನೆ ಸಮಯದಲ್ಲಿ ಗಾಯಗೊಂಡು ಸಾವನ್ನಪ್ಪಿದ್ದರು. ತಾರಸಿ ಕುಸಿದು ಅದರ ಕೆಳಗೆ ಸಿಕ್ಕಿ ಒಬ್ಬ ಪೋಪ್ ಸಾವಿಗೀಡಾಗಿದ್ದರು.

ಮುಂದಿನ ಪೋಪ್ ಯಾರು ? ಮುಂದಿನ ಪೋಪ್ ಯಾರು ಎಂದು ವ್ಯಾಪಕ ಚರ್ಚೆ ಆರಂಭವಾಗಿದೆ.

ನೈಜೀರಿಯಾದ ಫ್ರಾನ್ಸಿಸ್ ಅರಿಂಝೆ ಘಾನಾದ ಪೀಟರ್ ಟರ್ಕ್‌ಸನ್ ಮತ್ತು ಕೆನಡಾದ ಮಾರ್ಕ್ ಔಲ್ಲೆಟ್ ಅವರ ಹೆಸರುಗಳು ಮುಂಚೂಣಿಯಲ್ಲಿ ತೇಲಿ ಬಂದಿವೆ.

## ಪೋಪ್ ಆಯ್ಕೆಗೆ ಭಾರತ ಐವರು

ನೂತನ ಪೋಪ್ ಆಯ್ಕೆ ಸಂಬಂಧ ವ್ಯಾಟಿಕನ್‌ನಲ್ಲಿ ಮಾರ್ಚ್ 24 ರಿಂದ ಆರಂಭವಾಗಲಿರುವ ನಿರ್ಣಾಯಕ ಸಭೆಯಲ್ಲಿ ಭಾರತದ ಐದು ಮಂದಿ ಕಾರ್ಡಿನಲ್‌ಗಳು ಭಾಗವಹಿಸಲಿದ್ದಾರೆ.

ಆರ್ಚ್ ಬಿಷಪ್‌ಗಳಾದ ಟೆಲೆಸ್‌ಪೋರ್ ಟೋಪ್ಪೊ (ಪಟ್ನಾ ಆರ್ಚ್‌ಬಿಷಪ್), ಒಸ್ವಾಲ್ಡ್ ಗ್ರೇಷಿಯಸ್ ( ಮುಂಬೈ ಆರ್ಚ್‌ಬಿಷಪ್), ಮಾರ್ ಜಾರ್ಜ್ ಆಲಂಚೇರಿ (ಸೀರೋ ಮಲಬಾರ್), ಮಾರ್ ಬೆಸೇಲಿಯೋಸ್ ಕ್ಲಿಮೀಸ್ (ಸೀರೋ ಮಲಂಕರ) ಮತ್ತು ಐವಾನ್ ಡಯಾಸ್ (ಮುಂಬೈ ಮಾಜಿ ಆರ್ಚ್‌ಬಿಷಪ್) ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕೇರಳ ಕ್ಯಾಥಲಿಕ್ ಬಿಷಪ್ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ಮತ್ತು ವಕ್ತಾರ ಸ್ಟೀಫನ್ ಆಲತ್ತರ ತಿಳಿಸಿದ್ದಾರೆ.

ವಿಶ್ವ ಕ್ಯಾಥಲಿಕ್ ಚರ್ಚ್‌ನ 206 ಕಾರ್ಡಿನಲ್‌ಗಳ ಪೈಕಿ, 117 ಮಂದಿ ಮಾತ್ರ ಪೋಪ್ ಆಯ್ಕೆ ವೇಳೆ ಮತ ಚಲಾಯಿಸುವ ಅರ್ಹತೆ ಹೊಂದಿದ್ದಾರೆ. ಈ ಪೈಕಿ ಭಾರತದಿಂದ ತೆರಳುತ್ತಿರುವ ಎಲ್ಲಾ ಐವರೂ ಮತದಾನದ ಅರ್ಹತೆ ಪಡೆದಿದ್ದಾರೆ. ಚರ್ಚ್‌ನ ಎರಡು ಸಹಸ್ರ ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರತದಿಂದ ಒಟ್ಟು ಐವರು ಕಾರ್ಡಿನಲ್‌ಗಳು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

## ಪೋಪ್ ಉಂಗುರ ಪ್ರದರ್ಶನಕ್ಕೆ ?

ಪೋಪ್ 16ನೇ ಬೆನೆಡಿಕ್ಟ್ ಅವರ ಪದತ್ಯಾಗದಿಂದ ಅವರು ಧರಿಸಿದ್ದ 'ಮೀನುಗಾರನ ಉಂಗುರ' ಮೂಲೆಗುಂಪಾಗದು ಎಂದು ಉಂಗುರವನ್ನು ಮಾಡಿದ ಅಕ್ಕಸಾಲಿಗ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

'ಈ ಉಂಗುರವನ್ನು ಜತನದಿಂದ ಕಾಪಾಡಿ ಪ್ರದರ್ಶನಕ್ಕಿಡಲಾಗುವುದು ಎಂಬ ಭರವಸೆ ಹೊಂದಿದ್ದೇನೆ' ಎಂದು ಕ್ಲಾಡಿಯೊ ಫ್ರಾಂಚಿ ಅಭಿಪ್ರಾಯ ಪಟ್ಟಿದ್ದಾರೆ.

ಬೆಸ್ತರಾಗಿದ್ದ ಸೇಂಟ್ ಪೀಟರ್ ಅವರನ್ನು ಪ್ರತಿನಿಧಿಸುವ 'ಮೀನುಗಾರನ ಉಂಗುರ' ವನ್ನು ಪೋಪ್ ಬೆನೆಡಿಕ್ಟ್ ಅವರಿಗೆಂದೇ ಫ್ರಾಂಚಿ ತಯಾರಿಸಿದ್ದರು. ಮಾತ್ರವಲ್ಲ ಉಂಗುರದಲ್ಲಿ ಪೋಪ್ ಅ‍ರ ಅಧಿಕೃತ ನಾಮಾಂಕಿತ 'ಬೆನೆಡಿಕ್ಟಸ್ 16' ಎಂಬು ಲ್ಯಾಟಿನ್ ಭಾಷೆಯಲ್ಲಿ ಕೆತ್ತಲಾಗಿತ್ತು. ಇದಕ್ಕೂ ಮುನ್ನ ಪೋಪ್ ಆಗಿದ್ದ ಎರಡನೇ ಜಾನ್ ಪಾಲ್ ಅವರು ಮಧ್ಯದಲ್ಲಿ ಶಿಲುಬೆಯಾಕಾರ ಹೊಂದಿದ್ದ ಚಿನ್ನದ ಉಂಗುರವನ್ನು ಧರಿಸುತ್ತಿದ್ದರು. ವಿಶ್ವದ ನಾಯಕರು ಹಾಗೂ ಇತರರು ಪೋಪ್ ಬೆನೆಡಿಕ್ಟ್ ಅವರನ್ನು ಭೇಟಿಯಾಗುತ್ತಿದ್ದ ವೇಳೆ ಈ ಉಂಗುರವನ್ನು ಚುಂಬಿಸುತ್ತಿದ್ದುದು ವಾಡಿಕೆಯಾಗಿತ್ತು.

## ಬಂಡಾಯ ಗುರುವಿನ 'ಮೊನ್ಸಿಜ್ಞೊರ್' ಬಿರುದು ಹಿಂತೆಗೆತ

ರೋಮನ್ ಕಥೋಲಿಕ ಚರ್ಚ್‌ನ ಬೋಧನೆಗೆ ವಿರುದ್ಧವಾಗಿ ಯಾಜಕರ ಬ್ರಹ್ಮಚರ್ಯೆಯ ನಿರ್ಬಂಧವನ್ನು ತೆಗೆದುಹಾಕಬೇಕು ಹಾಗೂ ಸ್ತ್ರೀಯರಿಗೆ ಯಾಜಕ ದೀಕ್ಷೆ ನೀಡಬೇಕು ಎಂದು ಪ್ರತಿಪಾದಿಸುತ್ತಿದ್ದ ಅಸ್ಟ್ರೀಯಾದ ಫಾ. ಹೆಲ್ಮಟ್ ಶೆಲ್ಲರ್ ಎಂಬ ಗುರುವಿಗೆ ನೀಡಿದ್ದ 'ಮೊನ್ಸಿಜ್ಞೊರ್' ಬಿರುದನ್ನು ವ್ಯಾಟಿಕನ್ ಹಿಂದಕ್ಕೆ ಪಡೆದಿದೆ. 'ಅವಿಧೇಯತನಕ್ಕೆ ಕರೆಯೋಲೆ' ಎಂಬ ಘೋಷಣೆಯೊಂದಿಗೆ ಹೋರಾಟಕ್ಕೆ ಇಳಿದಿದ್ದ ಫಾ. ಹೆಲ್ಮಟ್, ವ್ಯಾಟಿಕನ್‌ನ ಈ ಬೆದರಿಕೆಗೆ ಮಣಿದು ತನ್ನ ನಿಲುವನ್ನು ಬದಲಾಯಿಸಲಾರೆ ಎಂದು ಸ್ಪಷ್ಟಪಡಿಸಿದ್ದಾರೆ. ಕಥೋಲಿಕ ಚರ್ಚ್ ಕೂಡ ತನ್ನ ನಿಲುವಿಗೆ ಅಂಟಿಕೊಂಡಿದ್ದು, ಸ್ತ್ರೀಯರಿಗೆ ಯಾಜಕಾದೀಕ್ಷೆ ನೀಡುವ ಅಧಿಕಾರ ತನಗಿಲ್ಲ ಕಾರಣ ಪ್ರಭು ಯೇಸು ತಮ್ಮ ಕಡೆಯ ಭೋಜನದ ಸಂದರ್ಭದಲ್ಲಿ ಯಾಜಕಾ ದೀಕ್ಷೆ ಸಂಸ್ಕಾರವನ್ನು ಸ್ಥಾಪಿಸಿದಾಗ ಪುರುಷರನ್ನು ಮಾತ್ರ ಈ ದೀಕ್ಷೆಗೆ ಆರಿಸಿಕೊಂಡರು ಎಂದು ಸ್ಪಷ್ಟಪಡಿಸಿದೆ.

ಯಾವುದಾದರೊಂದು ಕೆಲಸ ಮಾಡುತ್ತಿರುವಾಗ ಅದರಿಂದಾಚೆಗಿನ ಯಾವ ವಿಷಯವನ್ನು ಯೋಚಿಸಬಾರದು.

## ರಾಜೀನಾಮೆ ಉಳಿದವರಿಗೂ ಪ್ರೇರಣೆಯಾಗಲಿ

ಕ್ರೈಸ್ತರ ಧರ್ಮ ಗುರು ಪೋಪ್ ಹದಿನಾರನೆ ಬೆನ್‌ಡಿಕ್ಟ್ ಪದತ್ಯಾಗ ಮಾಡಲು ನಿರ್ಧರಿಸುವ ಮೂಲಕ ತನ್ನ ಅನುಯಾಯಿಗಳನ್ನು ಮಾತ್ರವಲ್ಲ ಇತರ ಧರ್ಮಾವಲಂಬಿಗಳನ್ನೂ ಆಶ್ಚರ್ಯಚಕಿತಗೊಳಿಸಿದ್ದಾರೆ. ಚರ್ಚಿನ 600 ವರ್ಷಗಳ ಇತಿಹಾಸದಲ್ಲಿ ಹಿಂದೆಯೂ ಪೋಪ್‌ಗಳು ಪದತ್ಯಾಗ ಮಾಡಿದ್ದರೂ ಅವುಗಳು ಅಚ್ಚರಿಯ ನಿರ್ಧಾರಗಳಾಗಿರಲ್ಲಿಲ. ಆದರೆ ಹದಿನಾರನೆ ಬೆನಡಿಕ್ಟ್ ತನ್ನ ದಿಟ್ಟ, ನೇರ ನಡೆ ನುಡಿಗಳಿಂದ ಅಧಿಕಾರದಲ್ಲಿ ಆನಂದ ಪಡೆಯುವವರಂತೆ ವರ್ತಿಸುತ್ತಾ ಬಂದವರು. ಈ ಕಾರಣದಿಂದಾಗಿಯೇ ಅವರ ಪದತ್ಯಾಗ ಲ್ಯಾಟಿನಲ್ಲಿ ಸಮಾವೇಶಗೊಂಡಿದ್ದ ಕಾರ್ಡಿನಲ್‌ಗಳಿಗೂ ಅನಿರೀಕ್ಷಿತವಾಗಿತ್ತು. 2005ರಲ್ಲಿ ನೂತನ ಪೋಪ್ ಆಗಿ ಅಧಿಕಾರ ಸ್ವೀಕರಿಸಿದ್ದ ಹದಿನಾರನೆ ಬೆನಡಿಕ್ಟ್ ಸಾಗಿ ಬಂದ ದಾರಿ ವಿವಾದಗ್ರಸ್ತವಾಗಿತ್ತು. ಇದರಿಂದಾಗಿಯೇ ಎಬತ್ತೈದರ ಇಳಿಯವಸ್ಸಿನ ಪೋಪ್, ಇತ್ತೀಚಿನ ವರ್ಷಗಳಲ್ಲಿ ಹಣ್ಣಾಗಿ ಹೋಗಿದ್ದರು. 'ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಮಾನಸಿಕ ಮತ್ತು ದೈಹಿಕ ಚೈತನ್ಯ ನನ್ನಲ್ಲಿ ಇಲ್ಲ' ಎಂದು ನಿವೃತ್ತಿಗೆ ನೀಡಿದ ಕಾರಣವನ್ನು ನಂಬದೆ ಇರಲಿಕ್ಕಾಗುವುದಿಲ್ಲ. ಚರ್ಚ್‌ಗಳಲ್ಲಿ ಮಕ್ಕಳನ್ನು ಲೈಂಗಿಕವಾಗಿ ಹಿಂಸಿಸುತ್ತಿರುವ ಕ್ಯಾಥೊಲಿಕ್ ಧರ್ಮಗುರುಗಳ ವಿರುದ್ಧ ಪೋಪ್ ಕ್ರಮ ಕೈಗೊಳ್ಳದೆ ರಕ್ಷಿಸುತ್ತಾ ಬಂದಿರುವುದು ಅಮೇರಿಕದ ನ್ಯಾಯಾಲಯದಲ್ಲಿ ಇತ್ತೀಚೆಗೆ ಸಲ್ಲಿಸಲಾಗಿದ್ದ ದಾಖಲೆಗಳಿಂದ ಬಯಲಾಗಿತ್ತು. ಅತ್ಯಂತ ಮಡಿವಂತಿಕೆಯ ಭಾಷಣದ ಮೂಲಕ ಎಂಟು ವರ್ಷಗಳ ಹಿಂದೆ ಅಧಿಕಾರ ಸ್ವೀಕರಿಸಿದ್ದ ಹದಿನಾರನೆ ಬೆನಡಿಕ್ಟ್‌ಚ ಅಧಿಕಾರದುದ್ದಕ್ಕೂ ತನ್ನ ಸಂಪ್ರದಾಯವಾದಿ ನೀಲುವುಗಳ ಮೂಲಕ ವಿವಾದದ ಸುಳಿಗೆ ಸಿಕ್ಕಿದವರು. ಕಾಂಡೋಮ್ ಸೇರಿದಂತೆ ಜನನ ನಿಯಂತ್ರಣದ ಎಲ್ಲಾ ಸಾಧನಗಳನ್ನು ವಿರೋಧಿಸುತ್ತಾ ಬಂದಿದ್ದ ಪೋಪ್ ಯಾವುದೇ ಸಂದರ್ಭದಲ್ಲಿಯೂ ಗರ್ಭಪಾತ ಮಾಡಕೂಡದೆಂದು ಅನುಯಾಯಿಗಳಿಗೆ ಕರೆ ನೀಡಿದ್ದರು. ಸಲಿಂಗಕಾಮಿಗಳ ಮದುವೆ, ವಿಚ್ಛೇದನಕ್ಕೆ ವಿರೋಧದ ಮೂಲಕ, ಅವುಗಳ ಬೆಂಬಲಿಗರ ವಿರೋಧವನ್ನು ಅವರು ಕಟ್ಟಿಕೊಂಡಿದ್ದರು. ಈ ಮೂಲಕ ನೂತನ ಪೋಪ್‌ಗೆ ವಿವಾದಗಳ ಪರಂಪರೆಯನ್ನು ಯುರೋಪ್ ಬಿಟ್ಟು ಬೇರೆ ದೇಶಗಳಳಿಗೆ ಸೇರಿದವರು ಪೋಪ್ ಆಗಿ ನೇಮಕ ಗೊಳ್ಳಬೇಕೆಂಬ ಕೂಗು ಕೇಳಿಬರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ.

ಪೋಪ್ ನಿವೃತ್ತಿ ಧಾರ್ಮಿಕ ಕ್ಷೇತ್ರದಲ್ಲಿ ಅಪರೂಪದ ಬೆಳವಣಿಗೆ. ರಾಜಕಾರಣಿಗಳಂತೆ ನಮ್ಮ ಧರ್ಮಗುರುಗಳಿಗೂ ನಿವೃತ್ತಿಯೇ ಇಲ್ಲ ಎನ್ನುಂತಾ ಅನುಯಾಯಿಗಳನ್ನು ಹೊಂದಿರುವ ನಮ್ಮ ಅನೇಕ ಧರ್ಮಗುರುಗಳು ವಯಸ್ಸಿನ ಕಾರಣದಿಂದಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಾಗದ ಸ್ಥಿತಿಯಲ್ಲಿದ್ದಾರೆ. ಈ ಧರ್ಮಗುರುಗಳ ಅಸಹಾಯಕತೆಯನ್ನು ಬಳಸಿಕೊಂಡು ಅವರನ್ನು ಸುತ್ತಿಕೊಂಡಿರುವ ಬೆರಳೆಣಿಕೆಯ ಮಂದಿ ಧಾರ್ಮಿಕ ಸಂಸ್ಥೆಗಳ ದುರುಪಯೋಗ ನಡೆಸುತ್ತಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಇದರಿಂದಾಗಿ ಅನೇಕ ಧಾರ್ಮಿಕ ಸಂಸ್ಥೆಗಳು ಅಕ್ರಮ - ಅವ್ಯವಹಾರಗಳ ಗೂಡಾಗಿ ಹೋಗಿವೆ. ಪ್ರಶ್ನಿಸುವುದೇ ಅಧರ್ಮ ಎನ್ನುವ ಧೋರಣೆಯನ್ನು ಹೊಂದಿರುವ ನಮ್ಮ ಅನೇಕ ಧಾರ್ಮಿಕ ಸಂಸ್ಥೆಗಳು ಸರ್ವಾಧಿಕರಾದ ವ್ಯಸನದಿಂದ ಬಳಲುತ್ತಿವೆ. ಪೋಪ್ ಹದಿನಾರನೆ ಬೆನಡಿಕ್ಟ್ ರಾಜೀನಾಮೆ ಒಂದು ಮಾದರಿ ಪ್ರಜಾಸತ್ತಾತ್ಮಕ ಕ್ರಮ. ಇದು ಉಳಿದ ಎಲ್ಲಾ ಧರ್ಮಗುರುಗಳಿಗೆ ಪ್ರೇರಣೆಯಾಗಲಿ.

## ಧಾರ್ಮಿಕ ತಾರತಮ್ಯ : ತರಾಟೆಗೆ ತೆಗೆದುಕೊಂಡ ಯೂರೋಪಿಯನ್ ಕೋರ್ಟ್

ಬ್ರಿಟಿಷ್ ಏರ್‌ಲೈನ್ಸ್ ತನ್ನ ಕೆಲಸಗಾರರಿಗೆ ದುಡಿಯುವ ಸ್ಥಳಗಳಲ್ಲಿ ಧಾರ್ಮಿಕ ಸಂಕೇತವನ್ನು (ಶಿಲುಬೆ) ಪ್ರದರ್ಶಿಸಕೂಡದು ಎಂದು ನಿರ್ಬಂಧಿಸಿದ ಹಿನ್ನೆಲೆಯಲ್ಲಿ ಮಾನವ ಹಕ್ಕಿನ ಯೂರೋಪಿಯನ್ ಕೋರ್ಟ್ ಮೆಟ್ಟಲೇರಿದ ನಾಡಿಯಾ ಎವೇಡಾ ಎಂಬ ಕ್ರೈಸ್ತ ಮಹಿಳೆಗೆ ನ್ಯಾಯ ಒದಗಿಸಿದೆ, ಮಾತ್ರವಲ್ಲ ಕೆಲಸದಿಂದ ತೆಗೆದು ಹಾಕಿದ ಕ್ಷಣದಿಂದ ಆಕೆಗೆ ಸಿಗಬೇಕಾಗಿರುವ ಎಲ್ಲಾ ಸವಲತ್ತುಗಳನ್ನು ಒದಗಿಸಲು ಆದೇಶಿದೆ. ಒಬ್ಬರ ಧಾರ್ಮಿಕ ಹಕ್ಕನ್ನು ಮೊಟಕುಗೊಳಿಸುವ ಅಧಿಕಾರ ಯಾರಿಗೂ ಇಲ್ಲ ಎಂದಿರುವ ನ್ಯಾಯಾಲಯ, ಇದೇ ಸಂದರ್ಭದಲ್ಲಿ ಕತ್ತಿನಲ್ಲಿದ್ದ ಶಿಲುಬೆಯನ್ನು ತೆಗೆದುಹಾಕಬೇಕೆಂಬ ಆಸ್ಪತ್ರೆಯೊಂದರ ನಿರ್ದೇಶನವನ್ನು ಉಲ್ಲಂಘಿಸಿದ್ದಕ್ಕಾಗಿ ಕೆಲಸದಿಂದ ವಜಾಗೊಂಡ ದಾದಿ ಶರ್ಲಿ ಚಾಪ್ಲಿನ್‌ನ ವಿರುದ್ಧ ತೀರ್ಪು ನೀಡಿದೆ. ರೋಗಿಗಳ ಆರೋಗ್ಯದ ದೃಷ್ಟಿಯಿಂದ ಆದೇಶ ಅನಿವಾರ್ಯವಾಗಿತ್ತು ಎಂಬ ಆಸ್ಪತ್ರೆ ಆಡಳಿತ ಮಂಡಳಿಯ ವಾದವನ್ನು ಅದು ಎತ್ತಿ ಹಿಡಿದಿದೆ.


# ಪವಿತ್ರ ಊರುಗಳಿಗೆ ತೀರ್ಥಯಾತ್ರೆ

## ಇಸ್ರೇಲ್-ಜೋರ್ಡಾನ್-ಈಜಿಪ್ಟ್




ವಂದನೀಯ ಫಾ॥ ಎಲಿಯಾಸ್ ಸಿಕ್ವೆರಾ, ಚಿಕ್ಕಮಗಳೂರು
ಇವರ ಆಧ್ಯಾತ್ಮಿಕ ಮಾರ್ಗದರ್ಶನದಲ್ಲಿ ಇದೇ ಬರುವ
**ಮೇ 23 2013 ರಂದು**

11 ದಿನಗಳ ಯಾತ್ರೆ ನೊಂದಾಯಿಸಲು ಕೊನೆಯ ದಿನಾಂಕ 31.03.2013

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಫಾ॥ ಎಲಿಯಾಸ್ ಸಿಕ್ವೆರಾ : 9980182386

Riya the travel expert!

1ನೇ ಮಹಡಿ, ಇನ್‌ಲ್ಯಾಂಡ್ ಆರ್ನೆಟ್, ನವಭಾರತ್ ವೃತ್ತದ ಬಳಿ, ಕೊಡಿಯಾಲ್‌ಬೈಲ್, ಮಂಗಳೂರು.
**ಪ್ರಕಾಶ್ ಸೀಕ್ವೆರಾ : 9844005906**
**0824 4244000**
www.riyagroup.travel, Email: prakash.m@riya.travel




ಕೈ ತುಂಬಾ ಕೆಲಸವಿದ್ದವನಿಗೆ ಚಿಂತೆಯೆಂಬುದೇ ಗೊತ್ತಿಲ್ಲ.